ಮಂಗಳವಾರ, ಜೂನ್ 14, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 164 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಎರಡು ಮಳೆಗಾಲಗಳು ಅಂತೂ ಇಂತೂ ಕಳೆದವು. ಇದೀಗ ಮತ್ತೆ ಶುರು. ಇಂತಹ ವಿಷಮ ಋತು ಮತ್ತು ರೋಗಭಯದ ನಡುವೆ ನಾವೇನು ಮಾಡಬೇಕು?

ಮಧುಮೇಹಿಗಳಿಗೆ ವಿಶಿಷ್ಟ ಪಾದ'ರಕ್ಷೆ' 4

ಸಂಖ್ಯೆ-ಸುದ್ದಿ: ವಾಹನ ಮಾರಾಟ ಅಮೆಗತಿ

ಮನೆ ನೆಲಸಮ: ಹೈಕೋರ್ಟ್‌ಗೆ ಅರ್ಜಿ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
52,847	15,774	₹53,560 (ಬೆಂಗಳೂರು)	₹63,100 (ಬೆಂಗಳೂರು)	78.04

ರೆಪೊ ಏರಿಕೆ, ಎಕ್ಸೈಸ್ ಸುಂಕ ಇಳಿಕೆ ಪರಿಣಾಮ ಹಣದುಬ್ಬರ ತುಸು ಇಳಿಕೆ

ಚಿಲ್ಲರೆ ಹಣದುಬ್ಬರ ಶೇ 7.04

ನವದೆಹಲಿ (ಪಿಟಿಐ): ಏಪ್ರಿಲ್‌ನಲ್ಲಿ ಶೇಕಡ 7.79ರಷ್ಟಿದ್ದ ಚಿಲ್ಲರೆ ಹಣದುಬ್ಬರ ದರವು ಮೇ ತಿಂಗಳಿನಲ್ಲಿ ಶೇಕಡ 7.04ಕ್ಕೆ ಇಳಿಕೆಯಾಗಿದೆ. ಕೇಂದ್ರ ಸರ್ಕಾರವು ಪೆಟ್ರೋಲ್, ಡೀಸೆಲ್ ಮೇಲಿನ ಎಕ್ಸೈಸ್ ಸುಂಕ ತಗ್ಗಿಸಿದ್ದು ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರವನ್ನು ಹೆಚ್ಚಿಸಿದ್ದು ಹಣದುಬ್ಬರ ಪ್ರಮಾಣ ತುಸು ಕಡಿಮೆ ಆಗಲು ನೆರವಾಗಿವೆ.

ಹೀಗಿದ್ದರೂ, ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ದರವು ಆರ್‌ಬಿಐ ನಿಗದಿ ಮಾಡಿಕೊಂಡಿರುವ ಗರಿಷ್ಠ ಮಿತಿಗಿಂತ (ಶೇ 6) ಹೆಚ್ಚಿನ ಮಟ್ಟದಲ್ಲಿಯೇ ಉಳಿದಿದೆ. ಹಣದುಬ್ಬರವು ಸತತ ಐದು ತಿಂಗಳುಗಳಿಂದ ಶೇ 6ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿದೆ. ಹೀಗಾಗಿ, ಆಗಸ್ಟ್ ತಿಂಗಳಲ್ಲಿ ಆರ್‌ಬಿಐ ರೆಪೊ ದರವನ್ನು ಮತ್ತೊಂದು ಬಾರಿ ಹೆಚ್ಚಿಸುವ ನಿರೀಕ್ಷೆ ಇದೆ.

ಏಪ್ರಿಲ್‌ನಲ್ಲಿ ಹಣದುಬ್ಬರ ಎಂಟು ವರ್ಷಗಳ ಗರಿಷ್ಠ ಮಟ್ಟದಲ್ಲಿ ಇತ್ತು. ಆಹಾರ ವಸ್ತುಗಳ ಹಣದುಬ್ಬರ ಪ್ರಮಾಣವು ಮೇ ತಿಂಗಳಲ್ಲಿ ಶೇ 7.97ಕ್ಕೆ ಇಳಿಕೆಯಾಗಿದೆ. ಇದು ಏಪ್ರಿಲ್‌ನಲ್ಲಿ ಶೇ 8.31ರಷ್ಟು ಇತ್ತು. ಪ್ರಸಕ್ತ ಹಣಕಾಸು ವರ್ಷದಲ್ಲಿ ಹಣದುಬ್ಬರ ದರವು ಶೇ 5.7ರಷ್ಟು ಇರಲಿದೆ ಎಂದು ಈ ಮೊದಲು ಅಂದಾಜು ಮಾಡಿದ್ದ ಆರ್‌ಬಿಐ, ಈಗ ಅಂದಾಜನ್ನು ಶೇ 6.7ಕ್ಕೆ ಹೆಚ್ಚಿಸಿದೆ.

9ನೇ ಪುಟ ನೋಡಿ

ಚಿಲ್ಲರೆ ಹಣದುಬ್ಬರ – ಎಷ್ಟು ಏರಿಕೆ? (%)

ಮೇ ತಿಂಗಳ ಬೆಲೆ ಏರಿಕೆ ಪ್ರಮಾಣ

ಏಕದಳ ಧಾನ್ಯಗಳು, ಉತ್ಪನ್ನಗಳು	5.33
ಮಾಂಸ, ಮೀನು	8.23
ಎಣ್ಣೆ, ಕೊಬ್ಬಿನ ಅಂಶದ ಪದಾರ್ಥ	13.2
ತರಕಾರಿ	18.26
ಮಸಾಲೆ ಪದಾರ್ಥ	9.93
ಬಟ್ಟೆ, ಪಾದರಕ್ಷೆ	8.85
ಇಂಧನ	9.54
(ಬೆಲೆ ಇಳಿಕೆ) ಮೊಟ್ಟೆ	-4.46

ಮಾಹಿತಿ: ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯ

ಪ್ರಮುಖ ಕಂಪನಿಗಳ ಷೇರು ವಹಿವಾಟು ವಿವರ (%)



78ರ ಗಡಿ ದಾಟಿದ ರೂಪಾಯಿ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಇದೇ ಮೊದಲ ಬಾರಿಗೆ ₹ 78ರ ಗಡಿ ದಾಟಿ, ಸಾರ್ವಕಾಲಿಕ ಕನಿಷ್ಠ ಮಟ್ಟವನ್ನು ತಲುಪಿತು. ಸೋಮವಾರದ ವಹಿವಾಟಿನಲ್ಲಿ 11 ಪೈಸೆ ಇಳಿಕೆ ಕಂಡಿತು. ಜಾಗತಿಕ ಷೇರುಪೇಟೆಗಳಲ್ಲಿನ ಕುಸಿತ ಮತ್ತು ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಮೌಲ್ಯವೃದ್ಧಿ ಆಗಿರುವ ಕಾರಣಗಳಿಂದ ರೂಪಾಯಿ ಮೌಲ್ಯ ಇಳಿಕೆ ಆಗಿದೆ.

ಆರ್‌ಬಿಐನ ಮಧ್ಯಪ್ರವೇಶದ ಪರಿಣಾಮವಾಗಿ ರೂಪಾಯಿ ಮೌಲ್ಯವು ಇನ್ನಷ್ಟು ಕುಸಿತ ಕಾಣುವುದಕ್ಕೆ ತಡೆ ಬಿದ್ದಿದೆ ಎಂದು ರಿಲಯನ್ಸ್ ಸೆಕ್ಯುರಿಟೀಸ್‌ನ ಹಿರಿಯ ಸಂಶೋಧನಾ ವಿಶ್ಲೇಷಕ ಶ್ರೀರಾಮ್ ಅಯ್ಯರ್ ಹೇಳಿದ್ದಾರೆ.

ಕರಡಿ ಕುಣಿತ, ಸೆನ್ಸೆಕ್ಸ್ ಕುಸಿತ

ಮುಂಬೈ (ಪಿಟಿಐ): ಅಮೆರಿಕದ ಹಣದುಬ್ಬರ ದರವು ನಾಲ್ಕು ದಶಕಗಳ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿರುವ ಕಾರಣ, ಅಲ್ಲಿನ ಕೇಂದ್ರೀಯ ಬ್ಯಾಂಕ್ ಆಗಿರುವ ಫೆಡರಲ್ ರಿಸರ್ವ್ ಬಡ್ಡಿ ದರವನ್ನು ಇನ್ನಷ್ಟು ಹೆಚ್ಚಿಸಬಹುದು ಎಂಬ ಭೀತಿ ಹೂಡಿಕೆದಾರರಲ್ಲಿ ಮೂಡಿತು. ಇದರಿಂದಾಗಿ ಜಾಗತಿಕ ಷೇರು ಮಾರುಕಟ್ಟೆಗಳಲ್ಲಿ ಕುಸಿತ ಕಂಡುಬಂತು.

ಈ ಕುಸಿತದ ಪರಿಣಾಮವಾಗಿ ದೇಶದ ಷೇರುಪೇಟೆಗಳಲ್ಲಿಯೂ ಸೋಮವಾರ 'ಕರಡಿ ಕುಣಿತ' ಜೋರಾಗಿತ್ತು. ವಿದೇಶಿ ಬಂಡವಾಳ ಹೊರಹರಿವು ಹಾಗೂ ರೂಪಾಯಿ ಮೌಲ್ಯದ ದಾಖಲೆ ಕುಸಿತ ಸಹ ಷೇರುಪೇಟೆ ವಹಿವಾಟಿನಲ್ಲಿ ಭಾರಿ ಇಳಿಕೆಗೆ ಪ್ರಮುಖ ಕಾರಣಗಳಾದವು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 1,457 ಅಂಶ ಕುಸಿತ ಕಂಡು 52,846 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 427 ಅಂಶ ಇಳಿಕೆ ಕಂಡು 15,774 ಅಂಶಗಳಿಗೆ ತಲುಪಿತು.

9ನೇ ಪುಟ ನೋಡಿ

ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನಾ ರ್‍ಯಾಲಿಯನ್ನು ಪೊಲೀಸರು ತಡೆದಾಗ ಶಾಸಕ ಪ್ರಿಯಾಂಕ್ ಖರ್ಗೆ, ಯುವ ಕಾಂಗ್ರೆಸ್ ಅಧ್ಯಕ್ಷ ಮೊಹ್ಮದ್ ನಲಪಾಡ್ ಮತ್ತಿತರರು ಬ್ಯಾರಿಕೇಡ್ ಹತ್ತಿ ಆಕ್ರೋಶ ಹೊರಹಾಕಿದರು – ಪ್ರಜಾವಾಣಿ ಚಿತ್ರ

ರಾಹುಲ್ ಗಾಂಧಿ ವಿಚಾರಣೆ ಕಾಂಗ್ರೆಸ್–ಬಿಜೆಪಿ ಜಟಾಪಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಸೋಮವಾರ ಒಂಬತ್ತು ಗಂಟೆಗಳ ಕಾಲ ವಿಚಾರಣೆಗೆ ಒಳಪಡಿಸಿದರು. ಮಂಗಳವಾರವೂ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದಾರೆ.

ಇ.ಡಿ. ಕಚೇರಿಯಲ್ಲಿ ರಾಹುಲ್ ಅವರನ್ನು ಬೆಳಿಗ್ಗೆ 11.10ರಿಂದ ಮಧ್ಯಾಹ್ನ 2.10ರ ವರೆಗೆ ವಿಚಾರಣೆ ನಡೆಸಲಾಯಿತು. ಊಟಕ್ಕೆ ತೆರಳಿದ ರಾಹುಲ್ ಅವರು ಸೋನಿಯಾ ಗಾಂಧಿ ಅವರ ಆರೋಗ್ಯ ವಿಚಾರಿಸಿ ಮಧ್ಯಾಹ್ನ 3.30ಕ್ಕೆ ಇ.ಡಿ. ಕಚೇರಿಗೆ ಮರಳಿದರು. ರಾತ್ರಿ 10 ಗಂಟೆಯವರೆಗೂ ವಿಚಾರಣೆ ನಡೆಸಲಾಯಿತು.

ಇ.ಡಿ. ವಿಚಾರಣೆ ವಿಚಾರವು ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ಜಟಾಪಟಿಗೆ ಕಾರಣವಾಗಿದೆ.

'ನ್ಯಾಷನಲ್ ಹೆರಾಲ್ಡ್ ಪತ್ರಿಕೆಯಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ. ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳುವ ಮೂಲಕ ಕೇಂದ್ರದ ಬಿಜೆಪಿ ಸರ್ಕಾರವು ದ್ವೇಷದ ರಾಜಕಾರಣ ಮಾಡುತ್ತಿದೆ' ಎಂದು ಆರೋಪಿಸಿ ಕಾಂಗ್ರೆಸ್ ಪಕ್ಷವು ದೇಶದ ವಿವಿಧ ರಾಜ್ಯಗಳಲ್ಲಿ ಪ್ರತಿಭಟನೆ ನಡೆಸಿದೆ.

8ನೇ ಪುಟ ನೋಡಿ

'ಭ್ರಷ್ಟಾಚಾರದ ಪರ ಪ್ರತಿಭಟನೆ'

'ಕಾಂಗ್ರೆಸ್ ನಾಯಕರು ಪ್ರತಿಭಟನೆಯ ಮೂಲಕ ಇ.ಡಿಯ ಮೇಲೆ ಒತ್ತಡ ಹೇರಲು ಪ್ರಯತ್ನಿಸುತ್ತಿದ್ದಾರೆ' ಎಂದು ಕೇಂದ್ರ ಸಚಿವೆ ಸ್ಮೃತಿ ಇರಾನಿ ಆರೋಪಿಸಿದರು.

ನವದೆಹಲಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಅವರು, 'ಕಾಂಗ್ರೆಸ್ ನಾಯಕರು ಭ್ರಷ್ಟಾಚಾರವನ್ನು ಬೆಂಬಲಿಸಲು ಮತ್ತು ₹2 ಸಾವಿರ ಕೋಟಿ ಮೌಲ್ಯದ ಆಸ್ತಿ ಕಬಳಿಸಲು ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿದ್ದಾರೆ' ಎಂದು ದೂರಿದರು.

'ದೇಶದಲ್ಲಿ ನ್ಯಾಯಕ್ಕಿಂತ ಯಾರೂ ಮೇಲಿಲ್ಲ. ರಾಹುಲ್ ಗಾಂಧಿ ಕೂಡ ಇದಕ್ಕೆ ಹೊರತಲ್ಲ. ಈ ಹಿಂದೆ ಯಾವುದೇ ರಾಜಕೀಯ ಪಕ್ಷಗಳು ತನಿಖಾ ಸಂಸ್ಥೆಯ ಮೇಲೆ ಒತ್ತಡ ಹೇರುವಂತಹ ಇಂತಹ ನೀಚ ಕೆಲಸ ಮಾಡಿರಲಿಲ್ಲ. ಇದು ಕೇವಲ ಕುಟುಂಬದ ಅಕ್ರಮ ಆಸ್ತಿ ರಕ್ಷಣೆಯ ಪ್ರಯತ್ನ' ಎಂದು ಟೀಕಿಸಿದರು.

8ನೇ ಪುಟ ನೋಡಿ

ಪ್ರಾಸಿಕ್ಯೂಷನ್ ಪೂರ್ವಾನುಮತಿ ಪಡೆಯಲು ವಿಳಂಬ

ರಾಜ್ಯ ಸರ್ಕಾರಕ್ಕೆ ₹ 1 ಲಕ್ಷ ದಂಡ

ಬೆಂಗಳೂರು: ರಾಜ್ಯ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಅರವಿಂದ ಜಾಧವ್ ತಾಯಿ ಹೆಸರಿನಲ್ಲಿ ಸರ್ಕಾರಿ ಜಮೀನು ಕಬಳಿಸಲು ನಕಲಿ ದಾಖಲೆ ಸೃಷ್ಟಿಸಿದ ಪ್ರಕರಣದಲ್ಲಿ ಆರೋಪಿಯಾಗಿರುವ ಅಧಿಕಾರಿಯೊಬ್ಬರ ವಿರುದ್ಧ ಪ್ರಾಸಿಕ್ಯೂಷನ್ ಪೂರ್ವಾನುಮತಿ ಪಡೆಯಲು ವಿಳಂಬ ಮಾಡಿದ ರಾಜ್ಯ ಸರ್ಕಾರಕ್ಕೆ ₹1 ಲಕ್ಷ ದಂಡ ವಿಧಿಸಿ ಹೈಕೋರ್ಟ್ ಆದೇಶಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಡಿ.ಬಿ. ಗಂಗಯ್ಯ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ನಿವೃತ್ತ ಮುಖ್ಯ ಕಾರ್ಯದರ್ಶಿ ಸರ್ಕಾರದ 66 ಎಕರೆ ಕಬಳಿಸಲು ಯತ್ನಿಸಿದ್ದಾರೆ ಎನ್ನಲಾಗಿದೆ. 2016ರಲ್ಲೇ ದೂರು ದಾಖಲಾಗಿದ್ದರೂ ಕಠಿಣ ಕ್ರಮ ಕೈಗೊಂಡಿಲ್ಲ. ಇದು ಸರ್ಕಾರದ ಜಡತ್ವಕ್ಕೆ ಸಾಕ್ಷಿ' ಎಂದು ಕಿಡಿ ಕಾರಿದೆ.

'ದಂಡದ ಮೊತ್ತವನ್ನು ಒಂದು ವಾರದೊಳಗೆ ಠೇವಣಿ ಇಡಬೇಕು. ಪೂರ್ವಾನುಮತಿಗೆ ಕಡತಗಳನ್ನು ಕೇಂದ್ರಕ್ಕೆ ರವಾನಿಸದ ಅಧಿಕಾರಿಗಳಿಂದ ಹಣ ವಸೂಲಿ ಮಾಡಬೇಕು' ಎಂದು ಎಚ್ಚರಿಸಿದೆ. ಅರ್ಜಿದಾರರ ಪರ ಎ.ವಿ. ನಿಶಾಂತ್ ವಾದ ಮಂಡಿಸಿದರು.

ಭಾರತಕ್ಕೆ ತೈಲ: 2ನೇ ಸ್ಥಾನಕ್ಕೆ ರಷ್ಯಾ

ನವದೆಹಲಿ: ಭಾರತಕ್ಕೆ ಕಚ್ಚಾ ತೈಲ ಪೂರೈಕೆ ಮಾಡುವ ದೇಶಗಳ ಸಾಲಿನಲ್ಲಿ ಮೇ ತಿಂಗಳಲ್ಲಿ ರಷ್ಯಾ ಎರಡನೇ ಸ್ಥಾನಕ್ಕೆ ಏರಿದೆ. 9

ಪರಿಷತ್: ಬಿರುಸಿನ ಮತದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ನ ನಾಲ್ಕು ಕ್ಷೇತ್ರಗಳ ಪ್ರತಿನಿಧಿಗಳ ಆಯ್ಕೆಗೆ ಸೋಮವಾರ ಬಿರುಸಿನ ಮತದಾನ ನಡೆದಿದೆ. 11 ಜಿಲ್ಲೆಗಳ ವ್ಯಾಪ್ತಿಯಲ್ಲಿ ನಡೆದ ಮತದಾನ ಬಹುತೇಕ ಶಾಂತಿಯುತವಾಗಿ ಪೂರ್ಣಗೊಂಡಿದೆ.

ಸೋಮವಾರ ಬೆಳಿಗ್ಗೆ 8ರಿಂದ ಸಂಜೆ 5ರವರೆಗೆ ಮತದಾನ ನಡೆದಿದೆ. ಪ್ರಾಥಮಿಕ ಅಂದಾಜಿನ ಪ್ರಕಾರ, ಪಶ್ಚಿಮ ಶಿಕ್ಷಕರ ಕ್ಷೇತ್ರದಲ್ಲಿ ಅತ್ಯಧಿಕ ಶೇಕಡ 84ರಷ್ಟು ಮತಗಳ ಚಲಾವಣೆಯಾಗಿದೆ. ವಾಯವ್ಯ ಶಿಕ್ಷಕರ ಕ್ಷೇತ್ರದಲ್ಲಿ ಶೇ 80ರಷ್ಟು ಮತದಾನವಾಗಿದ್ದರೆ, ದಕ್ಷಿಣ ಪದವೀಧರರ ಕ್ಷೇತ್ರದಲ್ಲಿ ಶೇ 70ರಷ್ಟು ಮತದಾರರು ಹಕ್ಕು ಚಲಾಯಿಸಿದ್ದಾರೆ. ವಾಯವ್ಯ ಪದವೀಧರರ ಕ್ಷೇತ್ರದಲ್ಲಿ ಶೇ 59ರಷ್ಟು ಮತದಾನವಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿಯವರ ಕಚೇರಿ ಮಾಹಿತಿ ನೀಡಿದೆ.

11 ಜಿಲ್ಲೆಗಳ ವ್ಯಾಪ್ತಿಯಲ್ಲಿ ಒಟ್ಟು 417 ಮತಗಟ್ಟೆಗಳಲ್ಲಿ ಮತದಾನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ವಾಯವ್ಯ ಪದವೀಧರ ಕ್ಷೇತ್ರವನ್ನು ಹೊರತುಡಿಸಿದರೆ ಉಳಿದ ಮೂರೂ ಕ್ಷೇತ್ರಗಳಲ್ಲಿ ಬೆಳಿಗ್ಗೆಯಿಂದ ಸಂಜೆಯವರೆಗೂ ಬಿರುಸಿನ ಮತದಾನ ನಡೆಯಿತು. ವಾಯವ್ಯ ಪದವೀಧರ ಕ್ಷೇತ್ರದಲ್ಲಿ ಮತದಾನಕ್ಕೆ ತುಸು ಕಡಿಮೆ ಆಸಕ್ತಿ ವ್ಯಕ್ತವಾಯಿತು.

ಬುಧವಾರ ಎಣಿಕೆ: ನಾಲ್ಕು ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಒಟ್ಟು 49 ಅಭ್ಯರ್ಥಿಗಳ ರಾಜಕೀಯ ಭವಿಷ್ಯ ಮತ ಪೆಟ್ಟಿಗೆಗಳಲ್ಲಿ ಭದ್ರವಾಗಿದೆ. ಮತದಾನ ಅಂತ್ಯಗೊಂಡ ಬಳಿಕ ಮತ ಪೆಟ್ಟಿಗೆಗಳನ್ನು ಮೊಹರು ಮಾಡಿ, ಎಣಿಕೆ ಕೇಂದ್ರಗಳಿಗೆ ಸಾಗಿಸಲಾಗುತ್ತಿದೆ. ಬುಧವಾರ ಮತ ಎಣಿಕೆ ನಡೆಯಲಿದೆ.

ಇನ್ನಷ್ಟು ಸುದ್ದಿಗಳು 4

ಸ್ಟಾರ್, ವಯಾಕಾಮ್ ತೆಕ್ಕೆಗೆ ಐಪಿಎಲ್ ಮಾಧ್ಯಮ ಪ್ರಸಾರ ಹಕ್ಕು

ನವದೆಹಲಿ (ಪಿಟಿಐ): ವಾಲ್ಟ್ ಡಿಸ್ನಿ (ಸ್ಟಾರ್)ಸಂಸ್ಥೆ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ 2023ರಿಂದ 2027ರ ವರೆಗಿನ ಟಿವಿ ಪ್ರಸಾರ ಹಕ್ಕು ತನ್ನದಾಗಿಸಿಕೊಂಡಿದೆ. ರಿಲಯನ್ಸ್ ಇಂಡಸ್ಟ್ರೀಸ್ ಮಾಲೀಕತ್ವದ ವಯಾಕಾಮ್ 18 ಡಿಜಿಟಲ್ ಪ್ರಸಾರ ಹಕ್ಕು ಪಡೆದುಕೊಂಡಿದೆ.

ಹರಾಜು ಪ್ರಕ್ರಿಯೆಯಲ್ಲಿ ಪ್ರತಿ ಪಂದ್ಯ ₹ 107.5 ಕೋಟಿ ಮೊತ್ತಕ್ಕೆ ಮಾರಾಟವಾಗಿದೆ.

ಇಂಡಿಯನ್ ಪ್ರೀಮಿಯರ್ ಲೀಗ್

'ಟಿ.ವಿ ಪ್ರಸಾರ ಹಕ್ಕು (ಪ್ಯಾಕೇಜ್ ಎ) ₹ 23,575 ಕೋಟಿಗೆ ಮತ್ತು ಡಿಜಿಟಲ್ ಹಕ್ಕು (ಪ್ಯಾಕೇಜ್ ಬಿ) ₹ 20,500 ಕೋಟಿಗೆ ಹರಾಜಾಗಿದೆ. ಅಂದರೆ ಪ್ರತಿ ಪಂದ್ಯ ಕ್ರಮವಾಗಿ ₹ 57.5 ಹಾಗೂ ₹ 50 ಕೋಟಿಗೆ ಮಾರಾಟವಾಗಿದೆ. ಟಿ.ವಿ ಹಾಗೂ ಡಿಜಿಟಲ್ ಹಕ್ಕುಗಳ ಒಟ್ಟು ಮೌಲ್ಯ ₹ 44,075 ಕೋಟಿ ಆಗಿದೆ' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ. ಪ್ಯಾಕೇಜ್ ಸಿ (ಪ್ರತಿ ಋತುವಿನಲ್ಲಿ ಆಯ್ದ 18 ಪಂದ್ಯಗಳ ಹಕ್ಕು) ಮತ್ತು ಪ್ಯಾಕೇಜ್ ಡಿ (ವಿದೇಶದಲ್ಲಿ ಟಿ.ವಿ. ಮತ್ತು ಡಿಜಿಟಲ್ ಪ್ರಸಾರ ಹಕ್ಕು) ಹರಾಜು ಪ್ರಕ್ರಿಯೆ ಮಂಗಳವಾರ ನಡೆಯಲಿದೆ.

ಪ್ರಸಾರ ಹಕ್ಕು ತನ್ನದಾಗಿಸಿಕೊಳ್ಳಲು ವಯಾಕಾಮ್ 18, ಡಿಸ್ನಿ ಸ್ಟಾರ್, ಸೋನಿ ಮತ್ತು ಝೀ ಸಂಸ್ಥೆಗಳು ಕಣದಲ್ಲಿದ್ದವು. 10

ಡ್ರಗ್ಸ್ ಪಾರ್ಟಿ: ಬಾಲಿವುಡ್ ನಟ ಸಿದ್ಧಾಂತ್ ಕಪೂರ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟ್ರಿನಿಟಿ ವೃತ್ತ ಬಳಿಯ 'ದಿ ಪಾರ್ಕ್' ಪಂಚತಾರಾ ಹೋಟೆಲ್‌ನಲ್ಲಿ ನಡೆಯುತ್ತಿದ್ದ ಡ್ರಗ್ಸ್ ಪಾರ್ಟಿ ಮೇಲೆ ಹಲಸೂರು ಪೊಲೀಸರು ಭಾನುವಾರ ನಡುರಾತ್ರಿ ದಾಳಿ ಮಾಡಿದ್ದು, ಬಾಲಿವುಡ್ ನಟ ಶಕ್ತಿ ಕಪೂರ್ ಅವರ ಮಗ ಸಿದ್ಧಾಂತ್ (38) ಸೇರಿ ಐವರನ್ನು ಬಂಧಿಸಿದ್ದಾರೆ.

'ಹೋಟೆಲ್‌ನ ಐ-ಬಾರ್‌ನಲ್ಲಿ ಆಯೋಜಿಸಿದ್ದ ಪಾರ್ಟಿಯಲ್ಲಿ ಡ್ರಗ್ಸ್ ಪೂರೈಕೆಯಾದ ಮಾಹಿತಿ ಬಂದಿತ್ತು. ಇನ್‌ಸ್ಪೆಕ್ಟರ್ ನೇತೃತ್ವದ ತಂಡವು ರಾತ್ರಿ 12 ಗಂಟೆ ಸುಮಾರಿಗೆ ದಾಳಿ ಮಾಡಿತು. ಪಾರ್ಟಿಯಲ್ಲಿದ್ದ ಯುವತಿಯರು ಸೇರಿ 35 ಮಂದಿಯನ್ನು ವಶಕ್ಕೆ ಪಡೆದು, ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು' ಎಂದು ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ ಗುಳೇದ್ 'ಪ್ರಜಾವಾಣಿ'ಗೆ ತಿಳಿಸಿದರು.

'ಸಿದ್ಧಾಂತ್ ಕಪೂರ್, ಮೈಂಡ್ ಫೈರ್ ಸೊಲ್ಯೂಷನ್ಸ್ ಕಂಪನಿಯ ವ್ಯವಹಾರ ವ್ಯವಸ್ಥಾಪಕ ಅಖಿಲ್ ಸೋನಿ (28), ನವೋದ್ಯಮವೊಂದರ ಕಾರ್ಯಾಚರಣೆ ಮುಖ್ಯಸ್ಥ ಸಾಫ್ಟ್‌ವೇರ್ ಎಂಜಿನಿಯರ್ ಹರ್ಜೋತ್ ಸಿಂಗ್ (28), ಡಿಜಿಟಲ್ ಮಾರ್ಕೆಟಿಂಗ್ ಪ್ರತಿನಿಧಿ ಹನಿ (25) ಹಾಗೂ ಛಾಯಾಗ್ರಾಹಕ ಅಖಿಲ್ (23) ಡ್ರಗ್ಸ್ ಸೇವಿಸಿದ್ದು ದೃಢಪಟ್ಟಿದೆ. ಅವರ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದೂ ಹೇಳಿದರು.

ಸಿದ್ಧಾಂತ್ ಕಪೂರ್

ಡಿ.ಜೆ ಆಗಿದ್ದ ಸಿದ್ಧಾಂತ್: 'ಪಾರ್ಟಿಗೆ ಸಾರ್ವಜನಿಕರಿಗೆ ಮುಕ್ತ ಆಹ್ವಾನವಿತ್ತು. ಮದ್ಯ, ಊಟವಿತ್ತು. ನೃತ್ಯಕ್ಕೂ ಅವಕಾಶವಿತ್ತು. ಹೊರ ರಾಜ್ಯಗಳ ಹಾಗೂ ಬೆಂಗಳೂರಿನ ಹಲವರು ಪಾರ್ಟಿಯಲ್ಲಿ ಪಾಲ್ಗೊಂಡಿದ್ದರು. ಡಿಸ್ಕ್ ಜಾಕಿ (ಡಿ.ಜೆ) ಆಗಿ ಸಿದ್ಧಾಂತ್ ಬಂದಿದ್ದರೆಂದು ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಡಿ.ಜೆ ಹೊಣೆಯನ್ನು ಸಿದ್ಧಾಂತ್ ವಹಿಸಿಕೊಂಡಿದ್ದರು. ಅವರಿಗೆ ಸಹಾಯಕನೊಬ್ಬನಿದ್ದ. ಅವರಿಬ್ಬರ ಸಂಗೀತಕ್ಕೆ ಉಳಿದವರು ನೃತ್ಯ ಮಾಡುತ್ತಿದ್ದರು. ಪೆಡ್ಲರ್ ಒಬ್ಬ ಪಾರ್ಟಿಗೆ ಎಂಡಿಎಂಎ ಮಾತ್ರೆಗಳು ಹಾಗೂ ಗಾಂಜಾ ಪೂರೈಸಿದ್ದ' ಎಂದೂ ಮೂಲಗಳು ತಿಳಿಸಿವೆ.

3B ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಒಳ ಪುಟಗಳು

ನದಿ ಜೋಡಣೆ: ಸೂಕ್ಷ್ಮ ಪರಿಸರಕ್ಕೆ ಕುತ್ತು 4

ಕಬ್ಬಿಣ ಅದಿರು ಸಾಗಣೆಗೆ ಮಾರ್ಗಸೂಚಿ 4

'ಕೋವಿಡ್ ತೀವ್ರತೆ ಹೆಚ್ಚಿಲ್ಲ' 9

ಎಬಿಡಿಎಂ ತಂತ್ರಜ್ಞಾನ ಕೇಂದ್ರ ಸ್ಥಾಪನೆ

ಬೆಂಗಳೂರು: 'ಆಯುಷ್ಮಾನ್ ಭಾರತ ಡಿಜಿಟಲ್ ಮಿಷನ್‌ನ (ಎಬಿಡಿಎಂ) ತಂತ್ರಜ್ಞಾನ ಕೇಂದ್ರವನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಲಾಗುವುದು' ಎಂದು ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರದ (ಎನ್‌ಎಚ್‌ಎ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಆರ್.ಎಸ್. ಶರ್ಮಾ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು, 'ಎಲ್ಲ ವೈದ್ಯಕೀಯ ಸೇವೆಗಳನ್ನು ಆಯುಷ್ಮಾನ್ ಭಾರತ ಡಿಜಿಟಲ್ ಮಿಷನ್ ಅಡಿ ತರಲಾಗುತ್ತಿದೆ. ಸದ್ಯ ಕ್ಷಯಕ್ಕೆ ನಿಕ್ಷಯ್, ಲಸಿಕೆಗೆ ಕೋವಿನ್, ತಾಯಿ ಮಗುವಿಗೆ ಆರ್‌ಸಿಎಚ್ ಪೋರ್ಟಲ್ ಸೇರಿ ಹಲವು ಪೋರ್ಟಲ್‌ಗಳಿವೆ. ನೂತನ ವ್ಯವಸ್ಥೆಯಡಿ ಎಲ್ಲ ಆಸ್ಪತ್ರೆಗಳು, ವೈದ್ಯರು ನೋಂದಣಿ ಮಾಡಿಕೊಳ್ಳಬೇಕಾಗುತ್ತದೆ' ಎಂದರು.

'ಡಿಜಿಟಲೀಕರಣ ಕಾರ್ಯಕ್ಕೆ ನ್ಯಾಸ್‌ಕಾಂ ಸಂಸ್ಥೆ ನೆರವು ಪಡೆಯಲಾಗುತ್ತದೆ. ಕೋವಿನ್ ಪೋರ್ಟಲ್ ಮೂಲಕ ರಾಷ್ಟ್ರೀಯ ಲಸಿಕಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ. ಹೀಗಾಗಿ, ಸಮಗ್ರ ಆರೋಗ್ಯ ಕ್ಷೇತ್ರವನ್ನು ಡಿಜಿಟಲೀಕರಣ ಮಾಡಲಾಗುವುದು' ಎಂದು ಹೇಳಿದರು.

ಟೆಲಿಕಾಲ್ ಮೂಲಕ ಚಾಲಕರಿಗೆ ಮಾಹಿತಿ • ಸಚಿವ ಡಾ.ಕೆ. ಸುಧಾಕರ್ ಭರವಸೆ

'ಆಂಬುಲೆನ್ಸ್ ಸೇವೆ ತಿಂಗಳಲ್ಲಿ ಬದಲು'

ಪ್ರಜಾವಾಣಿ ವಾರ್ತೆ

ಡಾ.ಕೆ. ಸುಧಾಕರ್

ಬೆಂಗಳೂರು: 'ಆಂಬುಲೆನ್ಸ್ ಸೇವೆಯನ್ನು ಇನ್ನೊಂದು ತಿಂಗಳಲ್ಲಿ ಸಮಗ್ರವಾಗಿ ಬದಲಾಯಿಸಲಾಗುತ್ತದೆ. ರೋಗಿಗಳನ್ನು ಯಾವ ಆಸ್ಪತ್ರೆಗೆ ಕರೆದೊಯ್ಯಬೇಕೆಂಬ ಮಾಹಿತಿಯನ್ನು ಆಂಬುಲೆನ್ಸ್ ಚಾಲಕರಿಗೆ ಟೆಲಿಕಾಲ್ ಮೂಲಕ ಒದಗಿಸಲಾಗುವುದು. ಇದರಿಂದ ವಿಳಂಬವಿಲ್ಲದೆ ಅಗತ್ಯ ಚಿಕಿತ್ಸೆ ಒದಗಿಸಲು ಸಾಧ್ಯ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರದ ಸಹಯೋಗದಲ್ಲಿ ನ್ಯಾಸ್‌ಕಾಂ ಸಂಸ್ಥೆ ನಗರದಲ್ಲಿ ಸೋಮವಾರ ಹಮ್ಮಿಕೊಂಡ 'ಆಯುಷ್ಮಾನ್ ಭಾರತ ಡಿಜಿಟಲ್ ಮಿಷನ್' ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು. 'ಮಾನವ ಸಂಪನ್ಮೂಲ ವ್ಯವಸ್ಥೆ ಸಹಿತ ಆರೋಗ್ಯ ವಲಯದ ಸಮಗ್ರ ಮಾಹಿತಿಯನ್ನು ಕ್ರೋಡೀಕರಿಸಲಾಗುತ್ತಿದೆ. ಇದರಿಂದ ಮುಂದಿನ ದಿನಗಳಲ್ಲಿ ಗುಣಮಟ್ಟದ ಆರೋಗ್ಯ ಸೇವೆಗಳನ್ನು ಒದಗಿಸಲು ಸಾಧ್ಯವಿದೆ. 'ಆಯುಷ್ಮಾನ್ ಭಾರತ ಡಿಜಿಟಲ್ ಮಿಷನ್' ಯೋಜನೆಯಡಿ ದೇಶದ ಕಟ್ಟಕಡೆಯ ವ್ಯಕ್ತಿಗೂ ಸಮರ್ಪಕ ಆರೋಗ್ಯ ಸೇವೆ ನೀಡುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ' ಎಂದು ಹೇಳಿದರು.

'ಈ ಯೋಜನೆಯಡಿ ಪ್ರತಿಯೊಬ್ಬ ಅರ್ಹರಿಗೂ ಒಂದು ಗುರುತಿನ ಸಂಖ್ಯೆ ನೀಡಲಾಗುವುದು. ಎಲ್ಲ ವೈದ್ಯರ ಸಮಗ್ರ ದತ್ತಾಂಶ ಸಂಗ್ರಹಿಸಲಾಗುವುದು. ಈ ಮೂಲಕ ಆರೋಗ್ಯ ಕ್ಷೇತ್ರ ಕಾಡುತ್ತಿರುವ ನಕಲಿ ವೈದ್ಯರಿಗೂ ಕಡಿವಾಣ ಹಾಕಲಾಗುವುದು' ಎಂದರು.

'ಖಾಸಗಿ ಆಸ್ಪತ್ರೆಗಳು ತಮ್ಮಲ್ಲಿನ ರೋಗಿಗಳ ಮಾಹಿತಿ ಹಂಚಿಕೊಂಡರೆ, ಸುಗಮ ಆರೋಗ್ಯ ಸೇವೆ ಒದಗಿಸಲು ಬೇಕಾಗಿರುವ ಸೂಕ್ತ ವ್ಯವಸ್ಥೆಯನ್ನು ರೂಪಿಸಬಹುದು. ಈ ಬಗ್ಗೆ ಖಾಸಗಿ ಆಸ್ಪತ್ರೆಗಳ ಜತೆ ಒಡಂಬಡಿಕೆ ಮಾಡಿಕೊಳ್ಳುವುದು ಅವಶ್ಯ' ಎಂದು ಅಭಿಮತ ವ್ಯಕ್ತಪಡಿಸಿದರು.

ಆರೋಗ್ಯ : 7,500 ನವೋದ್ಯಮಗಳು

'ಕೋವಿಡ್ ಕಾಣಿಸಿಕೊಂಡ ಬಳಿಕ ಆರೋಗ್ಯ ಕ್ಷೇತ್ರದ ಚಹರೆಗಳು ಬದಲಾಗಿವೆ. ಮೊದಲ ಅಲೆ ಸಂದರ್ಭದಲ್ಲಿ ಇ-ಮಾನಸ್ ವ್ಯವಸ್ಥೆಯ ಮೂಲಕ 25 ಲಕ್ಷಕ್ಕೂ ಹೆಚ್ಚು ಜನರಿಗೆ ಕೌನ್ಸೆಲಿಂಗ್ ನೆರವು ಒದಗಿಸಲಾಗಿದೆ. ಟೆಲಿ ಮೆಡಿಸಿನ್, ಟೆಲಿ ರೇಡಿಯಾಲಜಿ, ಇ-ಸಂಜೀವಿನಿ, ಟೆಲಿ-ಸಮಾಲೋಚನೆ ಮುಂತಾದ ವ್ಯವಸ್ಥೆಗಳ ಮೂಲಕ ರಾಜ್ಯದ ಲಕ್ಷಾಂತರ ಜನರಿಗೆ ಆರೋಗ್ಯ ಸೇವೆಗಳನ್ನು ನೀಡಲಾಗಿದೆ. ಬೆಂಗಳೂರಿನಲ್ಲಿಯೇ ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ 7,500 ನವೋದ್ಯಮಗಳಿವೆ' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನ್ಯಾಸ್‌ಕಾಂ ಮುಖ್ಯಸ್ಥೆ ದೇಬಜಾನಿ ಘೋಷ್, ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಆರ್.ಎಸ್. ಶರ್ಮಾ, ಉಪಾಧ್ಯಕ್ಷ ಡಾ.ಪ್ರವೀಣ್ ಖೇತಂ, ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್, ಆಯುಕ್ತ ಡಿ. ರಂದೀಪ್ ಇದ್ದರು.

'ಬೇಸ್' ಕ್ಯಾಂಪಸ್: 20ಕ್ಕೆ ಪ್ರಧಾನಿ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗರಬಾವಿ ಸಮೀಪದ ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ'ದ (ಬೇಸ್) ನೂತನ ಕ್ಯಾಂಪಸ್ಸನ್ನು ಇದೇ 20ರಂದು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದು, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್ ಅಶ್ವತ್ಥನಾರಾಯಣ ಸೋಮವಾರ ಸ್ಥಳಕ್ಕೆ ಭೇಟಿ ನೀಡಿ ಪೂರ್ವಸಿದ್ಧತೆ ಪರಿಶೀಲಿಸಿದರು.

ಜತೆಗೆ, ಟಾಟಾ ಸಮೂಹ ಸಂಸ್ಥೆಯ ಸಹಾಯದೊಂದಿಗೆ ₹ 4.50 ಕೋಟಿಗೂ ಹೆಚ್ಚು ವೆಚ್ಚದಲ್ಲಿ ಉನ್ನತೀಕರಿಸಿರುವ 150 ಸರ್ಕಾರಿ ಐಟಿಐ ಸಂಸ್ಥೆಗಳನ್ನು ಕೂಡ ಈ ಕ್ಯಾಂಪಸ್ಸಿನಿಂದಲೇ ಪ್ರಧಾನಿ ಲೋಕಾರ್ಪಣೆ ಮಾಡಲಿದ್ದಾರೆ. ಈ ಉದ್ದೇಶದಿಂದ ಇಲ್ಲಿ ಐಟಿಐ ಸಂಸ್ಥೆಯ ಮಾದರಿ ಪ್ರತಿಕೃತಿ ಮತ್ತು ಅತ್ಯಾಧುನಿಕ ಪ್ರಯೋಗಾಲಯದ ಮಾದರಿಗಳನ್ನು ಸೃಷ್ಟಿಸಲಾಗಿದೆ.

ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ'ದ (ಬೇಸ್) ನೂತನ ಕ್ಯಾಂಪಸ್ಸಿಗೆ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್ ಅಶ್ವತ್ಥನಾರಾಯಣ ಅವರು ಸೋಮವಾರ ಭೇಟಿ ಪರಿಶೀಲಿಸಿದರು

ಸಂಸ್ಥೆಯ ಮುಖ್ಯಸ್ಥರು ಮತ್ತಿತರ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಚಿವರು ಯಾವ್ಯಾವ ವಿಭಾಗದವರು, ಯಾವ್ಯಾವ ಕೆಲಸಗಳನ್ನು ಮಾಡಬೇಕು ಎಂದು ಸೂಚಿಸಿ, ಸೂಕ್ತ ಸೂಚನೆಗಳನ್ನು ನೀಡಿದರು.

'₹ 250 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಬೇಸ್ ಕ್ಯಾಂಪಸ್, ಹೊಸ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಅಳವಡಿಕೆ ದೃಷ್ಟಿಯಿಂದಲೂ ಗಮನ ಸೆಳೆಯುತ್ತಿದೆ. ಮೋದಿಯವರ ಭೇಟಿಯ ಸಂದರ್ಭದಲ್ಲಿ ಇದನ್ನು ಕೂಡ ಬಿಂಬಿಸಲು ಯೋಜಿಸಬೇಕು. ಪ್ರಧಾನಿ ಬರುತ್ತಿರುವುದರಿಂದ ಎಲ್ಲ ವ್ಯವಸ್ಥೆ ಸಮರ್ಪಕವಾಗಿರಬೇಕು. ಇದರಲ್ಲಿ ಯಾವುದೇ ಲೋಪದೋಷಗಳಿಗೆ ಆಸ್ಪದ ಕೊಡಬಾರದು' ಎಂದರು.

ಐಟಿಐಗಳ ಲೋಕಾರ್ಪಣೆಗೆ ಮಾಡಿಕೊಂಡಿರುವ ವ್ಯವಸ್ಥೆಗಳನ್ನು ವೀಕ್ಷಿಸಿದ ಸಚಿವರು, ಪ್ರಯೋಗಾಲಯಗಳಲ್ಲಿ ಇರುವ ಆಧುನಿಕ ಸಾಧನಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್, ಕೌಶಲಾಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತ ಪಿ. ಪ್ರದೀಪ್, ಬಿಬಿಎಂಪಿ ಪಶ್ಚಿಮ ವಲಯದ ಆಯುಕ್ತ ಡಾ.ದೀಪಕ್, ಬೇಸ್ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಭಾನುಮೂರ್ತಿ, ಕುಲಸಚಿವೆ ಶೋಭಾ ಇದ್ದರು.

ವಿ.ವಿ ಆವರಣದಲ್ಲಿ ಬಿಜೆಪಿ ಫ್ಲೆಕ್ಸ್ ಹಾಕಿದ್ದು ಸರಿಯಲ್ಲ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್ ಆದೇಶ ಉಲ್ಲಂಘಿಸಿ ಬೆಂಗಳೂರು ವಿಶ್ವವಿದ್ಯಾಲಯ ಆವರಣದಲ್ಲಿ ಬಿಜೆಪಿ ಫ್ಲೆಕ್ಸ್, ಬ್ಯಾನರ್, ಬಂಟಿಂಗ್ಸ್ ಹಾಕಿದ್ದನ್ನು ಪ್ರತಿಭಟಿಸಿದ ವಿದ್ಯಾರ್ಥಿಗಳನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಸೋಮವಾರ ಭೇಟಿ ಮಾಡಿ ಚರ್ಚೆ ನಡೆಸಿದರು.

ಈ ವೇಳೆ ಮಾತನಾಡಿದ ಅವರು, 'ಬೆಂಗಳೂರು ವಿಶ್ವವಿದ್ಯಾಲಯ ಆವರಣ ಕೇಸರುಮಯವಾಗಿದೆ. ಸ್ಥಳೀಯ ಮಂತ್ರಿ ಇಲ್ಲಿನ ವಿದ್ಯಾರ್ಥಿಗಳ ವಿರುದ್ಧ ಗೂಂಡಾ ಕಾಯ್ದೆ ಪ್ರಕರಣ ದಾಖಲಿಸಲು ಪೊಲೀಸರಿಗೆ ಆದೇಶ ನೀಡಿದ್ದಾರೆ ಎಂಬ ವಿಚಾರ ತಿಳಿಯಿತು. ಈವರೆಗೂ ವಿಶ್ವವಿದ್ಯಾಲಯದ ಆವರಣವನ್ನು ಸರ್ಕಾರಿ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಲಾಗಿದೆಯೇ ಹೊರತು ರಾಜಕೀಯ ಕಾರಣಗಳಿಗೆ ಬಳಸಿಲ್ಲ' ಎಂದರು.

'ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಇಲ್ಲಿನ ಹಾಸ್ಟೆಲ್‌ಗಳಲ್ಲಿ ಉಳಿದುಕೊಂಡು ವ್ಯಾಸಂಗ ಮಾಡುತ್ತಿದ್ದಾರೆ. ನಾನು ಕೂಡ ಇಲ್ಲಿ ವಿದ್ಯಾರ್ಥಿ ನಾಯಕನಾಗಿ ಹಲವು ವರ್ಷಗಳ ಕಾಲ ಈ ವಿಶ್ವವಿದ್ಯಾಲಯದ ಜತೆ ಸಂಪರ್ಕ ಹೊಂದಿದ್ದೆ. ಇಲ್ಲಿ ಎಲ್ಲ ಪಕ್ಷದ ಹಲವು ನಾಯಕರು ತಯಾರಾಗಿದ್ದಾರೆ. ಈಗ ನಾಯಕರನ್ನು ಚಿವುಟಿ ಹಾಕುವ ಪ್ರಯತ್ನ ನಡೆಯುತ್ತಿದೆ' ಎಂದು ದೂರಿದರು.

'ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ ಕಾರಣಕ್ಕೆ ಅವರನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಸುಳ್ಳು ಪ್ರಕರಣಗಳನ್ನು ದಾಖಲಿಸಿ, ಅವಾಚ್ಯ ಶಬ್ದಗಳಿಂದ ಜಾತಿ ನಿಂದನೆ ಮಾಡಿ ಬೆದರಿಕೆ ಹಾಕಿ ಅಸಭ್ಯವಾಗಿ ನಡೆದುಕೊಂಡಿರುವುದನ್ನೂ ಗಮನಿಸಿದ್ದೇನೆ. ಆ ಮೂಲಕ ಅಧಿಕಾರ ದುರ್ಬಳಕೆ ಆಗಿದೆ. ಇದೆಲ್ಲವನ್ನು ನೋಡಿಕೊಂಡು ಕೂಡಲು ಸಾಧ್ಯವಾಗಲಿಲ್ಲ. ಈ ವಿಚಾರ ತಿಳಿಯುತ್ತಿದ್ದಂತೆ ಇಲ್ಲಿನ ವಿದ್ಯಾರ್ಥಿಗಳನ್ನು ಭೇಟಿ ಮಾಡಿ ಅವರ ನೋವು, ಸತ್ಯ ತಿಳಿಯಲು ಬಂದಿದ್ದೇನೆ' ಎಂದರು.

ಕುವೈತ್: ವಲಸಿಗರ ಪ್ರತಿಭಟನೆ, ಗಡಿಪಾರು ಶಿಕ್ಷೆ

ದುಬೈ (ಪಿಟಿಐ): ಭಾರತದಲ್ಲಿ ಪ್ರವಾದಿ ಮಹಮ್ಮದ್ ಅವರ ಅವಹೇಳನ ಖಂಡಿಸಿ ಫಹಾಹೀಲ್‌ನಲ್ಲಿ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ವಲಸಿಗರನ್ನು ಕುವೈತ್‌ನಿಂದ ಗಡಿಪಾರು ಮಾಡಲಾಗುವುದು. ದೇಶದ ಕಾನೂನನ್ನು ಉಲ್ಲಂಘಿಸಿ ಧರಣಿ ನಡೆಸಿದ ಆರೋಪದ ಮೇಲೆ ಈ ಕ್ರಮ ಕೈಗೊಳ್ಳಲಾಗುವುದು ಎಂದು ವರದಿಯಾಗಿದೆ.

ವಲಸಿಗರು ಪ್ರತಿಭಟನೆಗಳನ್ನು ನಡೆಸಬಾರದು ಎಂಬ ಷರತ್ತು ಹೊಂದಿರುವ ದೇಶದ ಕಾನೂನನ್ನು ಉಲ್ಲಂಘಿಸಿದ ಕಾರಣ, ವಲಸಿಗರನ್ನು ಕುವೈತ್‌ನಿಂದ ಗಡಿಪಾರು ಮಾಡಲಾಗುವುದು ಎಂದು ಮೂಲಗಳು ತಿಳಿಸಿರುವುದಾಗಿ 'ಅರಬ್ ಟೈಮ್ಸ್' ವರದಿ ಮಾಡಿದೆ.

ಸರ್ಕಾರದ ಸೂಚನೆಯನ್ನು ಧಿಕ್ಕರಿಸಿ ಪ್ರತಿಭಟನೆ ಆಯೋಜಿಸಿದ ಫಹಹೀಲ್ ಪ್ರದೇಶದಲ್ಲಿನ ವಲಸಿಗರನ್ನು ಬಂಧಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಪ್ರತಿಭಟನೆಯಲ್ಲಿ ನಿರತರಾಗಿದ್ದವರನ್ನು ಪತ್ತೆಹಚ್ಚಲಾಗುತ್ತಿದೆ. ಬಳಿಕ ಅವರನ್ನು ಅವರವರ ದೇಶಕ್ಕೇ ಕಳುಹಿಸಲು ಗಡಿಪಾರು ಕೇಂದ್ರಕ್ಕೆ ಕಳುಹಿಸಲಾಗುವುದು ಎಂದು ವರದಿಯಾಗಿದೆ.

ಅಪಘಾತ: ನಗರದ ವ್ಯಕ್ತಿ ಸಾವು

ಕುಣಿಗಲ್: ತಾಲ್ಲೂಕಿನ ಹುಲಿಯೂರುದುರ್ಗ ಪೊಲೀಸ್ ಠಾಣಾ ವ್ಯಾಪ್ತಿಯ ಉಂಗ್ರ ಗ್ರಾಮದ ಬಳಿ ಭಾನುವಾರ ರಾತ್ರಿ ಗೂಡ್ಸ್ ಆಟೊ ಮತ್ತು ಕಾರಿನ ನಡುವೆ ಮುಖಾಮುಖಿ ಡಿಕ್ಕಿಯಾದ ಪರಿಣಾಮ ಬೆಂಗಳೂರಿನ ಕುಂಬಳಗೋಡು ನಿವಾಸಿಯಾದ ಕಾರು ಚಾಲಕ ರವಿಚಂದ್ರ (35) ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕರ್ನಾಟಕ ಸರ್ಕಾರ
ಧಾರ್ಮಿಕ ದತ್ತಿ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಶ್ರೀ ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಾಲಯ, ಎಸ್.ಎಸ್.ಘಾಟಿ ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ
ಫೋನ್:08029550091,08029500191
ಇ–ಮೇಲ್: shrighatisubrahmanyatempleeo@gmail.com
ಸಂಖ್ಯೆ: ಎಸ್‌ಜಿಎಸ್/ಡಿವಿಎಸ್/ಸಿಆರ್/16/2022–23 ದಿನಾಂಕ: 08–06–2022
ಸಂಖ್ಯೆ: ಎಸ್‌ಜಿಎಸ್/ಡಿವಿಎಸ್/ಸಿಆರ್/17/2022–23
ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ದಿನಾಂಕ: 10–06–2022 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಶ್ರೀ ಘಾಟಿಸುಬ್ರಹ್ಮಣ್ಯಸ್ವಾಮಿ ದೇವಾಲಯಕ್ಕೆ ಅವಶ್ಯಕವಾಗಿರುವ ಮಾನವ ಸಂಪನ್ಮೂಲ ಸೇವೆಗಳಾದ ಭದ್ರತಾ ಸಿಬ್ಬಂದಿ, ಶುಚಿಗಾರರು, ಅಡುಗೆ ಸಹಾಯಕರು ಮತ್ತು ಡೇಟಾ ಎಂಟ್ರಿ ಆಪರೇಟರ್‌ಗಳು ಸೇವೆಗಳನ್ನು ಒದಗಿಸಲು ಆಸಕ್ತಿಯುಳ್ಳ ಸಂಸ್ಥೆಗಳಿಂದ ಟೆಂಡರ್‌ಗಳನ್ನು www.eproc.karnataka.gov.in ವೆಬ್‌ಸೈಟ್‌ನಲ್ಲಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ ಘಾಟಿಸುಬ್ರಹ್ಮಣ್ಯಸ್ವಾಮಿ ದೇವಾಲಯ ರವರ ಕಛೇರಿಯನ್ನು ಸಂಪರ್ಕಿಸುವುದು.
ಸಹಿ/– ಕಾರ್ಯನಿರ್ವಾಹಕ ಅಧಿಕಾರಿ
ಶ್ರೀ ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ, ಎಸ್.ಎಸ್.ಘಾಟಿ

भारतीय ताराभौतिकी संस्थान
INDIAN INSTITUTE OF ASTROPHYSICS
(विज्ञान व प्रौद्योगिकी विभाग, भारत सरकार के अधीन स्वायत्त संस्थान)
(An Autonomous Body Under Department of Science & Technology, Government of India)
2 nd Block, कोरमंगला Koramangala, बेंगलूर Bangalore - 560034.
NOTICE INVITING TENDER
Tender Notice No.54/IIA/CIVIL/CREST/HOSAKOTE/CONCERTINA COIL/2022-23 Dated 17 th May 2022.
Sealed Tenders are invited for the following work:
1. **Providing and Fixing Concertina Coil Fencing with Razor / Punched Tape Concertina Coil 600 mm Dia over existing compound wall at IIA,** CREST Campus, Hosakote, Bengaluru Rural Dist, Karnataka.
Detailed Tender Document can be downloaded from Institute's Website: **www.iiap.res.in/tenders.htm**. Last date for receipt of bid is on or before 13th July 2022 at 15:00 hours.
ADMINISTRATIVE OFFICER

ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ.,
ನಂ.14, ರಜತಾ ಭವನ, 1ನೇ ಮುಖ್ಯರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104.
ದೂ. 23300497 41159606, ಫ್ಯಾಕ್ಸ್ : 23359600, ಇ–ಮೇಲ್ : vjn@jscbl.com
ಸ್ವಾಧೀನ ಸೂಚನೆ
ನಿಯಮ 8(1)ರಡಿಯಲ್ಲಿ (ಸ್ಥಿರಾಸ್ತಿಗಳಿಗಾಗಿ)

ಡಾ॥ ರಾಮಣ್ಣ ಎಲ್. | ಶ್ರೀ. ರಾಜಕುಮಾರ್ ಡಿ.ಎ | ಶ್ರೀ. ಲೋಹಿತ್ ಬಾಬು. ಡಿ

ಕೆಳಸಹಿದಾರರು **ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ.**, ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002 ರ ಅನ್ವಯ ಮತ್ತು ಸೆಕ್ಯೂರಿಟಿ ಇಂಟ್ರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ 2002 ನಿಯಮ 3 ಅನ್ನು ಓದಿಕೊಂಡಂತೆ ಪ್ರಕರಣ 13(12)ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ ಸೂಚನೆ ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ ಸೂಚನೆಯಲ್ಲಿ ತಿಳಿಸಿರುವ ಮೊಬಲಗು **ರೂ.2,73,82,175/–(ರೂಪಾಯಿ ಎರಡು ಕೋಟಿ ಎಪ್ಪತ್ತಮೂರು ಲಕ್ಷದ ಎಂಭತ್ತೆರಡು ಸಾವಿರದ ಒಂದು ನೂರ ಎಪ್ಪತ್ತೈದು ಮಾತ್ರ)** ದಿನಾಂಕ **22.11.2021** ರಂದು ಇದ್ದಂತೆ ಪಾವತಿ ಮಾಡಲು **ಸಾಲಗಾರರ ಹೆಸರು: M/s. ತಿರುಮಲ ಹೆಲ್ತ್ ಕೇರ್**, ಸಂಖ್ಯೆ 809, ನೆಲ ಮಹಡಿ, 100 ಅಡಿ ರಸ್ತೆ, 5ನೇ ಬ್ಲಾಕ್, 3ನೇ ಹಂತ, ಬಿಎಸ್‌ಕೆ 3ನೇ ಫೇಸ್, ಬೆಂಗಳೂರು–560085 ಇದರ ಮಾಲೀಕರಾಗಿ **ಡಾ॥ ರಾಮಣ್ಣ ಎಲ್**. ಬಿನ್ ಲಿಂಗಯ್ಯನವರು ಪ್ರತಿನಿಧಿಸುತ್ತಾರೆ. ನಂ. 272, 1ನೇ ಮೈನ್, ವಿನಾಯಕ ಲೇಔಟ್, ಹನುಮಗಿರಿ ದೇವಸ್ಥಾನದ ಹತ್ತಿರ, ನಾಗರಭಾವಿ 4ನೇ ಬ್ಲಾಕ್, ಬೆಂಗಳೂರು–560072. **ಜಾಮೀನುದಾರರು: (1) ಶ್ರೀ. ರಾಜಕುಮಾರ್ ಡಿ.ಎ.** ಬಿನ್ ಲೇಟ್ ದಾಸಪ್ಪ. ನಂ.309, 6ನೇ ಕ್ರಾಸ್, 1ನೇ ಬಿ ಮೈನ್, ವಿನಾಯಕ ಲೇಔಟ್ 4ನೇ ಹಂತ, 9ನೇ ಬ್ಲಾಕ್, ನಾಗರಭಾವಿ, ಬೆಂಗಳೂರು–72. **(2) ಶ್ರೀ. ಲೋಹಿತ್ ಬಾಬು ಡಿ,** ಕೋಂ ಲೇಟ್ ದಾಸಪ್ಪ. ನಂ 141, 5ನೇ ಕ್ರಾಸ್, 9ನೇ ಬ್ಲಾಕ್, ವಿನಾಯಕ ಲೇಔಟ್, ನಾಗರಭಾವಿ 2ನೇ ಹಂತ, ಬೆಂಗಳೂರು–72. ಇವರಿಗೆ ದಿನಾಂಕ: **25.11.2021** ರಂದು ಡಿಮ್ಯಾಂಡ್ ನೋಟಿಸ್‌ನ್ನು ನೀಡಲಾಗಿತ್ತು.

ಸಾಲಗಾರರು/ಸಹ–ಸಾಲಗಾರರು/ಜಾಮೀನುದಾರರು/ಅಡಮಾನುದಾರರು ಸದರಿ ಮೊಬಲಗನ್ನು ಮರುಪಾವತಿಸದೇ ಇರುವುದರಿಂದ ಈ ಕೆಳಗೆ ಸಹಿ ಮಾಡಿರುವವರು ಕೆಳಗೆ ವಿವರಿಸಲಾದ ಆಸ್ತಿಯನ್ನು ಈ ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್ 13(8) ರೊಂದಿಗೆ ನಿಯಮ 8ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ **ದಿನಾಂಕ: 08.06.2022** ರಂದು ಸ್ವಾಧೀನ ಪಡಿಸಿಕೊಳ್ಳಲಾಗಿದೆ ಎಂದು ಸಾಲಗಾರರಿಗೆ ಈ ಮೂಲಕ ತಿಳಿಯಪಡಿಸಿದೆ.

ನಿರ್ದಿಷ್ಟವಾಗಿ ಸಾಲಗಾರರು/ಜಾಮೀನುದಾರರು/ಅಡಮಾನುದಾರರು ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಕೆಳಗೆ ವಿವರಿಸಿದ ಆಸ್ತಿಯೊಂದಿಗೆ ವ್ಯವಹರಿಸದಂತೆ ಈ ಮೂಲಕ ಎಚ್ಚರಿಸುತ್ತಿದ್ದೇವೆ ಹಾಗೂ ಅಂತಹ ಯಾವುದೇ ವ್ಯವಹಾರಗಳು **ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ., ವಿಜಯನಗರ ಶಾಖೆ, ಬೆಂಗಳೂರು–560104,** ಇವರಿಗೆ ಸಂದಾಯವಾಗತಕ್ಕ ಮೊಬಲಗು **ರೂ. 2,93,52,784/– (ರೂಪಾಯಿ ಎರಡು ಕೋಟಿ ತೊಂಭತ್ತಮೂರು ಲಕ್ಷದ ಐವತ್ತೆರಡು ಸಾವಿರದ ಏಳುನೂರಾ ಎಂಭತ್ತನಾಲ್ಕು ಮಾತ್ರ) ದಿನಾಂಕ: 31.05.2022** ರಿಂದ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ.

ಸಾಲಗಾರರ ಗಮನಕ್ಕೆ ತರುವುದೇನೆಂದರೆ ಭದ್ರತಾ ಸ್ವತ್ತುಗಳನ್ನು ಹಿಂಪಡೆಯುವ ಕಾಲಾವಕಾಶ ಉಪ ಕಾಯಿದೆ 8 ಮತ್ತು ಕಾಯಿದೆಯ ಸೆಕ್ಷನ್ 13ರ ಅನ್ವಯ ಇರುತ್ತದೆ.

ಆಧಾರ ಮಾಡಿದ ಆಸ್ತಿಗಳ ವಿವರಗಳು ಮತ್ತು ಸಾಲಗಾರನ ಅಡಮಾನದ ಆಸ್ತಿಗಳ ವಿವರಗಳು :

ಲೋಹಿತ್‌ಬಾಬು ಡಿ ರವರಿಗೆ ಸೇರಿದ ಆಸ್ತಿ : ವಾಸಯೋಗ್ಯ ಖಾಲಿ ನಿವೇಶನ ನಂ.508, ಇಂಟರ್ ಮೀಡಿಯೆಟ್(ಬಿಬಿಎಂಪಿ ಖಾತಾ ನಂ.969/508) ನಾಗರಭಾವಿ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ವಿನಾಯಕ ಲೇಔಟ್‌ನ ನಂ. 78A-01G, ಸರ್ವೆ ನಂ.17, 18/1 ರಿಂದ 6, 20, 23, 30, 31, 32, 36/1, 37, 64, 71, 95, 96, 97, 98, 112 (19), 135 ರಿಂದ 137 (17)ರಲ್ಲಿ ರಚಿಸಲ್ಪಟ್ಟಿರುವ ವಿನಾಯಕ ಹೌಸ್ ಬಲ್ಡಿಂಗ್ ಕೋ–ಆಪರೇಟಿವ್ ಸೊಸೈಟಿ.ಲಿ., ರಲ್ಲಿ ರೂಪಿಸಲ್ಪಟ್ಟಿದೆ ಮತ್ತು ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 40.00 ಉತ್ತರದಿಂದ ದಕ್ಷಿಣಕ್ಕೆ 60.00 ಅಡಿ ಮತ್ತು ಇದರ ಚಕ್ಕುಬಂದಿ : ಪೂರ್ವಕ್ಕೆ: ನಿವೇಶನ ನಂ.509, ಪಶ್ಚಿಮಕ್ಕೆ: ನಿವೇಶನ ನಂ.507, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ನಿವೇಶನ ನಂ.523.

ಶ್ರೀ ರಾಜ್‌ಕುಮಾರ್ ಡಿ ಎ ರವರಿಗೆ ಸೇರಿದ ಆಸ್ತಿ : ವಾಸಯೋಗ್ಯ ಖಾಲಿ ನಿವೇಶನ ನಂ.524, (ಬಿಬಿಎಂಪಿ ಖಾತಾ ನಂ.989/524) ನಾಗರಭಾವಿ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು, ವಿನಾಯಕ ಲೇಔಟ್‌ನ ನಂ. 78A-01G, ಸರ್ವೆ ನಂ.17, 18/1 ರಿಂದ 6, 20, 23, 30, 31, 32, 36/1, 37, 64, 71, 95, 96, 97, 98, 112(19), 135 ರಿಂದ 137(17) ರಲ್ಲಿ ರಚಿಸಲ್ಪಟ್ಟಿರುವ ವಿನಾಯಕ ಹೌಸ್ ಬಲ್ಡಿಂಗ್ ಕೋ–ಆಪರೇಟಿವ್ ಸೊಸೈಟಿ.ಲಿ., ರಲ್ಲಿ ರೂಪಿಸಲ್ಪಟ್ಟಿದೆ ಮತ್ತು ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 40.00 ಉತ್ತರದಿಂದ ದಕ್ಷಿಣಕ್ಕೆ 60.00 ಅಡಿ ಮತ್ತು ಇದರ ಚಕ್ಕುಬಂದಿ : ಪೂರ್ವಕ್ಕೆ: ನಿವೇಶನ ನಂ.523, ಪಶ್ಚಿಮಕ್ಕೆ: ನಿವೇಶನ ನಂ.525, ಉತ್ತರಕ್ಕೆ: ನಿವೇಶನ ನಂ.508, ದಕ್ಷಿಣಕ್ಕೆ: ರಸ್ತೆ,

ದಿನಾಂಕ : 08.06.2022
ಸ್ಥಳ : ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿ
ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ.,

With all your best wishes the organisation is celebrating 25 years of service
The Classic KAS & IAS Study Circle
The Classic Study Circle, Dharwad SINCE 1997 www.classicedu.in
ಸತತ 25 ವರ್ಷಗಳಿಂದ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಯಶಸ್ವಿಯಾಗಿ ತರಬೇತಿ ನೀಡುತ್ತಿರುವ ರಾಜ್ಯದ ಪ್ರತಿಷ್ಠಿತ ಅಧ್ಯಯನ ಕೇಂದ್ರ
Unit - A : ಸಪ್ತಾಪುರ ಬಾವಿ ಸರ್ಕಲ್ | Unit - B : ಶಾರದಾ ಸ್ಕೂಲ್ ಹತ್ತಿರ, ಧಾರವಾಡ Cell: 9980552080
ಕ್ಲಾಸಿಕ್ ಸಂಸ್ಥೆಯ 25ನೇ ವರ್ಷದ ಹೆಮ್ಮೆಯ ಕೊಡುಗೆ
ಸ್ಪರ್ಧಾತ್ಮಕ ಪರೀಕ್ಷೆಗಳ ನಿರಂತರ ಮಾಹಿತಿ ಹಾಗೂ ಆನ್‌ಲೈನ್ ತರಬೇತಿಗಾಗಿ
Classic Education
Digital Learning App
ಇಂದೇ ಡೌನ್‌ಲೋಡ್ ಮಾಡಿಕೊಳ್ಳಿ, ನಿಮ್ಮ ಕನಸನ್ನು ನನಸಾಗಿಸಿಕೊಳ್ಳಿ.
ಕ್ಲಾಸಿಕ್ ಎಜ್ಯುಕೇಶನ್ ಆ್ಯಪ್‌ನ ವಿಶೇಷತೆಗಳು
- ಮಾದರಿ ಪರೀಕ್ಷೆ (Model Exam)
- ಸ್ಪರ್ಧಾತ್ಮಕ ಪರೀಕ್ಷೆಗಳ ಸಮಗ್ರ ಮಾಹಿತಿ
- ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ
- ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ (Online & Offline)
- ಉದ್ಯೋಗ ಮಾಹಿತಿ
- ಸಾಧಕರ ಸಂದರ್ಶನಗಳು
- ಅಧ್ಯಯನ ಸಾಮಾಗ್ರಿಗಳ ಮಾಹಿತಿ
- ಪ್ರಚಲಿತ ವಿದ್ಯಮಾನಗಳ ಮಾಹಿತಿ
Classic Education App QR Code
ಸ್ಪರ್ಧಾ ಸ್ಫೂರ್ತಿ ಪ್ರಕಾಶನದ ಪತ್ರಿಕೆಗಳು ಮತ್ತು ಪುಸ್ತಕಗಳು (Online & Offline) ನಲ್ಲಿ ಲಭ್ಯ
GET IT ON Google Play
ರಜತ ಮಹೋತ್ಸವದ ಸಂಭ್ರಮದಲ್ಲಿ ಸ್ಪರ್ಧಾರ್ಥಿಗಳಿಗೆ ಸುವರ್ಣಾವಕಾಶ
Free Offer - Hurry Up ! Limited Seats !
Classic App ಡೌನ್‌ಲೋಡ್ ಮಾಡಿಕೊಂಡವರಿಗೆ KAS, IAS & Banking ಪರೀಕ್ಷೆಗಳಿಗಾಗಿ 1 month Crash Course ಉಚಿತ ತರಬೇತಿ ನೀಡಲಾಗುವುದು. ಸೀಮಿತ ಸೀಟುಗಳಿರುವುದರಿಂದ ನಿಮ್ಮ ಹೆಸರನ್ನು ಇಂದೇ ನೋಂದಾಯಿಸಿಕೊಳ್ಳಿ. ಸಂಪರ್ಕಕ್ಕಾಗಿ : 9980552080/81
ಸಂಸ್ಥೆಯ ಧಾರವಾಡ ಕೇಂದ್ರದಲ್ಲಿ ಹೊಸ ಬ್ಯಾಚ್‌ಗಳು ಪ್ರಾರಂಭ
IAS/KAS Prelims & Mains English Medium 6 Batches in progress
Bank PO English Medium 2 Batches in progress Fresh Batch starts from 20-06-2022
KAS/PSI Kannada and English Medium 15 Batches in progress
PDO/PC Kannada Medium 4 Batches in progress Fresh Batch starts from 10-07-2022
ಕಲಬುರಗಿ ಶಾಖೆಯಲ್ಲಿ ಜುಲೈ 3ರಂದು KAS|PSI ಕುರಿತು ಉಚಿತ ಕಾರ್ಯಾಗಾರ @ 10am ಜುಲೈ 5ರಂದು ಹೊಸ ಬ್ಯಾಚ್ ಪ್ರಾರಂಭ M: 9900018403
ಬೆಂಗಳೂರು ಶಾಖೆಯಲ್ಲಿ ಜುಲೈ 3ರಂದು KAS|PSI ಕುರಿತು ಉಚಿತ ಕಾರ್ಯಾಗಾರ @ 10am ಜುಲೈ 5ರಂದು ಹೊಸ ಬ್ಯಾಚ್ ಪ್ರಾರಂಭ M:9606064876
ಕ್ಲಾಸಿಕ್ ಮಾದರಿ ಪರೀಕ್ಷೆ (Classic Model Tests)
IAS, KAS, PSI, PC, Bank PO (Online & Offline)
in English & Kannada Medium on every Sunday from 10 am
ಕ್ಲಾಸಿಕ್ ಸಂಸ್ಥೆಯ ಧಾರವಾಡ ಕೇಂದ್ರ, ಬೆಂಗಳೂರು ಹಾಗೂ ಕಲಬುರಗಿ ಶಾಖೆಗಳಲ್ಲಿ ಪ್ರತಿ ರವಿವಾರ ಬೆಳಿಗ್ಗೆ 10 ರಿಂದ ಮಾಹಿತಿಗಾಗಿ ಕರೆ ಮಾಡಿರಿ
ಧಾರವಾಡ: 9980552080 | ಬೆಂಗಳೂರು: 9606064876 | ಕಲಬುರಗಿ: 6366395426
ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗೆ ರಾಜ್ಯಾದ್ಯಂತ ಹೆಸರುವಾಸಿಯಾದ ಕನ್ನಡ ಮಾಸಪತ್ರಿಕೆ- ಸ್ಪರ್ಧಾ ಸ್ಫೂರ್ತಿ
ಸ್ಪರ್ಧಾ ಸ್ಫೂರ್ತಿ ಪ್ರಕಾಶನದ ಹೆಮ್ಮೆಯ ಪ್ರಕಟಣೆಗಳು
ಜೂನ್ ಸಂಚಿಕೆಗಳು ಈಗ ಮಾರುಕಟ್ಟೆಯಲ್ಲಿ ಲಭ್ಯ
- ಸ್ಪರ್ಧಾ ಸ್ಫೂರ್ತಿ ಕನ್ನಡ ಮಾಸಪತ್ರಿಕೆ
- Competition Vision English Magazine
- ಕ್ಲಾಸಿಕ್ ಇಯರ್ ಬುಕ್–2022
- KAS ಪರೀಕ್ಷೆಯ ಪತ್ರಿಕೆ-1, ಪತ್ರಿಕೆ-2 ಪುಸ್ತಕಗಳು
- PC & PSI ಪುಸ್ತಕಗಳು & ಪ್ರಶ್ನೆ ಪತ್ರಿಕೆಗಳ ಕೈಪಿಡಿ
- ಕಂಪ್ಯೂಟರ್ ಅಧ್ಯಯನ (Computer Studies)
ಈಗ ರಾಜ್ಯಾದ್ಯಂತ ಎಲ್ಲ ಪುಸ್ತಕ ಮಳಿಗೆಗಳಲ್ಲಿ ಲಭ್ಯ.
ಹೆಚ್ಚಿನ ಮಾಹಿತಿಗಾಗಿ : 9980552082
ADMISSIONS ARE OPEN
Classic Educational & Cultural Development Society's
Classic International Public School (CIPS)
Affiliated to CISCE New Delhi | Affiliation Code : KA412 Pre-Nursery, Nursery, LKG, UKG & 1st to 10th class (ICSE)
Opp.Tapovana, Kyarakoppa Road, Dharwad Tel: 0836-2775791 Cell: 8197049780/81
Classic PU College, Dharwad (Science, Commerce & Arts)
E-Square Building, Saptapur Bavi Circle, Dharwad Cell: 9606064879 (PU)
Classic Degree College, Dharwad (B.Sc.|B.Com.|BA)
E-Square Building, Saptapur Bavi Circle, Dharwad 9606064880 (Degree)
Classic Education YouTube Channel
Regular Online guidance for all competitive exams
Shri. Laxman S. Uppar BE., CLASSIC GROUP OF ORGANISATIONS & DIRECTOR, UNION BANK OF INDIA

• ಸಂಸ್ಕರಿಸಿದ ತ್ಯಾಜ್ಯ ನೀರು ಪುನರ್ ಬಳಕೆ ಹೆಚ್ಚಿಸಲು ಮಹತ್ವಾಕಾಂಕ್ಷಿ ಯೋಜನೆ
• ಈಗ ಶೇ 50ರಷ್ಟು ಸಂಸ್ಕರಿಸಿದ ನೀರಷ್ಟೆ ಮರು ಬಳಕೆ

ವೃಷಭಾವತಿ ತ್ಯಾಜ್ಯ ನೀರು ಇನ್ನು ಕೃಷಿಗೆ ಜೀವಜಲ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ನಗರದಲ್ಲಿ ಸಂಸ್ಕರಣೆಯಾಗುತ್ತಿರುವ ತಾಜ್ಯ ನೀರು ಶೇ 50ರಷ್ಟು ಮಾತ್ರ ಮರು ಬಳಕೆಯಾಗುತ್ತಿದ್ದು, ಮರು ಬಳಕೆ ಇನ್ನಷ್ಟು ಹೆಚ್ಚಿಸಲು ಜಲ ಮಂಡಳಿ ಮತ್ತು ಸಣ್ಣ ನೀರಾವರಿ ಇಲಾಖೆ ಜಂಟಿಯಾಗಿ ಯೋಜನೆ ರೂಪಿಸಿವೆ.

ಬೆಳೆಯುತ್ತಿರುವ ಬೆಂಗಳೂರಿನಲ್ಲಿ ಬಳಕೆಯಾಗುವ ನೀರನ್ನು ಶುದ್ಧೀಕರಿಸಲು ನಗರದಲ್ಲಿ 36 ತಾಜ್ಯ ನೀರು ಶುದ್ಧೀಕರಣ ಘಟಕಗಳು(ಎಸ್‌ಟಿಪಿ) ಇವೆ. 1,523 ಎಂಎಲ್‌ಡಿ (152.3 ಕೋಟಿ ಲೀಟರ್) ತ್ಯಾಜ್ಯ ನೀರು ಶುದ್ಧೀಕರಿಸುವ ಸಾಮರ್ಥ್ಯವನ್ನು ಜಲ ಮಂಡಳಿ ಹೊಂದಿದ್ದು, ಸದ್ಯ 1,190 ಎಂಎಲ್‌ಡಿ ನೀರು ಶುದ್ಧೀಕರಣವಾಗುತ್ತಿದೆ.

ಶುದ್ಧೀಕರಿಸಿದ ಶೇ 50ರಷ್ಟು ನೀರು ಮಾತ್ರ ಮರು ಬಳಕೆಯಾಗುತ್ತಿದ್ದು, ಇನ್ನುಳಿದ ನೀರು ಶುದ್ಧೀಕರಣಗೊಂಡರೂ ಬಳಕೆಯಾಗದೆ ರಾಜಕಾಲುವೆ ಗಳಲ್ಲಿ ಹರಿಯುತ್ತಿದೆ. ನಗರದಲ್ಲಿ ಹರಿಯುವ ಮೂರು ಕಣಿವೆಗಳಲ್ಲಿ ಹೆಬ್ಬಾಳ ಮತ್ತು ಕೆ.ಸಿ(ಕೋರಮಂಗಲ-ಚೆಲ್ಲಘಟ್ಟ) ಕಣಿವೆಯಲ್ಲಿ ಮಾತ್ರ ಶುದ್ಧೀಕರಣಗೊಂಡ ನೀರು ಸುತ್ತಮುತ್ತಲ ಕೃಷಿ ಭೂಮಿಗೆ ಬಳಕೆಯಾಗುತ್ತಿದೆ.

ಹೆಬ್ಬಾಳ ಕಣಿವೆಯಿಂದ ಚಿಕ್ಕಬಳ್ಳಾಪುರ ಜಿಲ್ಲೆಗೆ 150 ಎಂಎಲ್‌ಡಿ, ಕೆ.ಸಿ ಕಣಿವೆಯಿಂದ ಕೋಲಾರ ಜಿಲ್ಲೆಗೆ 150 ಎಂಎಲ್‌ಡಿ ಮತ್ತು ಆನೆಕಲ್ ಭಾಗಕ್ಕೆ 60 ಎಂಎಲ್‌ಡಿ ನೀರು ಕೃಷಿಗೆ ಪೂರೈಕೆಯಾಗುತ್ತಿದೆ. ಶುದ್ಧೀಕರಿಸಿದ ನೀರು ಪೂರೈಕೆ ಮಾಡುವುದು ಜಲ ಮಂಡಳಿ ಕೆಲಸವಾದರೆ, ನೀರು ಸಾಗಿಸಲು ಬೇಕಿರುವ ಪೈಪ್‌ಲೈನ್ ವ್ಯವಸ್ಥೆಯನ್ನು ಸಣ್ಣ ನೀರಾವರಿ ಇಲಾಖೆ ಮಾಡಿಕೊಂಡಿದೆ.

ವೃಷಭಾವತಿ ಕಣಿವೆ ನೀರು ಮಾತ್ರ ಈವರೆಗೆ ಕೃಷಿಗೆ ಮರು ಬಳಕೆಯಾಗುತ್ತಿಲ್ಲ. ಈ ಕಣಿವೆಯಿಂದ ನೆಲಮಂಗಲ ಮತ್ತು ದೊಡ್ಡಬಳ್ಳಾಪುರ ಭಾಗಕ್ಕೆ 308 ಎಂಎಲ್‌ಡಿ, ಬಿಡದಿ ಮತ್ತು ರಾಮನಗರ ಭಾಗಕ್ಕೆ 155 ಎಂಎಲ್‌ಡಿ ನೀರು ಹರಿಸಲು ಜಲ ಮಂಡಳಿ ಸಮ್ಮತಿಸಿದೆ. ಅದಕ್ಕೆ ಬೇಕಿರುವ ಪೈಪ್‌ಲೈನ್ ವ್ಯವಸ್ಥೆ ಮಾಡಿಕೊಳ್ಳಲು ಸಣ್ಣ ನೀರಾವರಿ ಇಲಾಖೆ ಈಗ ಮುಂದಾಗಿದ್ದು, ಕಾಮಗಾರಿ ಕೈಗೆತ್ತಿಕೊಳ್ಳಲು ಯೋಜನೆ ರೂಪಿಸಿದೆ. ಈ ಯೋಜನೆ ಪೂರ್ಣಗೊಂಡರೆ ಬೆಂಗಳೂರಿನಲ್ಲಿ ಶುದ್ಧೀಕರಿಸುತ್ತಿರುವ ನೀರಿನಲ್ಲಿ ಶೇ 85ರಷ್ಟು ನೀರು ಮರು ಬಳಕೆಯಾದಂತೆ ಆಗಲಿದೆ ಎನ್ನುತ್ತಾರೆ ಜಲ ಮಂಡಳಿ ಮುಖ್ಯ ಎಂಜಿನಿಯರ್(ತಾಜ್ಯನೀರು ನಿರ್ವಹಣೆ) ಜಿ.ಸಿ. ಗಂಗಾಧರ್.

1,450 ಎಂಎಲ್‌ಡಿ
ನಗರಕ್ಕೆ ಸರಬರಾಜಾಗುತ್ತಿರುವ ಕಾವೇರಿ ನೀರು

10.50 ಲಕ್ಷ	**11,680** ಕಿಲೋ ಮೀಟರ್	**39**	**1,190** ಎಂಎಲ್‌ಡಿ
ನೀರು ಪೂರೈಕೆಯಾಗುತ್ತಿರುವ ಮನೆಗಳ ಸಂಖ್ಯೆ	ಒಟ್ಟಾರೆ ನೀರಿನ ಪೈಪ್‌ಲೈನ್ ಉದ್ದ	ನಗರದಲ್ಲಿರುವ ಎಸ್‌ಟಿಪಿಗಳ ಸಂಖ್ಯೆ	ಶುದ್ಧೀಕರಣವಾಗುತ್ತಿರುವ ನೀರಿನ ಪ್ರಮಾಣ

ತ್ಯಾಜ್ಯ ನೀರು ಸಂಸ್ಕರಣಾ ಘಟಕ

ಕೈತೋಟ, ಶೌಚಾಲಯಕ್ಕೆ ನೀರು ಮರು ಬಳಕೆ

ಶುದ್ಧೀಕರಿಸಿದ ನೀರನ್ನು ಟ್ಯಾಂಕರ್ ಮತ್ತು ಪೈಪ್‌ಲೈನ್ ಮೂಲಕ ಅಗತ್ಯ ಇದ್ದವರಿಗೆ ಜಲ ಮಂಡಳಿ ಪೂರೈಕೆ ಮಾಡುತ್ತಿದೆ. 6 ಸಾವಿರ ಲೀಟರ್ ನೀರಿಗೆ ₹360 ದರ ನಿಗದಿ ಮಾಡಿದೆ.

ಕಟ್ಟಡಗಳ ನಿರ್ಮಾಣ, ಕೈತೋಟ, ಶೌಚಾಲಯ, ದೊಡ್ಡ ಕಟ್ಟಡಗಳಲ್ಲಿ ನೆಲ ಸ್ವಚ್ಛಗೊಳಿಸಲು, ಹವಾನಿಯಂತ್ರಣ ಯಂತ್ರಗಳಿಗೆ ಬಳಸಲಾಗುತ್ತಿದೆ. ರಾಜಭವನ, ಸರ್ಕಾರಿ ಕಚೇರಿಗಳು, ಕಬ್ಬನ್ ಉದ್ಯಾನ, ಲಾಲ್‌ಬಾಗ್, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶುದ್ಧೀಕರಿಸಿದ ನೀರನ್ನು ಕೈತೋಟ ಮತ್ತು ಶೌಚಾಲಯಗಳಲ್ಲಿ ಮರು ಬಳಕೆ ಮಾಡಲಾಗುತ್ತಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಿಗದಿಪಡಿಸಿರುವ ಮಾನದಂಡಗಳ ಪ್ರಕಾರ ನೀರಿನ ಗುಣಮಟ್ಟ ಕಾಯ್ದುಕೊಳ್ಳಲಾಗುತ್ತಿದೆ ಎಂದು ಜಲ ಮಂಡಳಿ ತಿಳಿಸಿದೆ.

ಹೊಸ ಐದು ಎಸ್‌ಟಿಪಿ

ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನದಲ್ಲಿ ಅಮೃತ್ ಯೋಜನೆಯಡಿ ಹೊಸದಾಗಿ ಐದು ತಾಜ್ಯ ನೀರು ಸಂಸ್ಕರಣಾ ಘಟಕಗಳು ನಗರದಲ್ಲಿ ನಿರ್ಮಾಣವಾಗುತ್ತಿವೆ.

ಅಗರ, ಸಾರಕ್ಕಿ, ಹುಳಿಮಾವು, ಚಿಕ್ಕಬೇಗೂರು ಮತ್ತು ಕೆ.ಆರ್.ಪುರದಲ್ಲಿ ಈ ಘಟಕಗಳು ಆರಂಭವಾಗುತ್ತಿವೆ. ಅಲ್ಲದೇ ಕೋರಮಂಗಲದಲ್ಲಿ ಹೆಚ್ಚುವರಿಯಾಗಿ ಒಂದು ಮಧ್ಯವರ್ತಿ ತ್ಯಾಜ್ಯ ನೀರು ಪಂಪಿಂಗ್ ಘಟಕ ಮತ್ತು ಆರು ಕಡೆ ತ್ಯಾಜ್ಯ ನೀರು ಹರಿಯುವ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ₹673 ಕೋಟಿ ವೆಚ್ಚದಲ್ಲಿ ನಡೆಯುತ್ತಿದೆ.

ಕೇಂದ್ರ ಸರ್ಕಾರದಿಂದ ಶೇ 33, ರಾಜ್ಯ ಸರ್ಕಾರದಿಂದ ಶೇ 20ರಷ್ಟು ಅನುದಾನ ದೊರೆತಿದ್ದು, ಬಾಕಿ ಶೇ 47ರಷ್ಟು ಅನುದಾನವನ್ನು ಜಲ ಮಂಡಳಿ ಭರಿಸಿಕೊಂಡಿದೆ. ಪೈಪ್‌ಲೈನ್ ಕಾಮಗಾರಿ ಹೊರತಾಗಿ ಉಳಿದ ಎಲ್ಲಾ ಕಾಮಗಾರಿಗಳನ್ನೂ 2022ರ ಜುಲೈ ಅಂತ್ಯಕ್ಕೆ ಪೂರ್ಣಗೊಳಿಸುವ ಉದ್ದೇಶವನ್ನು ಜಲ ಮಂಡಳಿ ಹೊಂದಿದೆ.

2,400 ಕೋಟಿ ಲೀಟರ್ ಮಳೆ ನೀರು ಸಂಗ್ರಹ

ಮಳೆ ನೀರು ಸಂಗ್ರಹ ಕಾರ್ಯವನ್ನು ಜಲ ಮಂಡಳಿ 2009ರಿಂದ ಆರಂಭಿಸಿದ್ದು, 1.70 ಲಕ್ಷ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹಿಸಲಾಗುತ್ತಿದೆ ಎಂದು ಜಲ ಮಂಡಳಿ ತಿಳಿಸಿದೆ.

2,400 ಕೋಟಿ ಲೀಟರ್ ಮಳೆ ನೀರು ಸಂಗ್ರಹಿಸಲಾಗುತ್ತಿದ್ದು, ದಿನಕ್ಕೆ ಸರಾಸರಿ 6.5 ಕೋಟಿ ಲೀಟರ್ ಮಳೆ ನೀರು ಸಂಗ್ರಹವಾದಂತೆ ಆಗಲಿದೆ ಎಂಬುದನ್ನು ಜಲ ಮಂಡಳಿ ಅಂಕಿ-ಅಂಶಗಳು ಹೇಳುತ್ತವೆ.

ಪದವಿ, ಪಿಜಿ ಕೋರ್ಸ್‌ಗಳಿಗೆ ಆನ್‌ಲೈನ್ ಪ್ರವೇಶ

ಬೆಂಗಳೂರು: ಈ ಶೈಕ್ಷಣಿಕ ಸಾಲಿನಲ್ಲಿ (2022-23) ಪ್ರಥಮ ವರ್ಷದ ಪದವಿ ಮತ್ತು ಸ್ನಾತಕೋತ್ತರ ಪದವಿ (ಪಿಜಿ) ಕೋರ್ಸುಗಳಿಗೆ ಸೇರಿಕೊಳ್ಳುವ ವಿದ್ಯಾರ್ಥಿಗಳ ಪ್ರವೇಶಾತಿ ಪ್ರಕ್ರಿಯೆಯನ್ನು ಆನ್‌ಲೈನ್ ವಿಧಾನದ ಮೂಲಕವೇ ನಡೆಸಬೇಕು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಸೂಚಿಸಿದ್ದಾರೆ.

'ಈ ಉದ್ದೇಶಕ್ಕಾಗಿ ಕಾಲೇಜು ಶಿಕ್ಷಣ ಇಲಾಖೆ, ವಿಶ್ವವಿದ್ಯಾಲಯಗಳು ಮತ್ತು ವಿಶ್ವವಿದ್ಯಾಲಯ ಕಾಲೇಜುಗಳು https://uucms.karnataka.gov.in/ ವಿಳಾಸವನ್ನು ತಮ್ಮ ವೆಬ್ ಸೈಟ್‌ಗಳಲ್ಲಿ ಲಿಂಕ್ ಮಾಡಿ, ಲಭ್ಯವಾಗುವಂತೆ ಮಾಡಬೇಕು. ಜತೆಗೆ ಎಲ್ಲ ಕಾಲೇಜುಗಳೂ ಪ್ರವೇಶಾತಿಗೆ ಸಂಬಂಧಿಸಿದ ಮಾಹಿತಿಯನ್ನು ವೆಬ್ ಸೈಟ್‌ಗಳಲ್ಲಿ ಪ್ರಕಟಿಸಬೇಕು' ಎಂದು ನಿರ್ದೇಶಿಸಿದ್ದಾರೆ.

ಇದೇ 15ಕ್ಕೆ ಪ್ರತಿಭಟನೆ • ಗೋಹತ್ಯೆ ನಿಷೇಧಕ್ಕೂ ವಿರೋಧ

‘ಹಾಲಿಗೆ ₹ 50 ನಿಗದಿ ಪಡಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ಲೀಟರ್ ಹಾಲಿಗೆ ₹50 ದರ ನಿಗದಿಪಡಿಸುವಂತೆ ಆಗ್ರಹಿಸಿ ಇದೇ 15ರಂದು ಫ್ರೀಡಂ ಪಾರ್ಕ್‌ನಲ್ಲಿ ಹಾಲಿನ ಚಳವಳಿ ನಡೆಸಲಾಗುವುದು ಎಂದು ಕರ್ನಾಟಕ ಹಾಲು ಉತ್ಪಾದಕರ ವೇದಿಕೆ ತಿಳಿಸಿದೆ.

ಹಾಲು ಉತ್ಪಾದನೆ ವೆಚ್ಚ ದುಬಾರಿಯಾಗಿದ್ದು, ಸರ್ಕಾರ ಪ್ರತಿ ಲೀಟರ್ ಹಾಲಿಗೆ ₹26ರಿಂದ ₹28 ನೀಡುತ್ತಿದೆ. ಒಕ್ಕೂಟದವರು ₹40ರಿಂದ ₹45ಕ್ಕೆ ಹಾಲು ಮಾರಾಟ ಮಾಡುತ್ತಿದ್ದಾರೆ ಎಂದು ಕರ್ನಾಟಕ ಹಾಲು ಉತ್ಪಾದಕರ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಎಂ.ಆರ್. ನಾರಾಯಣಗೌಡ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ರಾಜ್ಯದಲ್ಲಿ ಹಾಲಿನ ವೈಜ್ಞಾನಿಕ ಬೆಲೆ ಏರಿಸುವಂತೆ ಒತ್ತಾಯಿಸಿ ‘ನಮ್ಮ ಹಾಲು ನಮ್ಮ ಹಕ್ಕು’ ಎಂಬ ಘೋಷವಾಕ್ಯದ ಅಡಿಯಲ್ಲಿ ‘ಬೆಂಗಳೂರು ಚಲೋ’ ಹಮ್ಮಿಕೊಳ್ಳಲಾಗಿದೆ. ರಾಜ್ಯದಾದ್ಯಂತ 3 ಸಾವಿರಕ್ಕೂ ಹೆಚ್ಚು ರೈತರು ಭಾಗವಹಿಸುವರು ಎಂದರು.

ಪಂಜಾಬ್, ಹರಿಯಾಣ ಮತ್ತು ಗುಜರಾತ್ ರಾಜ್ಯಗಳಲ್ಲಿ ಪ್ರತಿ ಲೀಟರ್ ಹಾಲಿಗೆ ₹36ರಿಂದ ₹45 ನೀಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಕಡಿಮೆ ಬೆಲೆ ನೀಡುತ್ತಿರುವುದು ಖಂಡನೀಯ. ಹೈನುಗಾರಿಕೆ ಮಾಡುವ ಹಾಲು ಉತ್ಪಾದಕರು ಸಂಕಷ್ಟದಲ್ಲಿದ್ದು, ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿದರೆ ಹೋರಾಟ ಕೈಬಿಡಲಾಗುವುದು ಎಂದು ಹೇಳಿದರು.

ರಾಜ್ಯದಲ್ಲಿ ಹಾಲು ಉತ್ಪಾದಕರಿಗೆ ವೈಜ್ಞಾನಿಕ ಬೆಲೆ ₹ 50 ನೀಡಬೇಕೆಂದು ಒಂದೂವರೆ ವರ್ಷದಿಂದ ಅನೇಕ ಸಂಘಟನೆಯವರು ಹೋರಾಟ ಮಾಡಿದ್ದರು. ಆದರೆ, ಒಕ್ಕೂಟವು ಕೇವಲ ₹3 ಸಹಾಯಧನ ಹೆಚ್ಚಿಸಿ, ಸುಳ್ಳು ಭರವಸೆ ನೀಡಿ ಹೋರಾಟವನ್ನು ಹತ್ತಿಕ್ಕಿದ್ದರು ಎಂದು ಅವರು ಹೇಳಿದರು.

ಒಕ್ಕೂಟದಲ್ಲಿರುವ ಭ್ರಷ್ಟಾಚಾರ, ದುಂದುವೆಚ್ಚಕ್ಕೆ ಕಡಿವಾಣ ಹಾಕಬೇಕು. ಹೈನುಗಾರಿಕೆ ಮಾಡುವ ರೈತರಿಗೆ ಗೋಹತ್ಯೆ ನಿಷೇಧ ಕಾಯ್ದೆ ಮಾರಕವಾಗಿದೆ. ಗಂಡು ಕರು ಜನಿಸಿದರೆ ಹಸುವಿಗಿಂತ ಎರಡು ಪಟ್ಟು ಹೆಚ್ಚು ವೆಚ್ಚವಾಗುತ್ತಿದೆ ಎಂದು ಹೇಳಿದರು.

‘ಇ.ಡಿ ತನಿಖೆಗೆ ಸಹಕರಿಸಲಿ’

ಬೆಂಗಳೂರು: ‘ನ್ಯಾಷನಲ್ ಹೆರಾಲ್ಡ್’ ಹಗರಣದಿಂದ ನುಣುಚಿಕೊಳ್ಳಲು ಕಾಂಗ್ರೆಸ್ ಪಕ್ಷ ಜಾರಿ ನಿರ್ದೇಶನಾಲಯದ(ಇ.ಡಿ) ವಿರುದ್ಧ ಹೋರಾಟ ಆರಂಭಿಸಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇ.ಡಿ ತನಿಖೆಗೆ ಕಾಂಗ್ರೆಸ್ ಪಕ್ಷ ಸಹಕರಿಸಬೇಕು. ತಾವು ಪ್ರಶ್ನಾತೀತರು, ಭ್ರಷ್ಟಾಚಾರದಲ್ಲಿ ತಮ್ಮನ್ನು ವಿಚಾರಣೆಗೆ ಕರೆಯಬಾರದು ಎಂದರೆ ಹೇಗೆ ಎಂದು ಪ್ರಶ್ನಿಸಿದರು.

ನ್ಯಾಯಮೂರ್ತಿಯಾಗಿ ಪೂಣಚ್ಚ ಪ್ರಮಾಣ

ಬೆಂಗಳೂರು: ಕರ್ನಾಟಕ ಹೈಕೋರ್ಟ್ ಹೆಚ್ಚುವರಿ ನ್ಯಾಯಮೂರ್ತಿಯಾಗಿ ಸಿ.ಎಂ.ಪೂಣಚ್ಚ ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು. ಹೈಕೋರ್ಟ್‌ನ ಕೋರ್ಟ್ ಹಾಲ್‌ನಲ್ಲಿ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಅವರು ಪೂಣಚ್ಚ ಅವರಿಗೆ ಪ್ರಮಾಣ ಬೋಧಿಸಿದರು. ರಾಜ್ಯ ಹೈಕೋರ್ಟ್ ನ್ಯಾಯ ಮೂರ್ತಿಗಳ ಮಂಜೂರಾತಿ ಸಂಖ್ಯೆ 62. ಸದ್ಯ 44 ನ್ಯಾಯಮೂರ್ತಿಗಳು ಕಾರ್ಯ ನಿರ್ವಹಿಸುತ್ತಿದ್ದು, ಪೂಣಚ್ಚ ನೇಮಕದಿಂದ ಈ ಸಂಖ್ಯೆ 45ಕ್ಕೆ ತಲುಪಿದೆ.

ಹದಗೆಟ್ಟ ರಸ್ತೆ: ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಹದಗೆಟ್ಟ ರಸ್ತೆ ದುರಸ್ತಿಗೆ ಆಗ್ರಹಿಸಿ ನಲ್ಲೂರಳ್ಳಿ ನಿವಾಸಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟಿಸಿದರು.

ಬಿಬಿಎಂಪಿ, ಬೆಸ್ಕಾಂ, ಜಲಮಂಡಳಿ ಅಧಿಕಾರಿಗಳ ನಡುವೆ ಸಮನ್ವಯ ಇಲ್ಲ. ರಸ್ತೆಗಳಲ್ಲಿ ಗುಂಡಿ ಬಿದ್ದು ಸಾರ್ವಜನಿಕರು ಹಾಗೂ ವಾಹನ ಸವಾರರು ಪರದಾಡುತ್ತಿದ್ದಾರೆ ಎಂದು ಕೆಪಿಸಿಸಿ ಎಸ್‌ಸಿ ಘಟಕದ ಉಪಾಧ್ಯಕ್ಷ ನಲ್ಲೂರಹಳ್ಳಿ ನಾಗೇಶ್ ಹೇಳಿದರು.

ಶೇ 40ರಷ್ಟು ಕಮಿಷನ್ ಆಸೆಗೆ ವರ್ಕ್ ಆರ್ಡರ್ ಇಲ್ಲದಿರುವ ಕಾಮಗಾರಿಗಳಿಗೆ ಶಾಸಕರು ಚಾಲನೆ ನೀಡುತ್ತಿದ್ದಾರೆ. ಆರು ತಿಂಗಳ ನಂತರ ಕಾಮಗಾರಿ ಆರಂಭಗೊಳ್ಳುತ್ತದೆ. ರಾಜ್ಯದಲ್ಲಿ ಹೆಚ್ಚು ತೆರಿಗೆ ಪಾವತಿಸುವ ಕ್ಷೇತ್ರ ಮಹದೇವಪುರ. ಅದರೆ, ಸೌಕರ್ಯಗಳು ಹಾಗೂ ಅಭಿವೃದ್ಧಿ ಮಾತ್ರ ಕುಂಠಿತವಾಗಿವೆ ಎಂದು ದೂರಿದರು.

ಮಾರತ್ತಹಳ್ಳಿ ಬ್ಲಾಕ್ ಅಧ್ಯಕ್ಷ ಬಾಬು, ಮಾಜಿ ಅಧ್ಯಕ್ಷ ಜಯರಾಂ ರೆಡ್ಡಿ, ಮಹಿಳಾ ಘಟಕದ ಅಧ್ಯಕ್ಷೆ ವನಜಾ ಹಾಜರಿದ್ದರು.

ಹದಗೆಟ್ಟ ರಸ್ತೆಗಳನ್ನು ಸರಿಪಡಿಸುವಂತೆ ಆಗ್ರಹಿಸಿ ನಲ್ಲೂರಳ್ಳಿ ನಿವಾಸಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನಾ ಜಾಥಾ ನಡೆಸಿದರು

ವಿಶ್ವ ಹಿರಿಯರ ನಿಂದನೆ ವಿರುದ್ಧ ಜಾಗೃತಿ ದಿನಾಚರಣೆ ನಾಳೆ

ಬೆಂಗಳೂರು: ವಿಶ್ವ ಹಿರಿಯರ ನಿಂದನೆ ವಿರುದ್ಧ ಜಾಗೃತಿ ದಿನಾಚರಣೆಯು ಜೂನ್ 15ರಂದು ಪೊಲೀಸ್ ಆಯುಕ್ತರ ಕಚೇರಿಯ ಕಾನ್ಫರೆನ್ಸ್ ಹಾಲ್‌ನಲ್ಲಿ ನಡೆಯಲಿದೆ.

ಉಪ ಪೊಲೀಸ್ ಆಯುಕ್ತ ಡಾ.ಎಸ್.ಡಿ.ಶರಣಪ್ಪ, ಅಂಗವಿಕಲರು ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ನಿರ್ದೇಶಕಿ ಕೆ.ಎಸ್. ಲತಾಕುಮಾರಿ, ಮನೋವೈದ್ಯ ಡಾ.ಸಿ.ಆರ್.ಚಂದ್ರಶೇಖರ್ ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ ‘ಹಿರಿಯ ನಾಗರಿಕರು: ಸುರಕ್ಷಿತವಾಗಿರಿ ಮತ್ತು ಜಾಗರೂಕರಾಗಿರಿ’ ಕೃತಿಯನ್ನು ಬಿಡುಗಡೆ ಮಾಡಲಾಗುವುದು ಎಂದು ನೈಟಿಂಗೇಲ್ಸ್ ವೈದ್ಯಕೀಯ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಡಾ.ರಾಧಾ ಎಸ್. ಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

ತೃತೀಯ ಲಿಂಗಿಗಳ ಪ್ರಥಮ ವಸತಿ ಯೋಜನೆಗೆ ಚಾಲನೆ: ಉದ್ಘಾಟನೆ: ವಸತಿ ಸಚಿವ ವಿ.ಸೋಮಣ್ಣ, ಉಪಸ್ಥಿತಿ: ಎಸ್.ಟಿ.ಸೋಮಶೇಖರ್, ಡಾ.ಎಂ.ವೆಂಕಟಸ್ವಾಮಿ, ಬಿ.ಸಿ.ವೆಂಕಟೇಶ್. ಆಯೋಜಕರು: ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ, ಸಮತಾ ಸೈನಿಕ ದಳ, ಕರ್ನಾಟಕ ತೃತೀಯ ಲಿಂಗಿಗಳ ಸಂಘ. ಸ್ಥಳ: ಮಾಳಿಗೊಂಡನಹಳ್ಳಿ (ದೊಡ್ಡ ಆಲದಮರ ಬಳಿ), ಮುಕ್ತಿನಾಗ ದೇವಸ್ಥಾನದ ಪಕ್ಕ, ಕೆಂಗೇರಿ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಳಿಗ್ಗೆ: 11

ಶಿವಲಿಂಗೇಶ್ವರ ಸ್ವಾಮಿ ದೇವಾಲಯದ 16ನೇ ವಾರ್ಷಿಕೋತ್ಸವ: ಬೆಳಿಗ್ಗೆ: 9.30: ಗಣಪತಿ ಪೂಜೆ ಪುಣ್ಯಾಹ, 10:ಗಣಪತಿ ಹೋಮ, ನವಗ್ರಹ ಶಾಂತಿ, ರುದ್ರ ಹೋಮ, ಮೃತ್ಯುಂಜಯ ಹೋಮ, 11.30: ಪೂರ್ಣಾಹುತಿ, 12.30: ತೀರ್ಥ ಮತ್ತು ಪ್ರಸಾದ ವಿನಿಯೋಗ, 5: ಬೆಲ್ಲದ ದೀಪದ ಆರತಿಗಳು, 6: ಶಿವಲಿಂಗೇಶ್ವರ ಸ್ವಾಮಿ ಪಲ್ಲಕ್ಕಿ ಉತ್ಸವ, ಆಯೋಜಕರು: ಶಿವಲಿಂಗೇಶ್ವರ ಸ್ವಾಮಿ ದೇವಾಲಯ, ಸ್ಥಳ: ಬಿಲ್ವಶಿವಾಲಯ ರಸ್ತೆ, 3ನೇ ಕ್ರಾಸ್ ಭೈರವೇಶ್ವರ ಬಡಾವಣೆ, ಹೆಣ್ಣೂರು ಬಂಡೆ

ವಿಶ್ವ ರಕ್ತದಾನಿಗಳ ದಿನ: ಉದ್ಘಾಟನೆ: ಡಾ.ಕೆ.ಸುಧಾಕರ್, ಅಧ್ಯಕ್ಷತೆ: ಉದಯ್. ಬಿ.ಗರುಡಾಚಾರ್, ಉಪಸ್ಥಿತಿ: ಪಿ.ಸಿ. ಮೋಹನ್, ಆಯೋಜಕರು: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ, ಕರ್ನಾಟಕ ರಾಜ್ಯ ರಕ್ತಚಾಲನ ಪರಿಷತ್, ಬಿಬಿಎಂಪಿ, ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಸ್ಥಳ: ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹೊಸ ಕಟ್ಟಡ 6ನೇ ಮಹಡಿ ಫೋರ್ಟ್, ಕೆ.ಆರ್ ರಸ್ತೆ, ಬೆಳಿಗ್ಗೆ: 10

ವಿಶ್ವ ರಕ್ತದಾನಿಗಳ ದಿನಾಚರಣೆ: ಉದ್ಘಾಟನೆ: ಪ್ರಭುಲಿಂಗ.ಕೆ. ನಾವದಗಿ, ಅಧ್ಯಕ್ಷತೆ: ವಿಜಯಕುಮಾರ ಪಾಟೀಲ ಶಾವಂತಗೇರ, ಉಪಸ್ಥಿತಿ: ಡಾ.ಎಸ್. ರಾಜೇಂದ್ರ ಪ್ರಸಾದ್, ಡಾ.ಎಸ್.ವಿ. ಸುರೇಶ, ಡಾ.ಶರಣ.ಎಸ್. ಪಾಟೀಲ್, ಡಾ.ಆನಂದ.ಎಸ್. ಜಿಗಜಿನ್ನಿ, ಆಯೋಜಕರು: ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕೃಷಿ ವಿಶ್ವವಿದ್ಯಾಲಯ ಮತ್ತು ಜಿಕೆವಿಕೆ, ಸ್ಥಳ: ಉತ್ತರ (ನಾರ್ಥ್) ಬ್ಲಾಕ್ ಸಭಾಂಗಣ, ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ ಆವರಣ, ಬಳ್ಳಾರಿ ರಸ್ತೆ, ಬೆಳಿಗ್ಗೆ: 11

ಡಾ.ಬಿ.ಆರ್. ಅಂಬೇಡ್ಕರ್‌ರವರ 131ನೇ ಜಯಂತ್ಯುತ್ಸವ ಕಾರ್ಯಕ್ರಮ: ಉದ್ಘಾಟನೆ: ಕಾಪು ಸಿದ್ದಲಿಂಗಸ್ವಾಮಿ, ಅಧ್ಯಕ್ಷತೆ: ಸಿ.ಜಿ. ಶ್ರೀನಿವಾಸನ್, ಉಪಸ್ಥಿತಿ: ಜಿ.ಜಗದೀಶ, ಡಾ.ಎಲ್. ಹನುಮಂತಯ್ಯ, ಎಸ್.ಎಂ. ಶಿವಕುಮಾರ್, ಬಿ.ಜಿ. ಇಂದಿರಮ್ಮ, ಆಯೋಜಕರು: ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, ಸ್ಥಳ: ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಸಭಾಂಗಣ, ಕೇಂದ್ರ ಕಚೇರಿ ಯಶವಂತಪುರ, ಬೆಳಿಗ್ಗೆ: 11.30

ಯುವ ಮಹಿಳೆಯರಲ್ಲಿ ಸಾಮರ್ಥ್ಯ ವೃದ್ಧಿ ಕಾರ್ಯಾಗಾರ: ಉದ್ಘಾಟನೆ: ಎಚ್. ಶಶಿಧರ್ ಶೆಟ್ಟಿ, ಉಪಸ್ಥಿತಿ: ರೂಪಕ್ ಕುಮಾರ್ ದತ್ತ, ಅಧ್ಯಕ್ಷತೆ: ರುತ್ ಮನೋರಮಾ, ಆಯೋಜಕರು: ವುಮೆನ್ಸ್ ವಾಯ್ಸ್, ಸ್ಥಳ: ಎಸ್‌ಸಿಎಂಐ ಹೌಸ್, ಮಿಷನ್ ರಸ್ತೆ, ಬೆಳಿಗ್ಗೆ: 11.30

ರಕ್ತದಾನ ಶಿಬಿರ: ಆಯೋಜಕರು: ಬಿಜಿಎಸ್ ಗ್ಲೋಬಲ್ ಆಸ್ಪತ್ರೆ, ಸ್ಥಳ: ಬ್ಲಡ್ ಬ್ಯಾಂಕ್, ಆಸ್ಪತ್ರೆಯ ನೆಲಮಹಡಿ, ನಂ.:67, ಉತ್ತರಹಳ್ಳಿ ಮುಖ್ಯರಸ್ತೆ, ಮಧ್ಯಾಹ್ನ: 12

ಸೌಂದರ್ಯ ಲಹರಿ ಸ್ತೋತ್ರ ಪಾರಾಯಣ: ನೇತೃತ್ವ: ವಿಧುಶೇಖರ ಭಾರತೀ ಸ್ವಾಮೀಜಿ, ಶಂಕರ ಭಾರತೀ ಸ್ವಾಮೀಜಿ, ಆಯೋಜಕರು: ವೇದಾಂತ ಭಾರತಿ, ಸ್ಥಳ: ಚಂದ್ರಗುಪ್ತ ಮೌರ್ಯ ಆಟದ (ಶಾಲಿನಿ) ಮೈದಾನ, ಜಯನಗರ, 5ನೇ ಬ್ಲಾಕ್, ಆರ್.ವಿ. ರಸ್ತೆ ಪಕ್ಕ ಮೆಟ್ರೊ ನಿಲ್ದಾಣ, ಮಧ್ಯಾಹ್ನ: 3.30

ಝೇಂಕಾರ ಗಾನ ಸಂಭ್ರಮ, 159ನೇ ಹುಣ್ಣಿಮೆ ಹಾಡು: ಗಾಯಕರು: ಬಸವರಾಜ ಮುಗಳಖೋಡ ಮತ್ತು ತಂಡದಿಂದ. ತಬಲಾ: ರಾಜೇಂದ್ರ ನಾಕೋಡ್, ಹಾರ್ಮೋನಿಯಂ: ಸತೀಶ್ ಕೊಳ್ಳಿ, ಕೀ-ಬೋರ್ಡ್: ಪರಶುರಾಂ ಬಿಜಾಪುರ, ರಿದಂ: ಮಲ್ಲಿಕಾರ್ಜುನ್ ವಿ.ಪಿ., ಆಯೋಜಕರು: ಕಾಡುಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ: ಕಾಡುಮಲ್ಲೇಶ್ವರ ಬಯಲು ರಂಗಮಂದಿರ, ಮಲ್ಲೇಶ್ವರಂ, ಸಂಜೆ: 6.30

ವಿಶ್ವ ರಕ್ತದಾನಿಗಳ ದಿನ: ಉದ್ಘಾಟನೆ: ಎನ್.ಬಿ. ಭಟ್, ಅಧ್ಯಕ್ಷತೆ: ಪ್ರೊ.ಡಿ.ಆರ್. ಸುಧಾ, ಉಪಸ್ಥಿತಿ: ಜೆ.ಮಂಜುನಾಥ್, ಡಾ.ಎ.ಕೆ. ಅತ್ರೆ, ಪಂಚಮ್ ಹಳಿಬಂಡಿ, ದಿವ್ಯಾ.ಕೆ. ಮೂರ್ತಿ, ಆಯೋಜಕರು: ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ವಿಜಯ ಕಾಲೇಜು, ಕರ್ನಾಟಕ ವಿದ್ಯಾರ್ಥಿ ಕೂಟ, ಕೆ.ವಿ.ಕೆ ಟ್ರಸ್ಟ್ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸ್ಥಳ: ಪ್ರೊ.ಬಿ.ವಿ ನಾರಾಯಣ ರಾವ್ ಸಭಾಂಗಣ, ವಿಜಯ ಕಾಲೇಜು, ಜಯನಗರ 4ನೇ ಹಂತ, ಬೆಳಿಗ್ಗೆ: 9.30

ಸಂಕ್ಷಿಪ್ತ ಸುದ್ದಿ

ಬೈಕ್‌ಗೆ ಕಾರು ಡಿಕ್ಕಿ: ಸವಾರ ಸಾವು

ಬೆಂಗಳೂರು: ವಿದ್ಯಾರಣ್ಯಪುರ ರೈಲ್ವೆ ಪರ್ಯಾಯ ರಸ್ತೆಯಲ್ಲಿ ಭಾನುವಾರ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರ, ಬಿಇಎಲ್ ಕಾಲೊನಿ ನಿವಾಸಿ ಮನೋಜ್‌ಕುಮಾರ್ (22) ಮೃತಪಟ್ಟಿದ್ದಾರೆ.

'ಇವರು ಓಲಾ ಕ್ಯಾಬ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಕಾರು ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಯಲಹಂಕ ಸಂಚಾರ ಪೊಲೀಸರು ಹೇಳಿದರು.

ಯುವತಿ ಕೊಲೆ: ಸ್ನೇಹಿತನ ಕೃತ್ಯ

ಬೆಂಗಳೂರು: ಯಶವಂತಪುರ ಠಾಣೆ ವ್ಯಾಪ್ತಿಯ ವಸತಿಗೃಹವೊಂದರ ಕೊಠಡಿಯಲ್ಲಿ ಒಡಿಶಾದ ಯುವತಿ ದೀಪಾ ಪದನ್ (21) ಎಂಬುವರನ್ನು ಉಸಿರುಗಟ್ಟಿಸಿ ಕೊಲೆ ಮಾಡಲಾಗಿದ್ದು, ಸ್ನೇಹಿತನೇ ಕೃತ್ಯ ಎಸಗಿರುವ ಶಂಕೆ ಇದೆ.

'ದೀಪಾ ಏಜೆನ್ಸಿಯೊಂದರ ಮೂಲಕ ಸ್ವಚ್ಛತಾ ಕೆಲಸ ಮಾಡುತ್ತಿದ್ದರು. ಇವರ ಸ್ನೇಹಿತ, ಒಡಿಶಾದ ಅನ್ಮೋಲ್ ಕೃತ್ಯ ಎಸಗಿರುವ ಶಂಕೆ ಇದೆ. ಆತ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿ ಚಪ್ಪಲಿ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದ. ಜೂನ್ 9 ರಂದು ವಸತಿಗೃಹದ ಕೊಠಡಿಗೆ ಇಬ್ಬರೂ ಹೋಗಿದ್ದು, ಮರುದಿನ ಆರೋಪಿ ಒಬ್ಬನೇ ಹೋಗಿದ್ದ. ಅನುಮಾನಗೊಂಡ ಸಿಬ್ಬಂದಿ ಠಾಣೆಗೆ ಮಾಹಿತಿ ನೀಡಿದ್ದರು. ಪೊಲೀಸರು ಪರಿಶೀಲಿಸಿದಾಗ ಮೃತದೇಹ ಕಂಡಿತು' ಎಂದೂ ತಿಳಿಸಿವೆ.

ಸ್ಯಾಟ್‌ಲೈಟ್ ಬಸ್ ನಿಲ್ದಾಣ ಬಳಿ ಸೋಮವಾರ ಬೆಳಿಗ್ಗೆ ಸಂಭವಿಸಿದ್ದ ಸರಣಿ ಅಪಘಾತದಲ್ಲಿ ಕ್ಯಾಂಟರ್ ಹಾಗೂ ಬಿಎಂಟಿಸಿ ನಡುವೆ ಸಿಲುಕಿ ನಜ್ಜುಗುಜ್ಜಾದ ಆಟೊ

ಸರಣಿ ಅಪಘಾತ: ಆಟೊದಲ್ಲಿ ಸಿಲುಕಿ ಚಾಲಕ ಸಾವು

ಬೆಂಗಳೂರು: ಮೈಸೂರು ರಸ್ತೆಯ ಸ್ಯಾಟ್‌ಲೈಟ್ ಬಸ್ ನಿಲ್ದಾಣ ಬಳಿ ಸರಣಿ ಅಪಘಾತ ಸಂಭವಿಸಿದ್ದು, ನಜ್ಜುಗುಜ್ಜಾದ ಆಟೊದೊಳಗೆ ಸಿಲುಕಿ ತೀವ್ರ ಗಾಯಗೊಂಡು ಚಾಲಕ ಗಿರಿಸಾಗರ್ (43) ಮೃತಪಟ್ಟಿದ್ದಾರೆ.

ಶ್ರೀಗಂಧಕಾವಲು ನಿವಾಸಿ ಗಿರಿಸಾಗರ್ ಸೋಮವಾರ ಬೆಳಿಗ್ಗೆ 6.30 ಗಂಟೆ ಸುಮಾರಿಗೆ ಪ್ರಯಾಣಿಕರಿಗಾಗಿ ಹುಡುಕುತ್ತ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ.

'ದಿನಸಿ ಸಾಮಗ್ರಿ ಸಾಗಿಸುತ್ತಿದ್ದ ಐಶರ್ ಗೂಡ್ಸ್ ವಾಹನ ಹೊಸಗುಡ್ಡದಹಳ್ಳಿ ಜಂಕ್ಷನ್‌ನಿಂದ ಬಾಪೂಜಿನಗರಕ್ಕೆ ಹೊರಟಿತ್ತು. ಚಾಲಕ ಅತಿ ವೇಗ ಹಾಗೂ ನಿರ್ಲಕ್ಷ್ಯದಿಂದ ವಾಹನ ಚಲಾಯಿಸಿದ್ದರಿಂದ ಎದುರಿಗಿದ್ದ ಕ್ಯಾಂಟರ್‌ಗೆ ಡಿಕ್ಕಿ ಹೊಡೆದಿತ್ತು' ಎಂದು ಬ್ಯಾಟರಾಯನಪುರ ಸಂಚಾರ ಪೊಲೀಸರು ಹೇಳಿದರು.

'ಎದುರಿಗಿದ್ದ ಆಟೊಗೆ ಕ್ಯಾಂಟರ್ ಗುದ್ದಿತ್ತು. ಎದುರಿಗಿದ್ದ ಬಿಎಂಟಿಸಿ ಬಸ್‌ಗೆ ಅದೇ ಆಟೊ ಡಿಕ್ಕಿ ಹೊಡೆದಿತ್ತು. ಕ್ಯಾಂಟರ್ ಹಾಗೂ ಬಸ್ ನಡುವೆ ಆಟೊ ಸಿಲುಕಿಕೊಂಡು ನಜ್ಜುಗುಜ್ಜಾಗಿತ್ತು. ರಕ್ಷಣೆಗೆ ಬಂದ ಸ್ಥಳೀಯರು ಆಟೊದಲ್ಲಿ ಸಿಲುಕಿದ್ದ ಚಾಲಕ ಗಿರಿ ಸಾಗರ್ ಅವರನ್ನು ಹೊರಗೆ ತೆಗೆದು ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ದಿದ್ದರು. ಆದರೆ, ಮಾರ್ಗಮಧ್ಯೆಯೇ ಅವರು ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದರು' ಎಂದು ಪೊಲೀಸರು ವಿವರಿಸಿದರು.

'ಐಶರ್ ವಾಹನ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅಪಘಾತದ ಬಳಿಕ ರಸ್ತೆಯಲ್ಲಿ ವಾಹನಗಳ ದಟ್ಟಣೆ ಉಂಟಾಗಿತ್ತು. ವಾಹನಗಳನ್ನು ತೆರವು ಮಾಡಿ ಸಂಚಾರಕ್ಕೆ ಅನುಕೂಲ ಕಲ್ಪಿಸಲಾಯಿತು' ಎಂದು ಹೇಳಿದರು.

ವಸತಿ ಸಮುಚ್ಚಯ ಮಾಲೀಕರ ಸಂಘದ ನೋಂದಣಿ

ಲಂಚ ಪ್ರಕರಣ: ಸಹಕಾರ ಇಲಾಖೆ ಅಧಿಕಾರಿಗೆ ಜೈಲು

ಪ್ರಜಾವಾಣಿ ವಾರ್ತೆ



ಎಚ್‌.ಪಿ. ಸದಾಶಿವ

ಬೆಂಗಳೂರು: ವಸತಿ ಸಮುಚ್ಚಯವೊಂದರ ಮಾಲೀಕರ ಸಂಘದ ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸಲು ಅರ್ಜಿದಾರರಿಂದ ₹10,000 ಲಂಚಕ್ಕೆ ಬೇಡಿಕೆ ಇಟ್ಟು, ₹ 5,000 ಪಡೆದಿದ್ದ ಪ್ರಕರಣದಲ್ಲಿ ನಗರದ ಮೂರನೇ ವಲಯದ ಸಹಕಾರ ಸಂಘಗಳ ಉಪ ರಿಜಿಸ್ಟ್ರಾರ್ ಕಚೇರಿಯ ಸಹಕಾರ ಅಭಿವೃದ್ಧಿ ಅಧಿಕಾರಿ ಎಚ್‌.ಪಿ. ಸದಾಶಿವ, 'ಅಪರಾಧಿ' ಎಂದು ವಿಶೇಷ ನ್ಯಾಯಾಲಯ ಸಾರಿದ್ದು, ಐದು ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು ₹ 20,000 ದಂಡ ವಿಧಿಸಿದೆ.

ಕೋರಮಂಗಲದ ಧನುಶ್ರೀ ಅಪಾರ್ಟ್‌ಮೆಂಟ್ ಮಾಲೀಕರ ಸಂಘದ ನೋಂದಣಿಗೆ ಯಲಹಂಕ ನಿವಾಸಿಯೊಬ್ಬರು 2017ರ ಆಗಸ್ಟ್‌ನಲ್ಲಿ ಚಾಮರಾಜಪೇಟೆಯಲ್ಲಿರುವ ಸಹಕಾರ ಸಂಘಗಳ ಉಪ ರಿಜಿಸ್ಟ್ರಾರ್ ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ಪ್ರಕ್ರಿಯೆ ಪೂರ್ಣಗೊಳಿಸಲು ₹ 10,000 ಲಂಚ ನೀಡುವಂತೆ ಸದಾಶಿವ ಬೇಡಿಕೆ ಇಟ್ಟಿದ್ದರು. ₹ 7,500 ಲಂಚ ಪಡೆಯುತ್ತಿದ್ದಾಗ ದಾಳಿಮಾಡಿದ್ದ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಅಧಿಕಾರಿಗಳು, ಸಹಕಾರ ಅಭಿವೃದ್ಧಿ ಅಧಿಕಾರಿಯನ್ನು ಬಂಧಿಸಿದ್ದರು.

ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿದ್ದ ಎಸಿಬಿ ಅಧಿಕಾರಿಗಳು, ನಗರದ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ 2018ರ ಸೆಪ್ಟೆಂಬರ್‌ನಲ್ಲಿ ಆರೋಪಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆಯನ್ನು ಪೂರ್ಣಗೊಳಿಸಿ ಸೋಮವಾರ ಆದೇಶ ಪ್ರಕಟಿಸಿದ ನ್ಯಾಯಾಧೀಶ ಕೆ. ಲಕ್ಷ್ಮೀನಾರಾಯಣ ಭಟ್, 'ಸದಾಶಿವ ಅಪರಾಧಿ' ಎಂದು ಸಾರಿದರು.

ಲಂಚಕ್ಕೆ ಬೇಡಿಕೆ ಇಟ್ಟಿರುವುದು ಮತ್ತು ಪಡೆದಿರುವುದು ಎರಡೂ ಆರೋಪಗಳು ಸಾಬೀತಾಗಿವೆ ಎಂದು ಪ್ರಕಟಿಸಿದ ನ್ಯಾಯಾಲಯ, ಐದು ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು ₹ 20,000 ದಂಡ ವಿಧಿಸಿ ಆದೇಶ ಹೊರಡಿಸಿತು. ಪಬ್ಲಿಕ್ ಪ್ರಾಸಿಕ್ಯೂಟರ್ ಸಂತೋಷ್ ನಾಗರಲೆ ಈ ಪ್ರಕರಣದಲ್ಲಿ ಪ್ರಾಸಿಕ್ಯೂಷನ್ ಪರವಾಗಿ ವಾದ ಮಂಡಿಸಿದ್ದರು.

ಚೆಟ್ಟಿನಾಡ್ ಮಾಲೀಕನಿಗೆ ₹ 15 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀರಿನ ಸಂಪು ಅಗೆಯುವಾಗ ಸಿಕ್ಕಿರುವ ಚಿನ್ನದ ಮಣಿ ಮಾರುವುದಾಗಿ ಹೇಳಿ ಚೆನ್ನೈನ 'ಸ್ವಾಮಿ ಚಿಕನ್ ಚೆಟ್ಟಿನಾಡ್' ಹೋಟೆಲ್ ಮಾಲೀಕ ಮುರುಘನಾಥಂ ಅವರಿಗೆ ₹15 ಲಕ್ಷ ವಂಚಿಸಲಾಗಿದ್ದು, ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುರುಘನಾಥಂ ಆರೋಪಿ ಅರ್ಜುನ್, ಇತರರ ವಿರುದ್ಧ ದೂರು ನೀಡಿದ್ದಾರೆ. 'ಆರೋಪಿ ಕೆಲ ದಿನದ ಹಿಂದೆ ಚೆನ್ನೈಗೆ ಹೋಗಿದ್ದು ದೂರುದಾರರಿಗೆ 'ಮನೆ ಬಳಿ ನೀರಿನ ಸಂಪ್ ಅಗೆಯುವಾಗ ಚಿನ್ನದ 5 ಮಣಿ ಸಿಕ್ಕಿವೆ. ಅವುಗಳನ್ನು ₹ 25 ಲಕ್ಷಕ ಮಾರುತ್ತೇನೆ ಎಂದು ತಿಳಿಸಿ 2 ಮಣಿ ನೀಡಿದ್ದ. ಪರಿಶೀಲಿಸಿದಾಗ ಅದು ಅಸಲಿ ಚಿನ್ನವಾಗಿತ್ತು.' 'ಬೆಂಗಳೂರಿಗೆ ಬಂದರೆ ಮಣಿ ನೀಡುವುದಾಗಿ ಹೇಳಿದ್ದ. ₹ 15 ಲಕ್ಷ ಸಮೇತ ದೂರುದಾರ ಬಂದಿದ್ದರು. ಆಗ ಆರೋಪಿಗಳು ಹಣ ಪಡೆದು ಪರಾರಿಯಾಗಿದ್ದರು' ಎಂದು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಸ್ಮಶಾನಕ್ಕೆ ಜಾಗ: ಕ್ರಮಕ್ಕೆ ನಿರ್ದೇಶನ

ಬೆಂಗಳೂರು: ಸ್ಮಶಾನಕ್ಕಾಗಿ ಜಾಗ ಮೀಸಲಿರಿಸುವಂತೆ ಕೋರಿ ಕೆ.ಆರ್. ಪುರಂ ಹೋಬಳಿಯ ಚಿನ್ನಪ್ಪನಹಳ್ಳಿ ನಿವಾಸಿಗಳು ಸಲ್ಲಿಸಿರುವ ಮನವಿಯನ್ನು ಮೂರು ತಿಂಗಳ ಒಳಗಾಗಿ ಪರಿಶೀಲಿಸಿ ಶೀಘ್ರ ಕ್ರಮ ಕೈಗೊಳ್ಳುವಂತೆ ಬೆಂಗಳೂರು ಉತ್ತರ ತಹಶೀಲ್ದಾರ್‌ಗೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಕುರಿತಂತೆ ಎಲ್.ಮಹೇಶ್ ಎಂಬುವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಇದೇ 10ರಂದು ವಿಲೇವಾರಿ ಮಾಡಿದೆ.

'ಈ ಆದೇಶ ಕೈಸೇರಿದ ಮೂರು ತಿಂಗಳ ಒಳಗಾಗಿ ಅರ್ಜಿದಾರರು ಸಲ್ಲಿಸಿರುವ ಮನವಿಯನ್ನು ತಹಶೀಲ್ದಾರ್ ಅಥವಾ ಸಕ್ಷಮ ಪ್ರಾಧಿಕಾರವು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ನ್ಯಾಯಪೀಠ ತಿಳಿಸಿದೆ.

ರೋಬೋಟಿಕ್ ಶಸ್ತ್ರಚಿಕಿತ್ಸೆ ಯಶಸ್ವಿ

ಬೆಂಗಳೂರು: 'ಗಂಭೀರ ಹೃದಯ ಸಮಸ್ಯೆ ಎದುರಿಸುತ್ತಿದ್ದ 45 ವರ್ಷದ ರೋಗಿಗೆ ರೋಬೋಟಿಕ್ ಮಿಟ್ರಲ್ ಕವಾಟ ಶಸ್ತ್ರಚಿಕಿತ್ಸೆ ನಡೆಸಲಾಗಿದ್ದು, ವ್ಯಕ್ತಿಯು 24 ಗಂಟೆಯಲ್ಲಿ ಚೇತರಿಕೆ ಹೊಂದಿದ್ದಾರೆ' ಎಂದು ಅಪೋಲೊ ಆಸ್ಪತ್ರೆ ತಿಳಿಸಿದೆ.

'ಮೈಸೂರಿನ ವ್ಯಕ್ತಿಯು ತೀವ್ರ ಉಸಿರಾಟದ ಸಮಸ್ಯೆಯ ಕಾರಣಕ್ಕೆ ಆಸ್ಪತ್ರೆಗೆ ದಾಖಲಾಗಿದ್ದರು. ಅವರು ಈ ಹಿಂದೆ ಕೋವಿಡ್ ಪೀಡಿತರಾಗಿ ಚೇತರಿಕೆ ಹೊಂದಿದ್ದರು. ಕೊರೊನಾ ಸೋಂಕು ಅವರ ಹೃದಯದ ಕವಾಟಕ್ಕೆ ಹಾನಿ ಮಾಡಿತ್ತು. ರೋಬೋಟಿಕ್ ತಂತ್ರಜ್ಞಾನದ ನೆರವಿನಿಂದ 90 ನಿಮಿಷಗಳ ಅವಧಿಯಲ್ಲಿ ಶಸ್ತ್ರಚಿಕಿತ್ಸೆ ನಡೆಸಿ, ಹಾನಿಯಾಗಿದ್ದ ಮಿಟ್ರಲ್ ಕವಾಟ ಸರಿಪಡಿಸಲಾಗಿದೆ. ಶಸ್ತ್ರಚಿಕಿತ್ಸೆ ನಡೆಸಿದ ಎರಡು ಗಂಟೆಯ ಬಳಿಕ ಅವರಿಗೆ ಅಳವಡಿಸಿದ್ದ ಕೃತಕ ಉಸಿರಾಟ ಸಂಪರ್ಕ ತೆಗೆಯಲಾಯಿತು' ಎಂದು ಶಸ್ತ್ರಚಿಕಿತ್ಸೆ ನಡೆಸಿದ ಡಾ. ಸತ್ಯಕಿ ನಂಬಲ ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

Our client intends to purchase the Schedule Mentioned Property from its absolute owner, **Mr. L. AMAR KUMAR BHATIA,** Aged about 48 years, S/o. Mr. Lalchand S. Bhatia residing at No. 38, 4th Cross, 4th Block, Ramakrishnanagar, Nandini Layout, Bangalore – 560 096. The public are hereby given notice that any person/s or body incorporate claiming any right, title or interest of any nature or having any lien, charge or enforceable right in respect of the schedule property or anybody having objection to the transaction may put forth their claims in writing with the undersigned together with supporting documents **within 15 days** from this date, failing which it will be presumed that no valid claims or objections subsist in respect of the schedule property and the same is free from all encumbrances.

SCHEDULE PROPERTY

All that piece and parcel of land being a vacant sanctioned site bearing No. 35, in the Layout known as "DOWN TOWN PARK-II" formed in converted survey Nos. 61/1 and 62 of Meenakunte Village, Jala Hobli, Bangalore North Taluk, (converted vide official Memorandum No.B Dis.ALN.(N) 212/89-90, dated 16.04.1990 and B.DIS.ALN.SR(N)14/91-92, dated 29.08.1991) now known as and bearing Khata No. 123/117/35, present Katha No.150200203110090015 5 coming under Chikka Jala Group Panchayat Bangalore North Taluk, and bounded on the: **East By:** Plot No. 37, measuring on that side 60' **West by:** Road, measuring on that side 60' **North by**:30 Feet Road, measuring on that side 80' **South by:** Plot No. 34, measuring on that side 80' In total measuring 4800 Square Feet.

D-LAW ASSOCIATES,
Advocates,
No.87, "Shreshta Bumi",
U-203, 2nd Floor, Opp., BIT,
K. R. Road, Bangalore-560 004.
Mob: 98457 12345.

ROUNAQH

BUSINESS

Business Offers

Finance

WANTED BUSINESS Partner Non Veg Hotel 1 Crore Investment Monthly Income 10 Lakhs: 8892501007/ 9606701007

WANTED BUSINESS Partner Non Veg Hotel 10 Lakhs Investment Monthly Income 1 Lakhs: 8892501007/ 9606701007

NRI'S INVESTMENT And Finance Available On Low Interest Against Properties, Land &Building,Sites,Flats, Converted& Agriculture Lands Call:7411265189

EDUCATIONAL

Special Courses

JOB ORIENTED Course Diploma in Student Counselling 6months ONLINE CLASSES, Starts 12.07.2022 WhatsApp 9886044221 www.darwinpsychologycentre.com

JOB OPPORTUNITIES

Marketing & Sales

REQ, TEAMLEADER, Telecaller, & Field executive for Banking Loan collection (salary 20000). Direct recruitment to company Contact:- 9620206756, 9620200756.

Teachers/ Professors

WANTED: Qualified & Experienced Lecturer in English for VVS PU College(Unaided) with a qualification of M.A in English (Min-55%). Apply in person to the Principal, VVS PU College, Saptharshidhama, I Block, Rajajinagar, 19th Main Road, Bangalore-560010 with complete Bio-Data within three days of the date of the Advertisement. (18th.June.2022 Saturday from 09:00 a.m to 01:00 p.m)

Wanted

JOB OPPORTUNITY for Retired, Men, House wife & Graduates in Reputed Company. Age 40 to 75, Bangalorians only. Earn up to 40,000/-Contact: 9741401834

Part-Time Jobs

GOVERNMENT RECOGNISED Data Entry Typing Work From Home, Daily Payment, No Target, No Accuracy, With Govt Bond. For details M: 9742344447

RENTAL PROPERTIES

Accommodation Available

Commercial

OFFICE SPACE for Rent in Malleswaram Sampige Road between 17th & 18th Cross. 2nd Floor, 1000 SqFt . Rent 30000. Basement 600 Sqft (Furnished) Rent 15000/- (Negotiable) Call: 9448558243

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

PERSONAL

Change of Name

I, B.K. PATTU Spouse Of No. 6596427, NK MT, B.M. Karumbaiah, residing at #71, 1st Cross Jyothi Nagar Vimanapura Bengaluru-560017 have changed my name to B.K. MUTHAVVA my D.O.B in my husband's service record is wrongly mentioned as 15.07.1947 correct D.O.B is 22/08/1947 vide affidavit dated 13.06.2022 before notary S. Samuel Solomon Bangalore.

I, P UMAMAHESWARI Spouse Of #1376440W, Nayak, M. Pasupathy R/o. #23/312, 7th Cross, 7th Main Lingarajpura, Bengaluru-84 have changed my name to S UMA MAHESWARI my D.O.B wrongly mentioned in the service record as 05/09/1968 correct D.O.B is 29.06.1966, affidavit dated 10/06/2022 before notary N. Kanchivaradaraju, Bengaluru.

I, HEMANTH KUMAR G, Residing at #5, 8th Main, 8th 'B' Cross, Shivanagar, Rajajinagar, Bangalore-10, have changed my daughter's name from SANSKRITI. H to YUKTHA. H vide affidavit dated 09.06.2022, before notary C.K. Anupama, Bangalore. Henceforth she shall be called YUKTHA. H only.

I,AROCKIA DASS SILVESTER Residing atNo.82/1, RangaGokulam, Door No.202, Vijinapura, Doorvaninagar, Bangalore-560016have Changed my Name to AROCKIA DOSS SILVESTER vide Affidavit Dated: 02-06-2022 Sworn before Notary H.S.Sakalesh Aradhya, Bangalore

I, TUSHAR MANISH KUMAR AGRAWALA, R/at A2-1501, South City, Arekere Mico Layout, Bannerghatta Road, Bengaluru-560076 have changed my name to TUSHAR MANISH AGRAWALA, vide affidavit dated 13-06-2022 sworn before Notary:Ravi Kumar.V, Bengaluru

REKHA PANDAY W/O 14825695W HAV KULDEO TIWARI R/A MUSAITPUR BEWAMA AKBARPUR FAIZABAD MY NAME REKHA PANDAY TO REKHA TIWARI Notary KV MANI Bangalore

I, PREETHA Kumari Jayaprakash W/o Jayaprakash Paramananda Naik resident of No.95, 9th Main,4th Cross, NTI-Layout, Vidyaranyapura Bengaluru-97 do hereby change my name as Preetha Prakash Naik vide affidavit dated 11-06-2022 sworn before Notary M.S.Ballal Bengaluru.

I, HANAMANT S/o. Lagamanna Nagaral, Residing at #6/7, Ramaswamy Layout, Jayapura Hobali K.M. Hundi, Kadakola Post Mysore-571311, have changed my name to HANAMANT NAGARAL vide affidavit dated 13.06.2022 before notary C.V. Earappa, Bangalore.

I K. MARAPPA R/@ 302, SRK Orchids, 1st C Main, Jakkasandra Extension, Koramangala 1st Block, Bengaluru-34, Changed my name to K. MAREGOWDA vide affidavit dated-09/06/2022 before notary K.V. Mani, Bengaluru. Henceforth I shall be called K. MAREGOWDA

I SUNITHA. R #006, C-Block, Ground floor, SNR Verity Apartment, Thindlu, Sarjapura- 562125, have changed my name to SUNITHAREDDY vide affidavit dated- 11/06/2022 Before notary K.V. Mani, Bengaluru.

DEEPA SASI W/O 14825700W HAV/MT SENMADHAVAN R/A KANEEPRA KUZHIMATHICAD KOLLAM KERALA MY NAME DEEPA SASI TO DEEPA SASI M Notary KV MANI Bangalore

6505328Y, SEP/ASH, MONIRAM KURMI, Vill - Kolapani, Rajabari, Borholla, Jorhat, Assam, changed brother's name BINUT KURMI to BINUD KURMI 11/06/2022 Notary K.V. Mani Bangalore

BEENA SURESH W/O 14825638P HAV/MT SURESH K R/A CHINGOLI CHEPPAD ALAPPUZHA KERALA MY NAME BEENA SURESH TO BEENA PB Notary KV MANI Bangalore

I MANI. G #487 KSCB Quartres, Nandini Layout, Bengaluru-96 have changed my name to MANISH GOPI Vide affidavit dated 13/06/2022 before notary K.V Mani, Bengaluru.

TARANA BEGAM W/O 14817017F HAV/MT MD ABID ALAM R/A CHORHAR BHAGALPUR BIHAR MY NAME TARANA BEGAM TO BIBI TARANA Notary KV MANI Bangalore

JC672196M NB/SUB NARENDRA KUMAR SINGH 2ATC DAUGHTER Name records AARUSHI KUMARI Instead of ARUSHI KUMARI Notary KV MANI Bangalore

JC673470L NB/SUB MANIK CH MANDAL 2ATC MOTHER Name records BINITOI DEVI Instead of UNNATI MONDAL Notary KV MANI Bangalore

JC673527P NB/SUB SANJOY MONDAL 2ATC MOTHER Name records LOKHI MANDAL Instead of LAKSHI RANI MONDAL Notary KV MANI Bangalore

14825700W HAV/MT SENMADHAVAN 2ATC FATHER Name records MADHAVANPILLAI Instead of MADHAVANPILLAI N Notary KV MANI Bangalore

6492976A HAV VINOD KUMAR YADAV 2ATC SON Name records SURAYANSH YADAV Instead of SURYANSH YADAV Notary KV MANI Bangalore

I, SYED Hafeez Mansoor Residing at #10, 10th Main Tank Bund Road, Brindavan Nagar, Mathikere Bangalore have changed my daughter's name from SYEDA RASHIDA MANSOOR to SYEDA HIFZA MANSOOR vide affidavit dated 23.05.2022, before notary Chandrakala, Bangalore.

14825700W HAV/MT SENMADHAVAN 2ATC MOTHER Name records LALITHAMMA Instead of LALITHAMMA N Notary KV MANI Bangalore

14816905K HAV RAJNEESH KUMAR 2ATC SON Name records SHIWANSH Instead of SEEVANSH PANWAR Notary KV MANI Bangalore

14825714W HAV/MT RAMJEE KUMAR 2ATC SON Name records SHARVAN KUMAR Instead of SHRAVAN KUMAR Notary KV MANI Bangalore

6492976A HAV VINOD KUMAR YADAV 2ATC DAUGHTER Name records DIPTEE Instead of DIPTEE YADAV Notary KV MANI Bangalore

DH DECCAN HERALD — ಪ್ರಜಾವಾಣಿ

Classifieds EDUCATION SPECIAL

For More Details Contact:
Jerry Louis : 9731810277
Vishal GM : 9845114560
080- 45557161 | 163 |164
Email : dhclassifieds@deccanherald.co.in

SPECIAL RATES FOR
Admission Notice,
Education Success
Congratulation Ads

ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.,

ನಂ. 156, 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055.
ಫೋ: 080- 23341972/ 2344 2648 E mail: gm@jcbank.in / recovery@jcbank.in

ಸ್ಥಿರಾಸ್ತಿ ಬಹಿರಂಗ–ಹರಾಜು ಮಾರಾಟ ಪ್ರಕಟಣೆ

ಬ್ಯಾಂಕಿನ ಅಧಿಕೃತ ಅಧಿಕಾರಿಯು **ಸೆಕ್ಯೂರಿಟೈಜೇಶನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ಅಧಿಕಾರದನ್ವಯ ಅಧಿನಿಯಮದ ಪ್ರಕರಣ 13(2)** ರನ್ವಯ ಕೆಳಗಿನ ಸಾಲಗಾರರಿಗೆ ಡಿಮ್ಯಾಂಡ್ ನೋಟಿಸ್ ನೀಡಿದ್ದು, ಸಾಲಗಾರರು ಸಾಲದ ಹಣ ಮತ್ತು ಬಡ್ಡಿಯನ್ನು ಮರುಪಾವತಿ ಮಾಡಲು ವಿಫಲರಾದುದ್ದರಿಂದ ಬ್ಯಾಂಕಿಗೆ ಅಡಮಾನ ಮಾಡಿದ್ದ ಸ್ವತ್ತನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಮತ್ತು ಕೆಳ ಸಹಿದಾರರು ಅಧಿಕೃತ ಅಧಿಕಾರಿಯು ನಿಯಮ 13 (4) ಹಾಗೂ ರೂಲ್ 8(6) ರ ಅನ್ವಯ ಸಾಮರ್ಥ್ಯ ಹೊಂದಿರುವುದರಿಂದ ಸಾಲಕ್ಕೆ ಆಧಾರ ಮಾಡಿರುವ ಕೆಳಕಂಡ ಸ್ವತ್ತನ್ನು ರೂಲ್ 8(5)ರಲ್ಲಿರುವ ಯಾವುದಾದರೂ ಒಂದು ರೀತಿಯಲ್ಲಿ 'ಎಲ್ಲಿದೆಯೋ ಹೇಗಿದೆಯೋ ಮತ್ತು ಏನಿದೆಯೊ ಹಾಗೆಯೇ ಅದನ್ನು ಬಹಿರಂಗ– ಹರಾಜು ನಡೆಸಲಾಗುವುದು ಆಸಕ್ತಿ ಹೊಂದಿರುವ ಖರೀದಿದಾರರು ಈ ಕೆಳಕಂಡ ಸ್ವತ್ತಿನ ಖರೀದಿಗಾಗಿ ಹರಾಜಿನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ.

ಸಾಲಗಾರರು ಮತ್ತು ಜಾಮೀನುದಾರರ ಹೆಸರು ಮತ್ತು ವಿಳಾಸ	ಶ್ರೀಮತಿ ರಾಜರಾಜೇಶ್ವರಿ.ಎಮ್.ಎಸ್ ಶ್ರೀ ಶಾಂತರಾಜು ಇವರ ಧರ್ಮಪತ್ನಿ #384, 8ನೇ ಮೈನ್ ರಸ್ತೆ, 2ನೇ ಹಂತ 'ಎ' ಬ್ಲಾಕ್, ಮಲ್ಲೇಶ್ವರಂ ಪಶ್ಚಿಮ, ಬೆಂಗಳೂರು–5560055.
ಮಾರಾಟದ ದಿನಾಂಕ, ಸಮಯ ಮತ್ತು ಸ್ಥಳ	ದಿನಾಂಕ: 15.07.2022 ಮಧ್ಯಾಹ್ನ 12.00 ಘಂಟೆಗೆ ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., # 156, 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055.
ಮುಂಗಡ ಠೇವಣಿ	ರೂ.43,00,000/– (ನಲವತ್ತು ಮೂರು ಲಕ್ಷ ರೂಪಾಯಿಗಳು ಮಾತ್ರ)
ಮೀಸಲು ಬೆಲೆ	ರೂ.4,30,00,000/– ((ನಾಲ್ಕು ಕೋಟಿ ಮೂವತ್ತು ಲಕ್ಷ ರೂಪಾಯಿಗಳು ಮಾತ್ರ)
ಬಿಡ್‌ನ ಏರಿಕೆ ಗುಣಕ	ರೂ.1,00,000/– (ಒಂದು ಲಕ್ಷ ರೂಪಾಯಿಗಳು ಮಾತ್ರ)
ಬಾಕಿ ಬರಬೇಕಾದ ಮೊತ್ತ ದಿ:05.06.2022ರ ವರೆಗಿನ ಬಡ್ಡಿ ಸೇರಿ) ದಿ:06–06–2022 ರಿಂದ ಮುಂದುವರೆದ ಬಡ್ಡಿ ಹಾಗೂ ಇತರೆ ಖರ್ಚು ಅನ್ವಯಿಸುತ್ತದೆ.	ರೂ.4,15,67,274/– (ನಾಲ್ಕು ಕೋಟಿ ಹದಿನೈದು ಲಕ್ಷ ಅರವತ್ತೇಳು ಸಾವಿರದ ಇನ್ನೂರ ಎಪ್ಪತ್ತನಾಲ್ಕು ರೂಪಾಯಿಗಳು ಮಾತ್ರ)
ಮಾರಾಟಕ್ಕಿಟ್ಟ ಸ್ವತ್ತಿನ ಪರಿವೀಕ್ಷಣೆಯ ದಿನಾಂಕ & ಸಮಯ	ದಿ:14.07.2022 ರ ವರೆಗೆ ಎಲ್ಲಾ ವ್ಯವಹಾರದ ದಿನಗಳಲ್ಲಿ ಬೆಳಿಗ್ಗೆ 10.00 ರಿಂದ ಸಂಜೆ 6.00 ಘಂಟೆಯವರೆಗೆ

ಮಾರಾಟಕ್ಕಿಟ್ಟ ಸ್ಥಿರಾಸ್ತಿಯ ವಿವರ:

'ಬಿ' ಷೆಡ್ಯೂಲ್

ಬಿ.ಬಿ.ಎಮ್.ಪಿ ವಾರ್ಡ್ ನಂ.129, (ಮಲ್ಲತಹಳ್ಳಿ, ಜ್ಞಾನಭಾರತಿ) (ಹೊಸ ಪಿಐಡಿ ನಂ.129–W0005–23, ಮಲ್ಲತಹಳ್ಳಿ ವಿಲೇಜ್, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ನಿವೇಶನ ಕನ್ವರ್ಟೆಡ್ ಸರ್ವೆ ನಂ. 59/5 ಸೈಟ್‌ನಲ್ಲಿರುವ ನಂ. 146, ರಾಜರಾಜೇಶ್ವರಿ ಸಿಟಿ ಮುನಿಸಿಪಲ್ ಖಾತಾ ನಂ.579, ಹೊಸ ಮುನಿಸಿಪಲ್ ಖಾತಾ ನಂ.583/579/146/58/1/3/5 ಪೂರ್ವದಿಂದ ಪಶ್ಚಿಮಕ್ಕೆ: 59 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ– 40 ಅಡಿ ಮತ್ತು ಚೆಕ್ಕುಬಂದಿ: ಪೂರ್ವಕ್ಕೆ: ಸೈಟ್ ನಂ.120 ಪಶ್ಚಿಮಕ್ಕೆ: ರಸ್ತೆ,, ಉತ್ತರಕ್ಕೆ: ಸೈಟ್ ನಂ.145, ದಕ್ಷಿಣಕ್ಕೆ: ಸೈಟ್ ನಂ.147

'ಬಿ1' ಷೆಡ್ಯೂಲ್

ಕನ್ವರ್ಟೆಡ್ ಸರ್ವೆ ನಂ. 59/5 ರಲ್ಲಿ ಬಿ.ಬಿ.ಎಮ್.ಪಿ ವಾರ್ಡ್ ನಂ.129 (ಮಲ್ಲತಹಳ್ಳಿ, ಜ್ಞಾನಭಾರತಿ) ಹೊಸ ಪಿ.ಐ.ಡಿ. ನಂ.129–W1183–2)ನಲ್ಲಿರುವ ಸ್ಪೆಷಲ್ ಡೆಪ್ಯೂಟಿ ಕಮಿಷನರ್, ಬೆಂಗಳೂರು ಜಿಲ್ಲೆ ಇವರಿಂದ ದಿನಾಂಕ 05–02–2003ರಂದು ಕೊಡಲ್ಪಟ್ಟ ಕನ್ವರ್ಷನ್ ಆರ್ಡರ್ ಒ.ಎಮ್ ನಂ.ಬಿ.ಡಿಸ್.ಎ.ಎಲ್.ಎನ್.ಎಸ್.ಆರ್(ಎನ್) 62/02–03 ಪ್ರಕಾರ ಸೈಟ್ ನಂ.121, ರಾಜರಾಜೇಶ್ವರಿ ಸಿಟಿ ಮುನಿಸಿಪಲ್ ಖಾತಾ ನಂ.570/566/121/56/4/59/3/5 ನಲ್ಲಿರುವ ಸೈಟ್ ಪೂರ್ವದಿಂದ ಪಶ್ಚಿಮಕ್ಕೆ 59 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 40ಅಡಿ ಮತ್ತು ಚೆಕ್ಕುಬಂದಿ: ಪೂರ್ವಕ್ಕೆ: ರಸ್ತೆ ಪಶ್ಚಿಮಕ್ಕೆ: ಸೈಟ್ ನಂ.145 ಉತ್ತರಕ್ಕೆ: ಸೈಟ್ ನಂ.122. ದಕ್ಷಿಣಕ್ಕೆ: ಸೈಟ್ ನಂ.120

ಸಾಲಗಾರರು ಮತ್ತು ಜಾಮೀನುದಾರರ ಹೆಸರು ಮತ್ತು ವಿಳಾಸ	 ಶ್ರೀ ಶಾಂತರಾಜು ಶ್ರೀ ಅಂಕೇಗೌಡ ರವರ ಪುತ್ರ #384, 8ನೇ ಮೈನ್ ರಸ್ತೆ, 2ನೇ ಹಂತ 'ಎ' ಬ್ಲಾಕ್, ಮಲ್ಲೇಶ್ವರಂ ಪಶ್ಚಿಮ, ಬೆಂಗಳೂರು–5560055.
ಮಾರಾಟದ ದಿನಾಂಕ, ಸಮಯ ಮತ್ತು ಸ್ಥಳ	ದಿನಾಂಕ:15.07.2022 ಮಧ್ಯಾಹ್ನ 12.00 ಘಂಟೆಗೆ ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., # 156, 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055.
ಮುಂಗಡ ಠೇವಣಿ	ರೂ.30,00,000/– (ಮೂವತ್ತು ಲಕ್ಷ ರೂಪಾಯಿಗಳು ಮಾತ್ರ)
ಮೀಸಲು ಬೆಲೆ	ರೂ.3,00,00,000/– (ಮೂರು ಕೋಟಿ ರೂಪಾಯಿಗಳು ಮಾತ್ರ)
ಬಿಡ್‌ನ ಏರಿಕೆ ಗುಣಕ	ರೂ.1,00,000/– (ಒಂದು ಲಕ್ಷ ರೂಪಾಯಿಗಳು ಮಾತ್ರ)
ಬಾಕಿ ಬರಬೇಕಾದ ಮೊತ್ತ ದಿ:05.06.2022ರ ವರೆಗಿನ ಬಡ್ಡಿ ಸೇರಿ) ದಿ:06–06–2022 ರಿಂದ ಮುಂದುವರೆದ ಬಡ್ಡಿ ಹಾಗೂ ಇತರೆ ಖರ್ಚು ಅನ್ವಯಿಸುತ್ತದೆ.	ರೂ.2,87,86,135/– (ಎರಡು ಕೋಟಿ ಎಂಬತ್ತೇಳು ಲಕ್ಷ ಎಂಬತ್ತಾರು ಸಾವಿರದ ಒಂದುನೂರಮೂವತ್ತೈದು ರೂಪಾಯಿಗಳು ಮಾತ್ರ)
ಮಾರಾಟಕ್ಕಿಟ್ಟ ಸ್ವತ್ತಿನ ಪರಿವೀಕ್ಷಣೆಯ ದಿನಾಂಕ & ಸಮಯ	ದಿ:14.07.2022ರ ವರೆಗೆ ಎಲ್ಲಾ ವ್ಯವಹಾರದ ದಿನಗಳಲ್ಲಿ ಬೆಳಿಗ್ಗೆ 10.00 ರಿಂದ ಸಂಜೆ 6.00 ಘಂಟೆಯವರೆಗೆ

ಮಾರಾಟಕ್ಕಿಟ್ಟ ಸ್ಥಿರಾಸ್ತಿಯ ವಿವರ:

ಷೆಡ್ಯೂಲ್

ಮಲ್ಲತಹಳ್ಳಿ ವಿಲೇಜ್‌ನ ಕನ್ವರ್ಟೆಡ್ ಸರ್ವೆ ನಂ. 59/5, ಮಲ್ಲತಹಳ್ಳಿ ವಿಲೇಜ್, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಬಿಬಿಎಂಪಿ ವಾರ್ಡ್ 129 (ಮಲ್ಲತಹಳ್ಳಿ, ಜ್ಞಾನಭಾರತಿ) ಇದರಲ್ಲಿನ ನಂ.145, ರಾಜರಾಜೇಶ್ವರಿ ಸಿಟಿ ಮುನಿಸಿಪಲ್ ಹಳೆಯ ಖಾತಾ ನಂ.585, ಹೊಸ ಮುನಿಸಿಪಲ್ ಖಾತಾ ನಂ.583/579/145/146/58/1/3/5 (ಹೊಸ ಪಿ.ಐ.ಡಿ. ನಂ.129–W0005–23) ಪೂರ್ವದಿಂದ ಪಶ್ಚಿಮಕ್ಕೆ–59 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ–40 ಅಡಿ ಚೆಕ್ಕುಬಂದಿ: ಪೂರ್ವಕ್ಕೆ: ಸೈಟ್ ನಂ.121, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಸೈಟ್ ನಂ.144, ದಕ್ಷಿಣಕ್ಕೆ: ಸೈಟ್ ನಂ.146.

ಇತರೆ ನಿಯಮ ಮತ್ತು ನಿಬಂಧನೆಗಳು

1. ಆಸಕ್ತ ಬಿಡ್ಡುದಾರರು ಮೀಸಲು ಬೆಲೆಯ ಶೇ10% ರಷ್ಟು ಇಎಂಡಿ ಗಳನ್ನು ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., ಹೆಸರಿಗೆ ಡಿಡಿ/ನಗದು ಅಥವಾ ಅಕೌಂಟ್ ನಂ. 20012004, ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., ಮಲ್ಲೇಶ್ವರಂ, ಬೆಂಗಳೂರು–560055 ಇವರ ಐ.ಎಫ್.ಎಸ್.ಸಿ ಕೋಡ್ HDFCOCJCBKL ಆನ್‌ಲೈನ್ (ಆರ್.ಟಿ.ಜಿ.ಎಸ್/ ಎನ್.ಇ.ಎಫ್.ಟಿ ವರ್ಗಾವಣೆ) ಅಥವಾ ನಗದು ಮೂಲಕ ಅವರ ಖಾತೆಗೆ ದಿನಾಂಕ: 15–07–2022 ಬೆಳಿಗ್ಗೆ 11.00 ಘಂಟೆಯೊಳಗೆ ಜಮೆಯಾಗುವಂತೆ ಪಾವತಿ ಮಾಡಬೇಕು. ಆಸಕ್ತ ಬಿಡ್ಡುದಾರರು ಅವರ ಗುರುತಿನ ಪುರಾವೆ ಮತ್ತು ಪ್ಯಾನ್‌ಕಾರ್ಡ್‌ನ್ನು ಅಧಿಕೃತ ಅಧಿಕಾರಿ **ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.,** ಮಲ್ಲೇಶ್ವರಂ, ಬೆಂಗಳೂರು–560055 ಇವರಿಗೆ ತಲುಪಿಸಬೇಕು. ಇಎಂಡಿಗೆ ಯಾವುದೇ ಬಡ್ಡಿ ಅನ್ವಯಿಸುವುದಿಲ್ಲ
2. ಸ್ಥಿರಾಸ್ತಿಯನ್ನು ಮೀಸಲು ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಲಾಗುವುದಿಲ್ಲ.
3. ಯಶಸ್ವಿಯಾದ ಬಿಡ್ಡುದಾರರು/ಆತನ/ಆಕೆಯ ಪರವಾಗಿ ಬಿಡ್ಡು ತೀರ್ಮಾನವಾದ ಕೂಡಲೇ ಮಾರಾಟ ಬೆಲೆಯ 25 % ಮೊತ್ತವನ್ನು (ಈಗಾಗಲೇ ಪಾವತಿ ಮಾಡಿರುವ ಇಎಂಡಿ ಸೇರಿದಂತೆ) ಪಾವತಿ ಮಾಡಬೇಕು ಬಾಕಿ 75 % ಹಣವನ್ನು ಮಾರಾಟ ದೃಢೀಕರಣವಾದ ದಿನಾಂಕದಿಂದ 15 ದಿನಗಳ ಒಳಗೆ **ದಿ ಜನತಾ ಕೋ–ಆಪರೇಟಿವ್** ಬ್ಯಾಂಕ್ ಲಿ., ಮಲ್ಲೇಶ್ವರಂ, ಬೆಂಗಳೂರು–560055. ಇವರ ಹೆಸರಿಗೆ ಪಡೆದ ಡಿಡಿ ಅಥವಾ **ಅಕೌಂಟ್ ನಂ.20012004 ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., ಮಲ್ಲೇಶ್ವರಂ, ಬೆಂಗಳೂರು–560055. ಐಎಫ್‌ಎಸ್‌ಸಿ ಕೋಡ್ HDFCOCJCBKL ಆನ್‌ಲೈನ್ (ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ/ ವರ್ಗಾವಣೆ)** ಮೂಲಕ ಜಮೆಯಾಗುವಂತೆ ಪಾವತಿ ಮಾಡಬೇಕು.
4. .ಯಶಸ್ವಿಯಾದ ಬಿಡ್ಡುದಾರರು ಮೇಲೆ ತಿಳಿಸಿರುವಂತೆ ಮಾರಾಟ ಬೆಲೆ ಪಾವತಿಸಲು ವಿಫಲವಾದರೆ ಅವರು ಪಾವತಿ ಮಾಡಿರುವ ಮುಂಗಡ ಹಣ ಮುಟ್ಟುಗೋಲು ಹಾಕಿಕೊಳ್ಳಲಾಗುವುದು,
5. ಮಾರಾಟಕ್ಕಿಟ್ಟಿರುವ ಸ್ಥಿರಾಸ್ತಿಯನ್ನು ಎಲ್ಲಿದೆಯೋ ಹೇಗಿದೆಯೋ ಹಾಗೆಯೇ ಮತ್ತು ಎಲ್ಲಿ ಏನಿದೆಯೋ ಹಾಗೆಯೇ ಆಧಾರದ ಮೇಲೆ ಮಾರಾಟ ಮಾಡಲಾಗುವುದು ಆಸ್ತಿಯ ಒಡೆತನ, ಶಾಸನಬದ್ಧ ಮಾನ್ಯತೆಗಳು, ಋಣಭಾರ, ಕ್ಲೈಮ್/ಹಕ್ಕು/ಬಾಕಿ ಇತ್ಯಾದಿಗಳ ಕುರಿತು ಬಿಡ್ಡು ಸಲ್ಲಿಸುವ ಮೊದಲೇ ಬಿಡ್ಡುದಾರರೇ ವಿಚಾರಣೆ ಮಾಡತಕ್ಕದ್ದು, ನಂತರದ ಯಾವುದೇ ತಕರಾರುಗಳಿಗೆ ಬ್ಯಾಂಕು ಜವಾಬ್ದಾರರಾಗುವುದಿಲ್ಲ ಸ್ವತ್ತಿಗೆ ಸಂಬಂಧಪಟ್ಟಂತೆ ಹಾಲಿಯಿರುವ ಮತ್ತು ಮುಂದೆ ಉಂಟಾಗುವುದು ಸೇರಿದಂತೆ ಸರ್ಕಾರಕ್ಕೆ / ಯಾವುದೇ ಪ್ರಾಧಿಕಾರಕ್ಕೆ ಇತ್ಯಾದಿಯವರಿಗೆ ಪಾವತಿಸಬೇಕಾದ ಮುದ್ರಾಂಕ ಶುಲ್ಕ, ಮಾರಾಟ ಸರ್ಟಿಫಿಕೇಟ್ ನೋಂದಣಿ ಶುಲ್ಕ ಎಲ್ಲಾ ತೆರಿಗೆಗಳು/ದರಗಳು, ಶಾಸನಬದ್ಧ ಬಾಕಿಗಳನ್ನು ಇತ್ಯಾದಿ, ಎಲ್ಲಾ ಇತರೆ ಖರ್ಚುಗಳನ್ನು ಖರೀದಿದಾರರೇ ಪಾವತಿಸಬೇಕು.
6. ಹರಾಜಿನಲ್ಲಿ ಭಾಗವಹಿಸಲು ಬಿಡ್ಡುದಾರುಗಳಿಗೆ ಮಾತ್ರ ಅವಕಾಶ ಬಿಡ್ಡುದಾರರ ಪರವಾಗಿ ಜಿಪಿಎ ಹೊಂದಿರುವವರು/ಏಜಂಟರುಗಳು/ಬೇರೆ ಯಾರಿಗೂ ಅವಕಾಶ ಇರುವುದಿಲ್ಲ.
7. ದಿನಾಂಕಕ್ಕೆ ಮೊದಲು ಮೇಲ್ಕಂಡ ಸಾಲವನ್ನು ಚುಕ್ತಾ ಮಾಡದಿದ್ದಲ್ಲಿ ಮೇಲೆ ತಿಳಿಸಿದ ದಿನಾಂಕದಂದು ನಡೆಯಲಿರುವ ಬಹಿರಂಗ ಹರಾಜಿನ ಬಗ್ಗೆ ಸಾಲಗಾರರಿಗೆ ಇದು ಸೂಚನಾ ಪತ್ರ ಕೂಡ ಆಗಿರುತ್ತದೆ.
8. ಮುಂಚಿತವಾಗಿ ತಿಳಿಸದೆ ಮತ್ತು ಯಾವುದೇ ಕಾರಣ ನೀಡದೇ, ಯಾವುದೇ ಬಿಡ್ಡನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಥವಾ ಮಾರಾಟ ಮುಂದೂಡುವ/ ರದ್ದು ಪಡಿಸುವ ಹಕ್ಕನ್ನು ಅಧಿಕೃತ ಅಧಿಕಾರಿಯವರು ಹೊಂದಿರುತ್ತಾರೆ.
9. ಅಧಿಕೃತ ಅಧಿಕಾರಿಯವರಿಗೆ ತಿಳಿದಿರುವಂತೆ ಅಡಮಾನ ಮಾಡಿರುವ ಸ್ವತ್ತಿನ ಬಗ್ಗೆ ಮಾಹಿತಿ ಇರುತ್ತದೆ ಹಾಗೂ ಏನಾದರೂ ತಪ್ಪು ಮಾಹಿತಿ ಇದ್ದಲ್ಲಿ ಇದಕ್ಕೆ ಅಧಿಕೃತ ಅಧಿಕಾರಿಯವರು ಜವಾಬ್ದಾರರಲ್ಲ.

Note: The intending bidders may contact Smt.Vinoda Shivaramaiah, Chief Executive Officer, The Janatha Co-operative Bank Ltd., Malleswaram, Bangalore-560055. Mobile No.9900856389 or Sri.Dharanendrakumar. B Recovery Officer, Mobile No.9844048485 for ascertaining the details of property and Contact Phone No.080-23449450, 23469560, 23442648 for inspection of Property.

ದಿನಾಂಕ:06.06.2022
ಸ್ಥಳ: ಬೆಂಗಳೂರು

ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.,
ಸಹಿ/–ಅಧಿಕೃತ ಅಧಿಕಾರಿಗಳು

76 ಸ್ಥಳಗಳನ್ನು ಸುಂದರಗೊಳಿಸುವ ಯೋಜನೆಗೆ ₹6.18 ಕೋಟಿ ವೆಚ್ಚ: ಬಿಬಿಎಂಪಿ

ಕಸ ಸುರಿವ ತಾಣ ತೆರವಿಗೆ ಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ಮನೆಗಳಲ್ಲಿ ಉತ್ಪತ್ತಿಯಾಗುವ ಕಸ ಸಂಗ್ರಹಣೆ ಮತ್ತು ಸಾಗಣೆಗೆ ಪ್ರತಿ ತಿಂಗಳು ಅಂದಾಜು ₹50 ಕೋಟಿ ವೆಚ್ಚ ಮಾಡುವ ಬಿಬಿಎಂಪಿ, ಕಸ ಸುರಿಯುವ ತಾಣ(ಬ್ಲಾಕ್ ಸ್ಪಾಟ್) ತೆರವಿಗೆ ₹6.18 ಕೋಟಿ ಮೊತ್ತದ ಯೋಜನೆಯೊಂದನ್ನು ಸಿದ್ಧಪಡಿಸಿದೆ. ಈ ರೀತಿಯ 76 ಸ್ಥಳಗಳನ್ನು ಸುಂದರ ತಾಣವಾಗಿ ಪರಿವರ್ತಿಸಲು ಯೋಜನೆ ರೂಪಿಸಿದೆ.

‘ಶುಭ್ರ ಬೆಂಗಳೂರು ಕಾರ್ಯಕ್ರಮದ ಭಾಗವಾಗಿ ಈ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ಇಡೀ ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಈ ರೀತಿಯ ತಾಣಗಳನ್ನು ನಿರ್ಮೂಲನೆ ಮಾಡುವುದು ಇದರ ಉದ್ದೇಶ’ ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಘನತ್ಯಾಜ್ಯ ನಿರ್ವಹಣೆ) ಡಾ.ಹರೀಶ್‌ಕುಮಾರ್ ತಿಳಿಸಿದರು.

‘ಪ್ರತಿದಿನ ಸ್ವಚ್ಛಗೊಳಿಸುವ ಸುಮಾರು 1,479 ಸ್ಥಳಗಳನ್ನು ಗುರುತಿಸಿದ್ದೇವೆ. ಅಲ್ಲಿ ಪ್ರತಿದಿನವೂ ಕಸ ತೆಗೆಯಲಾಗುತ್ತಿದೆ. ಶಾಶ್ವತವಾಗಿ ಕಸ ಇರುವ ತಾಣವಾಗಿದ್ದ 118 ಸ್ಥಳಗಳನ್ನು

ಈಗ 76ಕ್ಕೆ ಇಳಿಸಲಾಗಿದೆ. ಇವುಗಳು ಇಲ್ಲದಂತೆ ಮಾಡುವುದು ಹೊಸ ಯೋಜನೆಯ ಉದ್ದೇಶ’ ಎಂದು ಹೇಳಿದರು.

‘ಆ ಜಾಗದ ಸೌಂದರ್ಯ ಹೆಚ್ಚಿಸುವುದು ಮತ್ತು ಮೂರು ತಿಂಗಳು ಕಾವಲಿದ್ದು (ಕಾವಲುಗಾರರ ನೇಮಕ ಅಥವಾ ಸಿಸಿಟಿವಿ ಕ್ಯಾಮೆರಾ ಅಳವಡಿಕೆ) ಕಸ ಸುರಿಯದಂತೆ ನೋಡಿಕೊಳ್ಳುವುದು ಕೂಡ ಈ ಯೋಜನೆಯಲ್ಲಿ ಸೇರಿದೆ. ಟೆಂಡರ್ ಕರೆಯಲಾಗಿದ್ದು, ಸದ್ಯದಲ್ಲೇ ಅಂತಿಮಗೊಳಿಸಲಾಗುವುದು’ ಎಂದರು.

‘ಈಗಿರುವ ಕಸ ನಿರ್ಹವಹಣೆ ಗುತ್ತಿಗೆಯಲ್ಲಿ ಮನೆ-ಮನೆಯಿಂದ ಕಸ ಸಂಗ್ರಹಿಸಿ ನೆಲಭರ್ತಿ ಘಟಕಕ್ಕೆ ಸಾಗಿಸುವುದಷ್ಟೇ ಸೇರಿತ್ತು. ರಸ್ತೆ ಬದಿ ಬೀಳುವ ಕಸ, ಪ್ರಾಣಿಗಳ ತ್ಯಾಜ್ಯಕ್ಕೆ ಆ ಗುತ್ತಿಗೆದಾರರು ಹೊಣೆಗಾರರಾಗಿರಲಿಲ್ಲ. ಹೊಸದಾಗಿ ಟೆಂಡರ್ ಪ್ರಕ್ರಿಯೆ ನಡೆಸಲು ಉದ್ದೇಶಿಸಲಾಗಿದ್ದು, ಹೊಸ ಗುತ್ತಿಗೆಯಲ್ಲಿ ಈ ಎಲ್ಲವನ್ನೂ ಸೇರಿಸಲಾಗುತ್ತಿದೆ. ಅದು ಜಾರಿಗೆ ಬರಲು ಕೆಲವು ತಿಂಗಳು ಬೇಕಾಗುತ್ತದೆ. ಆ ತನಕ ಕಸ ಸುರಿಯುವ ತಾಣಗಳನ್ನು ತೆರವುಗೊಳಿಸಬೇಕಾಗಿದೆ. ಆದ್ದರಿಂದ ಈ ಯೋಜನೆ ರೂಪಿಸಲಾಗಿದೆ’ ಎಂದು ವಿವರಿಸಿದರು.

ಹೊಸ ಟೆಂಡರ್ ಅಂತಿಮಗೊಳಿಸಲು ವಾರ್ಡ್‌ಗಳ ಮರು ವಿಂಗಡಣೆ ಪ್ರಕ್ರಿಯೆಯನ್ನು ಕಾಯಲಾಗುತ್ತಿದೆ. ಹೊಸದಾಗಿ ವಾರ್ಡ್‌ಗಳು ರಚನೆಯಾದ ಬಳಿಕ ಟೆಂಡರ್ ಅಂತಿಮಗೊಳಿಸಲು ಉದ್ದೇಶಿಸಲಾಗಿದೆ ಎಂದು ಅವರು ಹೇಳಿದರು.

‘100 ಕೆ.ಜಿಗೂ ಹೆಚ್ಚಿನ ಕಸ: ಪಾಲಿಕೆ ಹೊಣೆಯಲ್ಲ’

‘100 ಕೆ.ಜಿಗಿಂತ ಹೆಚ್ಚು ಕಸ ಉತ್ಪತ್ತಿಯಾಗುತ್ತಿದ್ದರೆ ಅದರ ಸಾಗಣೆ ಮತ್ತು ಸಂಸ್ಕರಣೆ ಮಾಡುವ ಜವಾಬ್ದಾರಿಯನ್ನು ಬಿಬಿಎಂಪಿ ಇನ್ನು ಮುಂದೆ ವಹಿಸಿಕೊಳ್ಳುವುದಿಲ್ಲ’ ಎಂದು ಹರೀಶ್‌ಕುಮಾರ್ ಹೇಳಿದರು.

‘100 ಕೆ.ಜಿಗೂ ಹೆಚ್ಚು ಕಸ ಉತ್ಪತ್ತಿಯಾಗುತ್ತಿದ್ದರೆ ಅದನ್ನು ಯಾವುದೇ ಸ್ಥಳೀಯ ಆಡಳಿತ ನಿರ್ವಹಣೆ ಮಾಡಬಾರದು ಎಂದು ಕಸ ನಿರ್ವಹಣೆ ನಿಯಮಾವಳಿ ಹೇಳುತ್ತದೆ. ಅದನ್ನು ಈ ವರ್ಷದಿಂದ ಜಾರಿಗೆ ತರುತ್ತೇವೆ’ ಎಂದರು. ‘ಹಾಗೆಂದ ಮಾತ್ರಕ್ಕೆ ಕಸವನ್ನು ಅವರು ಎಲ್ಲೆಂದರಲ್ಲಿ ಎಸೆಯಲು ಬಿಡುವುದಿಲ್ಲ. ಅವರು ಹೇಗೆ ಕಸ ಸಂಸ್ಕರಣೆ ಮಾಡುತ್ತಿದ್ದಾರೆ, ಯಾವ ಸಂಸ್ಥೆಯ ಸಹಕಾರ ಪಡೆದಿದ್ದಾರೆ ಎಂಬುದರ ಮೇಲೆ ಪಾಲಿಕೆ ನಿಗಾ ಇಡಲಿದೆ’ ಎಂದು ಅವರು ಸ್ಪಷ್ಟಪಡಿಸಿದರು.

ಪಾಲಿಕೆ ಆಸ್ತಿಗಳ ಹೊಸ ಸರ್ವೆ

‘ಪಾಲಿಕೆ ಆಸ್ತಿಗಳನ್ನು ಗುರುತಿಸಲು ಹೊಸ ಸರ್ವೆಯನ್ನು ಪಾಲಿಕೆ ಕೈಗೆತ್ತಿಕೊಳ್ಳುತ್ತಿದ್ದು, ಇದಕ್ಕಾಗಿ ಕಂದಾಯ ಇಲಾಖೆ ಭೂಮಾಪಕರ ಸಹಕಾರ ಪಡೆಯಲಾಗುತ್ತಿದೆ’ ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಘನ ತ್ಯಾಜ್ಯ ನಿರ್ವಹಣೆ) ಹರೀಶ್‌ಕುಮಾರ್ ಹೇಳಿದರು.

‘ಬಿಬಿಎಂಪಿಗೆ ಬಿಡಿಎ ಹಸ್ತಾಂತರಿಸುವ ಬಡಾವಣೆಗಳ ಸಾರ್ವಜನಿಕ ಆಸ್ತಿಗಳ ಬಗ್ಗೆ ಸರ್ವೆ ಆಗಬೇಕಿದೆ. ಒತ್ತುವರಿಯಾಗಿದ್ದರೆ ತೆರವು ಗೊಳಿಸಲಾಗುವುದು. ಆ ಜಾಗಗಳನ್ನು ಕಸ ನಿರ್ವಹಣೆ, ಆರೋಗ್ಯ ಕೇಂದ್ರಗಳ ರೀತಿಯ ಸಾರ್ವಜನಿಕ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳಲು ಸಹಾಯ ಆಗಲಿದೆ’ ಎಂದರು.

ರಕ್ಷಣಾ ಪಡೆಗಳಲ್ಲಿ ಹೆಚ್ಚಿದ ಸ್ತ್ರೀಶಕ್ತಿ: ರಾಷ್ಟ್ರಪತಿ ಮೆಚ್ಚುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಕ್ಷಣಾ ಪಡೆಗಳಿಗೆ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿರುವುದು ಸಂತಸದ ಸಂಗತಿ’ ಎಂದು ರಾಷ್ಟ್ರಪತಿ ರಾಮನಾಥ ಕೋವಿಂದ್ ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ರಾಷ್ಟ್ರೀಯ ಮಿಲಿಟರಿ ಶಾಲೆಯ ಅಮೃತ ಮಹೋತ್ಸವ ಸಮಾರಂಭವನ್ನು ಸೋಮವಾರ ಉದ್ಘಾಟಿಸಿದ ಅವರು, ‘ಯುದ್ಧದ ಸನ್ನಿವೇಶಗಳು ಸೇರಿದಂತೆ ರಕ್ಷಣೆಗೆ ಸಂಬಂಧಿಸಿದ ಎಲ್ಲ ವಲಯಗಳಲ್ಲೂ ಮಹಿಳೆಯರು ಪ್ರಮುಖ ಪಾತ್ರವಹಿಸುತ್ತಿದ್ದಾರೆ’ ಎಂದರು.

‘ದೇಶದಾದ್ಯಂತ ಇರುವ ರಾಷ್ಟ್ರೀಯ ಮಿಲಿಟರಿ ಶಾಲೆಗಳಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಬಾಲಕಿಯರಿಗೆ ಪ್ರವೇಶ ಅವಕಾಶ ಕಲ್ಪಿಸಲಾಗಿದೆ. ಜತೆಗೆ, ಈ ವರ್ಷದ ಆರಂಭದಿಂದ ರಾಷ್ಟ್ರೀಯ ರಕ್ಷಣಾ ಅಕಾಡೆಮಿಯಲ್ಲಿಯೂ (ಎನ್‌ಡಿಎ) ಬಾಲಕಿಯರಿಗೆ ಮುಕ್ತಗೊಳಿಸಿರುವುದು ಶ್ಲಾಘನೀಯ’ ಎಂದರು.

ಆರ್ಮಿ ಏವಿಯೇಷನ್ ಕೋರ್ ಸೇರಿದ ಮೊದಲ ಮಹಿಳಾ ಅಧಿಕಾರಿ ಕ್ಯಾಪ್ಟನ್ ಅಭಿಲಾಷ್ ಬರಾಕ್ ಅವರ ಸಾಧನೆಯನ್ನು ಪ್ರಸ್ತಾಪಿಸಿದ ಅವರು, ‘ಪ್ರತಿಷ್ಠಿತ ರಾಷ್ಟ್ರೀಯ ಮಿಲಿಟರಿ ಶಾಲೆ ಸೇರುವ ಬಾಲಕಿಯರು ಸಹ ಇದೇ ರೀತಿ ರಾಷ್ಟ್ರ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಲಿದ್ದಾರೆ’ ಎಂದು ಆಶಯ ವ್ಯಕ್ತಪಡಿಸಿದರು.

‘ಬೆಂಗಳೂರಿನ ರಾಷ್ಟ್ರೀಯ ಮಿಲಿಟರಿ ಶಾಲೆಯು ಶ್ರೀಮಂತ ಇತಿಹಾಸ ಮತ್ತು ಪರಂಪರೆ ಹೊಂದಿದೆ. ಈ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳು ವಿವಿಧ ಕ್ಷೇತ್ರಗಳಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಈ ಶಾಲೆಯ ಕ್ಯಾಪ್ಟನ್ ಗುರ ಬಚನ್ ಸಿಂಗ್ ಸಲರಿಯಾ ಅವರು ಮರಣೋತ್ತರವಾಗಿ ಪರಮವೀರ ಚಕ್ರ ಪಡೆದಿರುವುದು ಹೆಮ್ಮೆಯ ವಿಷಯ. ಕಾಂಗೊದಲ್ಲಿ ವಿಶ್ವಸಂಸ್ಥೆ ನಡೆಸಿದ ಕಾರ್ಯಾಚರಣೆಯಲ್ಲಿ ಅವರು ಹುತಾತ್ಮರಾಗಿದ್ದರು’ ಎಂದು ರಾಷ್ಟ್ರಪತಿ ಸ್ಮರಿಸಿದರು.

ವಿಶೇಷ ಲಕೋಟೆಯನ್ನು ರಾಷ್ಟ್ರಪತಿ ಅವರು ಬಿಡುಗಡೆಗೊಳಿಸಿದರು. ಸ್ಮರಣ ಸಂಚಿಕೆಯನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಬಿಡುಗಡೆ ಮಾಡಿದರು. ರಾಷ್ಟ್ರಪತಿ ಅವರ ಪತ್ನಿ ಸವಿತಾ ಕೋವಿಂದ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದ್ದರು.

ಬೆಂಗಳೂರಿನ ರಾಷ್ಟ್ರೀಯ ಮಿಲಿಟರಿ ಶಾಲೆಯ ಅಮೃತ ಮಹೋತ್ಸವದ ಅಂಗವಾಗಿ ಆಯೋಜಿಸಲಾಗಿದ್ದ ಚಿತ್ರಗಳ ಪ್ರದರ್ಶನವನ್ನು ರಾಷ್ಟ್ರಪತಿ ರಾಮನಾಥ ಕೋವಿಂದ್ ವೀಕ್ಷಿಸಿದರು. ರಾಷ್ಟ್ರಪತಿ ಅವರ ಪತ್ನಿ ಸವಿತಾ ಕೋವಿಂದ್, ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದ್ದರು.

ಮಿಲಿಟರಿ ಶಾಲೆಯ ಇತಿಹಾಸ

1946ರ ಆಗಸ್ಟ್ 1ರಂದು ಬೆಂಗಳೂರಿನ ರಾಷ್ಟ್ರೀಯ ಮಿಲಿಟರಿ ಶಾಲೆ ಆರಂಭವಾಯಿತು. ಆರನೇ ಕಿಂಗ್ ಜಾರ್ಜ್ ಅವರು ಈ ಶಾಲೆ ಆರಂಭಿಸಿದ್ದರು.

ಪ್ರಸ್ತುತ ಜಮ್ಮು ಮತ್ತು ಕಾಶ್ಮೀರ ಸೇರಿದಂತೆ 23 ರಾಜ್ಯಗಳ ವಿದ್ಯಾರ್ಥಿಗಳು ಈ ಶಾಲೆಯಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ದೇಶದಲ್ಲೇ ಅತ್ಯುತ್ತಮ ವಸತಿಯುತ ಶಾಲೆಗಳಲ್ಲಿ ಇದು ಒಂದಾಗಿದೆ.

ಶೌರ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧೈರ್ಯ ಹಾಗೂ ಸಾಹಸ ಪ್ರದರ್ಶಿಸಿ ಇತರರ ಪ್ರಾಣ ರಕ್ಷಿಸಿದ 6 ರಿಂದ 18 ವರ್ಷದೊಳಗಿನ ಮಕ್ಕಳಿಗೆ ಶೌರ್ಯ ಪ್ರಶಸ್ತಿ ನೀಡಲು ಕರ್ನಾಟಕ ರಾಜ್ಯ ಶಿಶು ಕಲ್ಯಾಣ ಸಂಸ್ಥೆಯು ಅರ್ಹರಿಂದ ಅರ್ಜಿಗಳನ್ನು ಆಹ್ವಾನಿಸಿದೆ.

2021ರ ಜುಲೈ 1ರಿಂದ ಸೆಪ್ಟೆಂಬರ್ 30ರೊಳಗೆ ನಡೆದ ಪ್ರಕರಣಗಳಲ್ಲಿ ಸಾಹಸ ಪ್ರದರ್ಶಿಸಿದ ಮಕ್ಕಳು, ಜುಲೈ 31ರೊಳಗೆ ಅರ್ಜಿಗಳನ್ನು ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗೆ 23330846 ಮತ್ತು 22925898 ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

ಕೇಂದ್ರದ ದ್ವೇಷ ರಾಜಕಾರಣ: ಆರೋಪ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ‘ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಸೇರಿ ಪಕ್ಷದ ನಾಯಕರ ಮೇಲೆ ತನಿಖಾ ಸಂಸ್ಥೆಗಳನ್ನು ಛೂ ಬಿಡುವ ಮೂಲಕ ಕೇಂದ್ರವು ದ್ವೇಷಮಯ ರಾಜಕಾರಣಕ್ಕೆ ಮುಂದಾಗಿದೆ’ ಎಂದು ಆರೋಪಿಸಿ ಕಾಂಗ್ರೆಸ್ ಕಾರ್ಯಕರ್ತರು ಎಚ್‌ಎಸ್‌ಆರ್ ಬಡಾವಣೆ ಕೆಂಪೇಗೌಡ ವೃತ್ತದ ಬಳಿ ಸೋಮವಾರ ಪ್ರತಿಭಟಿಸಿದರು.

ಎಚ್‌ಎಸ್‌ಆರ್ ಬ್ಲಾಕ್ ಕಾಂಗ್ರೆಸ್ ಸಮಿತಿ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ನೂರಾರು ಸಂಖ್ಯೆಯಲ್ಲಿ ಸೇರಿದ್ದ ಕಾರ್ಯಕರ್ತರು, ಕೇಂದ್ರ ಸರ್ಕಾರದ ವಿರುದ್ಧ ಭಿತ್ತಿಪತ್ರ ಪ್ರದರ್ಶಿಸಿ, ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

‘ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರದ ಎಂಟು ವರ್ಷಗಳ ಆಡಳಿತದಲ್ಲಿ ದೇಶದ ಆರ್ಥಿಕತೆ ಪಾತಾಳಕ್ಕೆ ಇಳಿದಿದೆ. ಬೆಲೆ ಏರಿಕೆಯಿಂದ ತತ್ತರಿಸಿ ಹೋಗಿರುವ ಸಾಮಾನ್ಯ ಜನರು ಸರ್ಕಾರದ ವಿರುದ್ಧ ಹಿಡಿಶಾಪ ಹಾಕುತ್ತಿದ್ದಾರೆ. 3ನೇ ಅವಧಿಗೂ ಅಧಿಕಾರದ ಹಗಲುಗನಸು ಕಾಣುತ್ತಿದ್ದ ಮೋದಿಗೆ ಭ್ರಮನಿರಸನ ಆಗಿದೆ. ಕಾಂಗ್ರೆಸ್ ಪರ್ಯಾಯ ಶಕ್ತಿಯಾಗಿ ಬೆಳೆಯುತ್ತಿರುವುದನ್ನು ಸಹಿಸದ ಮೋದಿ ನೇತೃತ್ವದ ಸರ್ಕಾರ, ಕಾಂಗ್ರೆಸ್ ನಾಯಕರ ಮೇಲೆ ತನಿಖಾ ಸಂಸ್ಥೆಯನ್ನು ಛೂ ಬಿಟ್ಟಿದೆ. ಬಿಜೆಪಿಯವರ ಉದ್ದೇಶ ತಂತ್ರ ಫಲಿಸುವುದಿಲ್ಲ’ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ.ವಾಸುದೇವರೆಡ್ಡಿ ಎಚ್ಚರಿಸಿದರು.

ಕೆಪಿಸಿಸಿ ಸದಸ್ಯ ವಾಸುದೇವರೆಡ್ಡಿ ಮಾತನಾಡಿ, ‘ಬಿಜೆಪಿಗೆ ತನ್ನ ಕೋಮುವಾದಿ ಅಜೆಂಡಾ ಹೆಚ್ಚು ದಿನ ಬಾಳಿಕೆ ಬರುವುದಿಲ್ಲ ಎಂಬುದು ಮನವರಿಕೆಯಾಗಿದ್ದು, ಇಡಿ, ಸಿಬಿಐ, ಆದಾಯ ತೆರಿಗೆ ಸಂಸ್ಥೆಗಳ ಮೂಲಕ ಕಾಂಗ್ರೆಸ್ ನಾಯಕರನ್ನು ಕಟ್ಟಿಹಾಕಲು ಯತ್ನಿಸಿದೆ. ಇಂತಹ ಬೆದರಿಕೆ ತಂತ್ರಗಳಿಗೆ ಕಾಂಗ್ರೆಸ್ ಎಂದೂ ತಲೆಬಾಗಿಲ್ಲ’ ಎಂದರು.

ಯುವ ಕಾಂಗ್ರೆಸ್ ಅಧ್ಯಕ್ಷ ಡಾ.ಅನಿಲ್ ರೆಡ್ಡಿ, ಮುಖಂಡ ಜಗದೀಶ್‌ಗೌಡ, ರಾಮಚಂದ್ರ ಹಾಜರಿದ್ದರು.

ಬೊಮ್ಮನಹಳ್ಳಿಯ ಕಾಂಗ್ರೆಸ್ ಕಾರ್ಯಕರ್ತರು ಕೇಂದ್ರ ಸರ್ಕಾರದ ದ್ವೇಷ ರಾಜಕಾರಣದ ವಿರುದ್ಧ ಪ್ರತಿಭಟನೆ ನಡೆಸಿದರು.

ಪ್ರತಿಭಟನೆ, ರಾಷ್ಟ್ರಪತಿ ಭೇಟಿ: ವಾಹನ ದಟ್ಟಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಪ್ರತಿಭಟನೆ, ರಾಷ್ಟ್ರಪತಿ ಆಗಮನ ಹಾಗೂ ಮೈಸೂರು ರಸ್ತೆಯಲ್ಲಿ ಸರಣಿ ಅಪಘಾತ... ಇವೆಲ್ಲದರ ಪರಿಣಾಮದಿಂದಾಗಿ ನಗರದ ಬಹುತೇಕ ಕಡೆ ಸೋಮವಾರ ಬೆಳಿಗ್ಗೆಯಿಂದ ಸಂಜೆಯವರೆಗೂ ವಿಪರೀತ ವಾಹನಗಳ ದಟ್ಟಣೆ ಉಂಟಾಯಿತು.

ಶಾಂತಿನಗರ ಬಸ್ ನಿಲ್ದಾಣ ಬಳಿಯೇ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಶಾಂತಿನಗರ, ಕೆ.ಎಚ್. ರಸ್ತೆ, ಲಾಲ್‌ಬಾಗ್ ರಸ್ತೆ, ವಿಲ್ಸನ್ ಗಾರ್ಡನ್, ರಿಚ್ಮಂಡ್ ವೃತ್ತ, ನಿಮ್ಹಾನ್ಸ್, ಡೇರಿ ವೃತ್ತ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ವಾಹನಗಳು ನಿಧಾನಗತಿಯಲ್ಲಿ ಸಾಗಿದವು.

ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ರಾಷ್ಟ್ರಪತಿ ರಾಮನಾಥ್ ಕೋವಿಂದ್ ಸಹ ಸೋಮವಾರ ನಗರಕ್ಕೆ ಬಂದರು. ಅವರ ಸಂಚಾರಕ್ಕೆ ರಸ್ತೆಯನ್ನು ಸಿಗ್ನಲ್ ಮುಕ್ತಗೊಳಿಸಲಾಗಿತ್ತು.

ರಾಷ್ಟ್ರಪತಿ ಹಾದು ಹೋಗುವ ರಸ್ತೆಯ ಅಕ್ಕ-ಪಕ್ಕದಲ್ಲಿ ಸಾರ್ವಜನಿಕರ ವಾಹನಗಳನ್ನು ತಡೆಯಲಾಗಿತ್ತು. ಇದರಿಂದಾಗಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ರಾಜಭವನ ರಸ್ತೆ, ವಿಧಾನ ಸೌಧ, ಕೆ.ಆರ್.ವೃತ್ತ, ಬಸವೇಶ್ವರ ವೃತ್ತ, ಬಳ್ಳಾರಿ ರಸ್ತೆಯಲ್ಲಿ ದಟ್ಟಣೆ ಬಿಸಿ ತಟ್ಟಿತು.

ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣ ಎದುರು ಸಂಭವಿಸಿದ ಸರಣಿ ಅಪಘಾತದಿಂದಾಗಿಯೂ ಬೆಳಿಗ್ಗೆ 6.30ರಿಂದ 9 ಗಂಟೆಯವರೆಗೂ ವಾಹನ ದಟ್ಟಣೆ ಉಂಟಾಯಿತು. ಕಚೇರಿಗೆ ತೆರಳುತ್ತಿದ್ದ ಉದ್ಯೋಗಿಗಳು, ಶಾಲಾ ವಿದ್ಯಾರ್ಥಿಗಳು ಹಾಗೂ ಇತರರು ತೊಂದರೆ ಅನುಭವಿಸಿದರು.

ಕಾಂಗ್ರೆಸ್ ಪ್ರತಿಭಟನೆಯಿಂದಾಗಿ ನಗರದ ಕೆ.ಎಚ್.ರಸ್ತೆಯಲ್ಲಿ ಸೋಮವಾರ ವಿಪರೀತ ವಾಹನಗಳ ದಟ್ಟಣೆ ಉಂಟಾಯಿತು – ಪ್ರಜಾವಾಣಿ ಚಿತ್ರ

ಪಠ್ಯ ವಿವಾದ: ಪ್ರತಿಭಟನೆಗೆ ಬಂಡಾಯ ಸಾಹಿತ್ಯ ಸಂಘಟನೆ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ’ಯು ಮರುಪರಿಷ್ಕರಣೆ ಪಠ್ಯಪುಸ್ತಕಗಳ ವಾಪಸಾತಿಗಾಗಿ ಜೂನ್ 18ರಂದು ನಡೆಸಲಿರುವ ಪ್ರತಿಭಟನೆಗೆ ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆಯು ಬೆಂಬಲ ಸೂಚಿಸಿದೆ.

ಸಾಹಿತಿ ಬರಗೂರು ರಾಮಚಂದ್ರಪ್ಪ ಅವರ ನೇತೃತ್ವದಲ್ಲಿ 27 ಸಮಿತಿಗಳ 172 ಜನ ತಜ್ಞರೂ, ಅಧ್ಯಾಪಕರೂ ಪರಿಷ್ಕರಿಸಿದ ಪಠ್ಯಪುಸ್ತಕಗಳನ್ನು ಮರುಪರಿಷ್ಕರಿಸಿರುವ ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಸಮಿತಿಯು ಜಾತಿವಾದ ಮತ್ತು ಧಾರ್ಮಿಕ ಮೂಲಭೂತವಾದಗಳನ್ನು ಅಳವಡಿಸಿರುವುದನ್ನು ಖಂಡಿಸುವುದಾಗಿ ಪ್ರಕಟಣೆ ತಿಳಿಸಿದೆ.

‘ರಾಜ್ಯದಾದ್ಯಂತ ಇರುವ ನಮ್ಮ ಸಂಘಟನೆಯ ಸಂಗಾತಿಗಳು ಈ ಪ್ರತಿಭಟನೆಯಲ್ಲಿ ಭಾಗವಹಿಸಬೇಕು. ನಾಡಿನ ಎಲ್ಲ ವಿಚಾರಶೀಲ ಸಂಘಟನೆಗಳು ಪ್ರತಿಭಟನೆಯಲ್ಲಿ ಭಾಗವಹಿಸಿ, ಪ್ರತಿಭಟನೆಯನ್ನು ಯಶಸ್ವಿಗೊಳಿಸಬೇಕು’ ಎಂದು ಸಂಘಟನೆ ವಿನಂತಿಸಿದೆ.

‘ಶಿಕ್ಷಣ ಕ್ಷೇತ್ರವನ್ನು ಹಿಂದೆಂದೂ ಇಷ್ಟು ಗೊಂದಲಕ್ಕೆ ತಳ್ಳಿದ ನಿದರ್ಶನಗಳು ನಮ್ಮ ರಾಜ್ಯದಲ್ಲಿ ಇಲ್ಲ. ಪಠ್ಯಪುಸ್ತಕಗಳ ಮರುಪರಿಷ್ಕರಣೆಯಲ್ಲಿ ಸಂವಿಧಾನದ ಆಶಯಗಳನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿದೆ. ತಾವು ಮಾಡಿದ ತಪ್ಪುಗಳು ಬಯಲಾಗುತ್ತಿದ್ದಂತೆ ವಿತಂಡವಾದವನ್ನು ಮಾಡುತ್ತ ಮತ್ತಷ್ಟು ತಪ್ಪು ಮಾಡುತ್ತಿರುವ ಮರುಪರಿಷ್ಕರಣೆಯ ಅಧ್ಯಕ್ಷರು ಮತ್ತು ಶಿಕ್ಷಣ ಸಚಿವರು ಇನ್ನಾದರೂ ಶೈಕ್ಷಣಿಕ ವಿವೇಕವನ್ನು ರೂಢಿಸಿಕೊಳ್ಳಬೇಕು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಮಜಾಯಿಷಿ ನೀಡುವ ಬದಲು ಮರುಪರಿಷ್ಕರಣೆಯ ಪಠ್ಯಗಳನ್ನು ರದ್ದು ಮಾಡಿ, ಈ ವರ್ಷಕ್ಕೆ ಬರಗೂರು ಸಮಿತಿಯ ಪುಸ್ತಕಗಳನ್ನು ಮುಂದುವರಿಸಬೇಕು’ ಎಂದೂ ಆಗ್ರಹಿಸಿದೆ.

ಯುದ್ಧಕ್ಕೆ ಸಜ್ಜು, ಸಹಕಾರಕ್ಕೆ ಸೇನಾಪಡೆಗಳಿಗೆ ಸಲಹೆ

ಡೆಹ್ರಾಡೂನ್ (ಪಿಟಿಐ): ‘ದೇಶವು ಭವಿಷ್ಯದಲ್ಲಿ ಪೂರ್ಣಪ್ರಮಾಣದ ಯುದ್ಧಕ್ಕೆ ಸಜ್ಜಾಗಿರಬೇಕು. ಇದಕ್ಕೆ ಪೂರಕವಾಗಿ ವಿವಿಧ ಸೇನಾ ಪಡೆಗಳು ಮತ್ತು ಆಡಳಿತ ವ್ಯವಸ್ಥೆಯ ನಡುವೆ ಹೊಂದಾಣಿಕೆ ಇರಬೇಕು’ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು.

ಮಸ್ಸೂರಿಯ ಲಾಲ್‌ಬಹದ್ದೂರ್ ರಾಷ್ಟ್ರೀಯ ಆಡಳಿತ ತರಬೇತಿ ಸಂಸ್ಥೆಯಲ್ಲಿ ಸೋಮವಾರ ನಡೆದ, ‘28ನೇ ಜಂಟಿ ನಾಗರಿಕ –ಸೇನಾ ತರಬೇತಿ’ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು.

‘ಒಂದು ವೇಳೆ ಪ್ರಚೋದನೆ ಎದುರಾದರೆ ಭಾರತವು ಪೂರ್ಣ ಪ್ರಮಾಣದಲ್ಲಿ ದಾಳಿ ನಡೆಸಬೇಕು. ಏಕೆಂದರೆ ಭಾರತವು ತನ್ನ ಶಸ್ತ್ರಾಸ್ತ್ರಗಳಿಂದಲ್ಲ, ಮುಖ್ಯವಾಗಿ ನೈತಿಕ ಬಲದಿಂದ ಹೋರಾಟ ನಡೆಸಲಿದೆ. ಈಚಿನ ದಿನಗಳಲ್ಲಿ ಸೈಬರ್ ಮತ್ತು ಪರೋಕ್ಷ ಯುದ್ಧದ ಬೆದರಿಕೆಗಳಿಂದಾಗಿ ಭದ್ರತೆಯ ಸವಾಲುಗಳು ಹೆಚ್ಚು ಸಂಕೀರ್ಣವಾಗುತ್ತಿವೆ ಎಂದು ಅವರು ಪ್ರತಿಪಾದಿಸಿದರು.

ರಾಜನಾಥ್ ಸಿಂಗ್

‘ನೆರೆ ರಾಷ್ಟ್ರಗಳ, ನೀವುಗಳು ಗಮನಿಸಿದಂತೆ ಮುಖ್ಯವಾಗಿ ಒಂದು ನೆರೆ ರಾಷ್ಟ್ರದ ಸಾಮರ್ಥ್ಯವನ್ನು ಆಧರಿಸಿ ಭಾರತವು ಪೂರ್ಣ ಪ್ರಮಾಣದಲ್ಲಿ ಯುದ್ಧಸ್ಥಿತಿ ಎದುರಿಸಲು ಸನ್ನದ್ಧರಾಗಿರುವುದು ಮುಖ್ಯ. ಸೇನಾಪಡೆಗಳು ಮತ್ತು ನಾಗರಿಕ ಆಡಳಿತ ವ್ಯವಸ್ಥೆಯ ನಡುವಣ ಹೊಂದಾಣಿಕೆಯಿಂದ ಮಾತ್ರ ಇದು ಸಾಧ್ಯವಾಗಲಿದೆ ಎಂದು ನಾನು ಆಶಿಸುತ್ತೇನೆ’ ಎಂದು ಹೇಳಿದರು.

ಉಕ್ರೇನ್ ಯುದ್ಧವನ್ನು ಉಲ್ಲೇಖಿಸಿದ ಅವರು, ಭದ್ರತಾ ಸವಾಲುಗಳು ಹೆಚ್ಚುತ್ತಿವೆ. ಸೈಬರ್ ದಾಳಿಗಳ ಮೂಲಕ ಇಂದು ಒಂದು ದೇಶದ ಆರ್ಥಿಕತೆ, ಬ್ಯಾಂಕಿಂಗ್ ಮತ್ತು ಚುನಾವಣಾ ಪ್ರಕ್ರಿಯೆಯನ್ನೇ ಅಸ್ತವ್ಯಸ್ತಗೊಳಿಸಬಹುದಾಗಿದೆ ಎಂದು ಅಭಿಪ್ರಾಯಪಟ್ಟರು.

ಡ್ರಗ್ಸ್ ಪಾರ್ಟಿ: ನಟ ಸಿದ್ಧಾಂತ್ ಬಂಧನ

ಒಂದನೇ ಪುಟದಿಂದ

ಕಸದ ಬುಟ್ಟಿಯಲ್ಲಿ ಡ್ರಗ್ಸ್ ಪತ್ತೆ: ‘ಹೋಟೆಲ್ ಒಳಗೆ ಹೋಗುತ್ತಿದ್ದಂತೆ ಪೊಲೀಸರು ಪ್ರವೇಶ ದ್ವಾರ ಮುಚ್ಚಿದ್ದರು. ಎಲ್ಲರನ್ನೂ ಒಳಗೆ ಇರಿಸಿಕೊಂಡು ತಪಾಸಣೆ ನಡೆಸಿದ್ದರು. ಕಸದ ಬುಟ್ಟಿಗಳಲ್ಲಿ ಎಂಡಿಎಂಎ 7 ಮಾತ್ರೆಗಳು ಹಾಗೂ 5 ಗ್ರಾಂ ಗಾಂಜಾ ಪತ್ತೆಯಾಯಿತು’ ಎಂದು ಮೂಲಗಳು ತಿಳಿಸಿವೆ.

‘ಬಂಧಿತ ಆರೋಪಿಗಳೇ ಪಾರ್ಟಿ ಆಯೋಜಿಸಿದ್ದ ಮಾಹಿತಿ ಇದೆ. ಸಿದ್ಧಾಂತ್ ಹಾಗೂ ಇತರರು ಪಾರ್ಟಿಯ ಆರಂಭದಲ್ಲೇ ಡ್ರಗ್ಸ್ ಸೇವಿಸಿದ್ದರು. ಇನ್ನು ಹಲವರು ನೃತ್ಯ ಮಾಡುತ್ತ ಡ್ರಗ್ಸ್ ಸೇವಿಸಲು ಸಿದ್ಧರಾಗಿದ್ದರು. ದಾಳಿ ಮಾಡಿದ ಪೊಲೀಸರನ್ನು ಕಂಡು ಎಲ್ಲರೂ ಕಸದ ಬುಟ್ಟಿಗೆ ಡ್ರಗ್ಸ್ ಎಸೆದಿದ್ದರು. ಈ ಕುರಿತ ಪುರಾವೆಗಾಗಿ ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲಿಸಲಾಗುತ್ತಿದೆ. ಪಾರ್ಟಿ ಆಯೋಜಿಸಿದ್ದವರ ಬಗ್ಗೆ ಮಾಹಿತಿ ಕೇಳಿ ಹೋಟೆಲ್ ಹಾಗೂ ಐ-ಬಾರ್ ಮಾಲೀಕರಿಗೂ ನೋಟಿಸ್ ನೀಡಲಾಗಿದೆ’ ಎಂದೂ ಹೇಳಿವೆ.

‘ಸುಶಾಂತ್ ಪ್ರಕರಣದಲ್ಲಿ ಶ್ರದ್ಧಾ ವಿಚಾರಣೆ’

‘ಬಾಲಿವುಡ್ ನಟ ಸುಶಾಂತ್ ಸಿಂಗ್ ರಜಪೂತ್ ಸಾವಿನ ಸಂಬಂಧ ಡ್ರಗ್ಸ್ ಸೇವನೆ ಆಯಾಮದಲ್ಲಿ ತನಿಖೆ ಕೈಗೊಂಡಿದ್ದ ಎನ್‌ಸಿಬಿ (ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕ) ಅಧಿಕಾರಿಗಳು, ನಟ ಸಿದ್ಧಾಂತ್ ಕಪೂರ್ ಸಹೋದರಿಯೂ ಆಗಿರುವ ಹಿಂದಿ ನಟಿ ಶ್ರದ್ಧಾ ಕಪೂರ್ ಅವರನ್ನು ಸಹ ವಿಚಾರಣೆಗೆ ಒಳಪಡಿಸಿದ್ದರು. ಇದೀಗ ಸಿದ್ಧಾಂತ್ ಕೂಡ ಡ್ರಗ್ಸ್ ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿ ಹೇಳಿದರು.

ಆನೆಗಳ ದತ್ತು ಸ್ವೀಕಾರಕ್ಕೆ ಹೈಕೋರ್ಟ್ ಅಸ್ತು

ಬೆಂಗಳೂರು: ‘ಖಾಸಗಿಯವರ ಮಾಲೀಕತ್ವದಲ್ಲಿರುವ ಆನೆಗಳನ್ನು ವಾಣಿಜ್ಯ ಉದ್ದೇಶ ಹೊಂದಿರದ ಚಟುವಟಿಕೆಗಳಿಗೆ ಬಳಸುವುದಕ್ಕಾಗಿ ದತ್ತು ಪಡೆಯಲು ಯಾವುದೇ ನಿರ್ಬಂಧವಿಲ್ಲ’ ಎಂದು ಹೈಕೋರ್ಟ್ ಆದೇಶಿಸಿದೆ.

ಗುಜರಾತ್‌ನ ಜಾಮ್ ನಗರದ ರಾಧಾ ಕೃಷ್ಣ ದೇವಾಲಯ ಕಲ್ಯಾಣ ಟ್ರಸ್ಟ್‌ಗೆ ಕರ್ನಾಟಕದಿಂದ ನಾಲ್ಕು ಆನೆಗಳನ್ನು ದತ್ತು ನೀಡಿರುವುದನ್ನು ಪ್ರಶ್ನಿಸಿ ಎಂ.ಎಸ್. ಮುರಳಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಮತ್ತು ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಟ್ರಸ್ಟ್ ಪರ ವಕೀಲರು ಪ್ರಮಾಣ ಪತ್ರ ಸಲ್ಲಿಸಿ, ‘ಪ್ರಾಣಿಗಳ ಕಲ್ಯಾಣದ ಉದ್ದೇಶದಿಂದಲೇ ಟ್ರಸ್ಟ್ ರಚಿಸಲಾಗಿದೆ. ಆನೆಗಳನ್ನು ಉತ್ತಮ ರೀತಿಯಲ್ಲಿ ಆರೈಕೆ ಮಾಡಲಾಗುತ್ತಿದೆ. ದೇವಾಲಯದ ಆವರಣದಲ್ಲಿನ ಧಾರ್ಮಿಕ ವಿಧಿ ವಿಧಾನಗಳಿಗೆ ಮಾತ್ರ ಬಳಕೆ ಮಾಡಲಾಗುತ್ತಿದೆ’ ಎಂದು ತಿಳಿಸಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ‘ವನ್ಯಜೀವಿ ಸಂರಕ್ಷಣಾ ಕಾಯ್ದೆ -1972ರ ಕಲಂ 49ರಡಿ ವಾಣಿಜ್ಯ ಉದ್ದೇಶಗಳನ್ನು ಹೊರತುಪಡಿಸಿ ಉಳಿದ ಸ್ವರೂಪದ ಚಟುವಟಿಕೆಗಳಿಗೆ ಜೀವಂತ ಆನೆಗಳನ್ನು ದತ್ತು ಪಡೆಯುವುದಕ್ಕೆ ಯಾವುದೇ ನಿರ್ಬಂಧ ಇಲ್ಲ. ಟ್ರಸ್ಟ್ ಆನೆಗಳನ್ನು ಉತ್ತಮ ರೀತಿಯಲ್ಲಿ ಆರೈಕೆ ಮಾಡುತ್ತಿರುವ ಕಾರಣ ಅವುಗಳನ್ನು ದತ್ತು ಪಡೆದಿರುವ ಬಗ್ಗೆ ಅಧಿಕೃತ ದಾಖಲೆ ಹೊಂದಿರಬೇಕಾದ ಅಗತ್ಯ ಇಲ್ಲ’ ಎಂಬ ಕಾರಣ ನೀಡಿ ಅರ್ಜಿ ವಜಾಗೊಳಿಸಿದೆ.

‘ಖಾಸಗಿ ವ್ಯಕ್ತಿಗಳ ಬಳಿ ಇರುವ ಆನೆಗಳನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡು ಅವುಗಳನ್ನು ನಿರ್ವಹಣೆ ಮಾಡುವಂತೆ ನಿರ್ದೇಶಿಸಬೇಕು’ ಎಂದು ಅರ್ಜಿದಾರರ ಪರ ವಕೀಲರು ವಾದ ಮಂಡಿಸಿದ್ದರು.

ಕಸಾಪ: ಕನ್ನಡ ಸೇವೆಗೆ ಅರ್ಜಿ ಆಹ್ವಾನ

ಬೆಂಗಳೂರು: ಕನ್ನಡ ನಾಡು–ನುಡಿಗೆ ಸೇವೆ ಸಲ್ಲಿಸಲು ಆಸಕ್ತಿ ಉಳ್ಳವರಿಂದ ಕನ್ನಡ ಸಾಹಿತ್ಯ ಪರಿಷತ್ತು ಅರ್ಜಿ ಆಹ್ವಾನಿಸಿದೆ.

‘ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಜಾನಪದದ ರಕ್ಷಣೆ ಹಾಗೂ ಪ್ರಸಾರ ಪರಿಷತ್ತಿನ ಧ್ಯೇಯೋದ್ದೇಶವಾಗಿದೆ. ಅದೇ ರೀತಿ, ಜನಸಾಮಾನ್ಯರ ಪರಿಷತ್ತಾಗಿ ರೂಪಿಸಲಾಗುತ್ತಿದೆ. ಕಾರ್ಯಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅನುಕೂಲವಾಗುವಂತೆ ವಿವಿಧ ಕೆಲಸಗಳನ್ನು ನಿರ್ವಹಿಸಲು ಆಸಕ್ತ ಕನ್ನಡಿಗರಿಗೆ ಅವಕಾಶ ನೀಡಲಾಗುತ್ತದೆ’ ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

‘ಸರ್ಕಾರದ ವಿವಿಧ ಇಲಾಖೆಗಳು, ಕನ್ನಡಪರ ಸಂಘ-ಸಂಸ್ಥೆಗಳು, ಸಾರ್ವಜನಿಕ ಉದ್ಯಮ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಿ, ನಿವೃತ್ತರಾದವರಿಗೆ ಹಾಗೂ ಕನ್ನಡ ಸೇವಾಸಕ್ತರಿಗೆ ಪರಿಷತ್ತಿನಲ್ಲಿ ಕೆಲಸ ನಿರ್ವಹಿಸಲು ಅವಕಾಶವಿದೆ. ಸಾಮಾಜಿಕ ಜಾಲತಾಣ ನಿರ್ವಹಣೆಯ ಜ್ಞಾನವುಳ್ಳ, ಗಣಕಯಂತ್ರ, ಲೆಕ್ಕಪತ್ರಗಳಲ್ಲಿ ಅನುಭವ ಹೊಂದಿದ, ಕನ್ನಡ ಭಾಷೆಯನ್ನು ಸ್ಪಷ್ಟವಾಗಿ ತಪ್ಪಿಲ್ಲದೆ ಓದಲು ಹಾಗೂ ಬರೆಯಲು ಬರುವವರಿಗೆ ಆದ್ಯತೆ ನೀಡಲಾಗುತ್ತದೆ’ ಎಂದು ಹೇಳಿದ್ದಾರೆ.

ಆಸಕ್ತರು ವಿವರಗಳೊಂದಿಗೆ ತಮ್ಮ ಸ್ವ-ಪರಿಚಯ ಹೊಂದಿರುವ ಅರ್ಜಿಯನ್ನು ಜುಲೈ 10ರೊಳಗೆ ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು -18 ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಿತ್ರಾವಳಿ

ಬಿಜಿಎಸ್ ಬ್ಲೂಮ್‌ಫೀಲ್ಡ್ ಪ್ರೌಢಶಾಲೆಯ ನೂತನ ಕಟ್ಟಡವನ್ನು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಉದ್ಘಾಟನೆ ಮಾಡಿದರು. ಶಾಸಕರಾದ ದಿನೇಶ್ ಗುಂಡೂರಾವ್, ರವಿ ಸುಬ್ರಮಣ್ಯ, ಡಾ.ಅಜಯ್ ಧರ್ಮಸಿಂಗ್, ಸಂಸ್ಥೆಯ ಅಧ್ಯಕ್ಷ ಡಾ.ಬಿ. ಗುರಪ್ಪ ನಾಯ್ಡು ಇದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯದ ನೂತನ ಪ್ರಭಾರ ಕುಲಪತಿ ಪ್ರೊ.ಸಂಧಿಯಾ ಮೆನೇಜಸ್ ಅವರು ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು. ಕುಲಸಚಿವ ಪ್ರೊ.ಎಂ.ಕೊಟ್ರೇಶ್, ಸಿಂಡಿಕೇಟ್ ಸದಸ್ಯರಾದ ಡಾ.ಎಚ್. ಸುಧಾಕರ್, ಎಂ.ಉದಯಕುಮಾರ್, ಪ್ರೊ.ಟಿ.ವಿ.ರಾಜು, ಡಾ.ಗೋವಿಂದರಾಜು, ವಿದೇಯ ಬೆಳಗೋಡೆ ಶ್ರೀಕಂಠ, ಪ್ರೇಮ್ ಸೋಹನ್ ಲಾಲ್ ಹಾಜರಿದ್ದರು.

ಸಂಕ್ಷಿಪ್ತ ಸುದ್ದಿ

ರಾಜ್ಯಮಟ್ಟದ ವಿಜ್ಞಾನ ರಸಪ್ರಶ್ನೆ ಸ್ಪರ್ಧೆ

ಬೆಂಗಳೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತ ಜವಾಹರಲಾಲ್ ನೆಹರೂ ತಾರಾಲಯವು 8,9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ರಾಜ್ಯ ಮಟ್ಟದ ವಿಜ್ಞಾನ ರಸಪ್ರಶ್ನೆ ಸ್ಪರ್ಧೆಯನ್ನು ಕನ್ನಡದಲ್ಲಿ ಆಯೋಜಿಸುತ್ತಿದೆ.

ಜೂ.24ರೊಳಗೆ ಆಸಕ್ತ ವಿದ್ಯಾರ್ಥಿಗಳು http://forms.gle/9DXsoQ91s3TJVv286 ಮೂಲಕ ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ http://taralaya.org/kannada/special-lecture.htmlಗೆ ಸಂಪರ್ಕಿಸಿ ಎಂದು ಜವಾಹರಲಾಲ್ ನೆಹರೂ ತಾರಾಲಯದ ಆಡಳಿತ ಅಧಿಕಾರಿ ಕೆ.ಟಿ. ರಾಜನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಸಿಇಟಿ ಸಿದ್ಧತೆಗೆ ಸಮಯಾವಕಾಶ ನೀಡಿ’

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳಿಗೆ ನಡೆಯುವ ಪ್ರವೇಶ ಪರೀಕ್ಷೆಗೆ ಸಿದ್ಧತೆ ನಡೆಸಲು ವಿದ್ಯಾರ್ಥಿಗಳಿಗೆ ಸಮಯಾವಕಾಶ ನೀಡಬೇಕು ಎಂದು ಎಐಡಿಎಸ್‌ಒ ಒತ್ತಾಯಿಸಿದೆ.

ಜೂನ್ 16, 17 ಮತ್ತು 18ರಂದು ‘ಕೆ- ಸಿಇಟಿ’ ನಡೆಯಲಿದೆ. ಆದರೆ, ಜೂನ್ 15ಕ್ಕೆ ಸಿಬಿಎಸ್‌ಇ 12ನೇ ತರಗತಿಯ ವಿದ್ಯಾರ್ಥಿಗಳ ಪರೀಕ್ಷೆಗಳು ಮುಕ್ತಾಯಗೊಳ್ಳಲಿವೆ. ಈ ವಿದ್ಯಾರ್ಥಿಗಳಿಗೆ ಸಿಇಟಿಗೆ ಸಿದ್ಧರಾಗಲು ಯಾವುದೇ ಸಮಯಾವಕಾಶ ದೊರೆಯುವುದಿಲ್ಲ ಎಂದು ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ತಿಳಿಸಿದ್ದಾರೆ.

ಕಳೆದ ಎರಡು ವರ್ಷಗಳಲ್ಲಿ ಕೋವಿಡ್‌ನಿಂದ ಉಂಟಾಗಿದ್ದ ಲಾಕ್‌ಡೌನ್, ಶೈಕ್ಷಣಿಕ ಬಿಕ್ಕಟ್ಟು, ಆರ್ಥಿಕ ಸಮಸ್ಯೆಗಳು, ಆನ್‌ಲೈನ್ ತರಗತಿಗಳ ಜಂಜಾಟದಿಂದ ಹೊರಬಂದಿರುವ ವಿದ್ಯಾರ್ಥಿಗಳು ಈಗ ಕಾಲೇಜುಗಳತ್ತ ಮುಖ ಮಾಡಿ, ಪರೀಕ್ಷೆ ಬರೆಯಲು ಸಜ್ಜಾಗಿದ್ದಾರೆ. ಆದರೆ, ನಿರಂತರವಾಗಿ ನಡೆಯುವ ಪರೀಕ್ಷೆಗಳಿಂದ ವಿದ್ಯಾರ್ಥಿಗಳ ಮೇಲೆ ಮಾನಸಿಕ ಒತ್ತಡ ಸೃಷ್ಟಿಯಾಗುತ್ತದೆ ಎಂದು ಹೇಳಿದ್ದಾರೆ.

ಕೆಎಸ್‌ಆರ್‌ಟಿಸಿ: ₹ 6 ಲಕ್ಷ ದಂಡ ವಸೂಲಿ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು (ಕೆಎಸ್‌ಆರ್‌ಟಿಸಿ) ತನಿಖಾ ತಂಡಗಳ ಮೂಲಕ ತಪಾಸಣೆ ಚುರುಕುಗೊಳಿಸಿದ್ದು, ಮೇ ತಿಂಗಳಲ್ಲಿ ಟಿಕೆಟ್ ರಹಿತ ಪ್ರಯಾಣಿಕರಿಂದ ₹ 6.31 ಲಕ್ಷ ದಂಡ ವಸೂಲಿ ಮಾಡಿದೆ.

ನಿಗಮದ ವ್ಯಾಪ್ತಿಯಲ್ಲಿ ಸಂಚರಿಸುವ 49,957 ಬಸ್‌ಗಳನ್ನು ತಪಾಸಣೆಗೆ ಒಳಪಡಿಸಲಾಗಿತ್ತು. 3,552 ಪ್ರಕರಣ ಪತ್ತೆಹಚ್ಚಿ, 3,898 ಟಿಕೆಟ್ ರಹಿತ ಪ್ರಯಾಣಿಕರಿಂದ ದಂಡ ವಸೂಲಿ ಮಾಡಲಾಗಿದೆ. ನಿಗಮದ ಆದಾಯದಲ್ಲಿ ಸೋರಿಕೆ ಆಗುತ್ತಿದ್ದ ₹ 81 ಸಾವಿರವನ್ನು ತನಿಖಾಧಿಕಾರಿಗಳು ಪತ್ತೆ ಹಚ್ಚಿದ್ದಾರೆ ಎಂದು ಕೆಎಸ್‌ಆರ್‌ಟಿಸಿಯ ಮುಖ್ಯ ಸಂಚಾರ ವ್ಯವಸ್ಥಾಪಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಜನರು ಟಿಕೆಟ್, ಪಾಸ್ ಪಡೆದು ಪ್ರಯಾಣಿಸಬೇಕು. ಟಿಕೆಟ್ ಇಲ್ಲದೆ ಪ್ರಯಾಣ ಮಾಡಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ರಕ್ತದಾನಕ್ಕೆ ಕಿದ್ವಾಯಿ ಸಂಸ್ಥೆ ನಿರ್ದೇಶಕ ಡಾ.ಸಿ. ರಾಮಚಂದ್ರ ಮನವಿ

‘ಕ್ಯಾನ್ಸರ್: ರಕ್ತದ ಅಗತ್ಯ ಹೆಚ್ಚಳ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವರ್ಷದಿಂದ ವರ್ಷಕ್ಕೆ ಕ್ಯಾನ್ಸರ್ ರೋಗಿಗಳ ಸಂಖ್ಯೆ ಹೆಚ್ಚಳವಾಗುತ್ತಿದೆ. ಇದರಿಂದಾಗಿ ರಕ್ತದ ಅಗತ್ಯವೂ ಹೆಚ್ಚಳವಾಗಿದ್ದು, ದಾನಿಗಳು ರಕ್ತದಾನ ಮಾಡುವ ಮೂಲಕ ಕ್ಯಾನ್ಸರ್ ರೋಗಿಗಳಿಗೆ ಆಸರೆಯಾಗಬೇಕು’ ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ ಡಾ.ಸಿ. ರಾಮಚಂದ್ರ ಮನವಿ ಮಾಡಿಕೊಂಡಿದ್ದಾರೆ.

‘ವಿಶ್ವ ಆರೋಗ್ಯ ಸಂಸ್ಥೆ ಪ್ರತಿವರ್ಷ ಜೂನ್ 14ರಂದು ವಿಶ್ವ ರಕ್ತದಾನಿಗಳ ದಿನವನ್ನು ಆಚರಿಸುತ್ತದೆ. ‘ರಕ್ತದಾನ ಮಾಡುವುದು ಸಾಮೂಹಿಕ ಕಾರ್ಯ. ಈ ಪ್ರಯತ್ನಕ್ಕೆ ಕೈಜೋಡಿಸಿ ಮತ್ತು ಜೀವ ಉಳಿಸಿ’ ಎಂಬ ಸಂದೇಶದೊಂದಿಗೆ ಈ ಬಾರಿ ರಕ್ತದಾನಿಗಳ ದಿನ ಆಚರಿಸಲಾಗುತ್ತಿದೆ. ಕ್ಯಾನ್ಸರ್ ರೋಗಿಗಳಿಗೆ ಹೆಚ್ಚಾಗಿ ರಕ್ತದ ಅವಶ್ಯಕತೆ ಇರುತ್ತದೆ. ಸಂಸ್ಥೆಯಲ್ಲಿನ ರೋಗಿಗಳಿಗೆ ರಕ್ತ ಒದಗಿಸಲು ರಾಜ್ಯದಾದ್ಯಂತ ರಕ್ತದಾನ ಶಿಬಿರಗಳನ್ನು ಏರ್ಪಡಿಸಿ, ರಕ್ತ ಸಂಗ್ರಹಿಸಲಾಗುತ್ತಿದೆ. ದಾನಿಗಳು ಸ್ವಯಂಪ್ರೇರಿತರಾಗಿ ಮುಂದೆ ಬಂದು, ರಕ್ತದಾನ ಮಾಡುವ ಮೂಲಕ ಕ್ಯಾನ್ಸರ್ ರೋಗಿಗಳಿಗೆ ಮರುಜೀವ ನೀಡುವ ಕಾಯಕದಲ್ಲಿ ತೊಡಗಬೇಕು’ ಎಂದು ಹೇಳಿದ್ದಾರೆ.

ಡಾ.ಸಿ. ರಾಮಚಂದ್ರ

‘ಪ್ರತಿವರ್ಷ ದೇಶದಲ್ಲಿ ಸುಮಾರು 10 ಲಕ್ಷ ಜನರಲ್ಲಿ ಕ್ಯಾನ್ಸರ್ ಪತ್ತೆಯಾಗುತ್ತದೆ. ಈ ಜನರ ಪೈಕಿ ಹೆಚ್ಚಿನವರಿಗೆ ಕಿಮೋಥೆರಪಿ ಮಾಡುವಾಗ ರಕ್ತ ಪೂರಣ ಮಾಡಬೇಕಾಗುತ್ತದೆ. ಸಂಸ್ಥೆಯು ಕಳೆದ ವರ್ಷ ಸುಮಾರು 7,697 ಯೂನಿಟ್ ರಕ್ತ ಸಂಗ್ರಹ ಮಾಡಿದೆ. ಸಂಸ್ಥೆಯಲ್ಲಿ ಪ್ರತ್ಯೇಕ ರಕ್ತನಿಧಿ ಘಟಕ ಸ್ಥಾಪನೆ ಮಾಡಲಾಗಿದೆ. 18ರಿಂದ 60 ವರ್ಷದವರೆಗಿನ ಆರೋಗ್ಯವಂತ ವ್ಯಕ್ತಿಗಳು ರಕ್ತದಾನ ಮಾಡಬಹುದಾಗಿದೆ. 45ರಿಂದ 60 ಕೆ.ಜಿ. ತೂಕದ ವ್ಯಕ್ತಿಗಳಿಂದ 350 ಎಂ.ಎಲ್ ರಕ್ತ ಹಾಗೂ 60 ಕೆ.ಜಿ.ಗೂ ಹೆಚ್ಚು ತೂಕ ಹೊಂದಿರುವ ದಾನಿಗಳಿಂದ 450 ಎಂ.ಎಲ್ ರಕ್ತವನ್ನು ದಾನವಾಗಿ ಪಡೆಯಲಾಗುವುದು’ ಎಂದು ತಿಳಿಸಿದ್ದಾರೆ.

‘ಒಮ್ಮೆ ರಕ್ತದಾನ ಮಾಡಿದರೆ ಮುಂದಿನ ಮೂರು ತಿಂಗಳವರೆಗೆ ದಾನ ಮಾಡಬಾರದು. ರಕ್ತದಾನ ಮಾಡುವುದರಿಂದ ದೇಹದಲ್ಲಿ ಹೊಸ ರಕ್ತ ಉತ್ಪತ್ತಿಯಾಗುತ್ತದೆ. ದೇಹದಲ್ಲಿನ ಕೊಬ್ಬಿನ ಅಂಶ ಕಡಿಮೆಯಾಗಿ, ಹೃದಯಾಘಾತ ಸಾಧ್ಯತೆಯೂ ಶೇಕಡಾ 80ರಷ್ಟು ದೂರವಾಗುತ್ತದೆ. ರಕ್ತದ ಒತ್ತಡ, ಮಧುಮೇಹದಂತಹ ರೋಗ ಗಳನ್ನು ತಡೆಯಲೂ ರಕ್ತದಾನ ಸಹಕಾರಿ’ ಎಂದು ಪ್ರಕಟಣೆಯಲ್ಲಿ ವಿವರಿಸಿದ್ದಾರೆ.

ಒಂದು ಮತಕ್ಕೆ ₹10 ಸಾವಿರ ಹಂಚಿಕೆ: ಆರೋಪ

ಬೆಳಗಾವಿ: 'ವಿಧಾನಪರಿಷತ್‌ಚುನಾವಣೆಯಲ್ಲಿ ಮತದಾರರನ್ನು ಸೆಳೆಯಲು ಕಾಂಗ್ರೆಸ್ ವಾಮಮಾರ್ಗ ಅನುಸರಿಸುತ್ತಿದೆ. ಶಿಕ್ಷಕರಿಗೆ ಒಂದು ಮತಕ್ಕೆ ₹10 ಸಾವಿರ ಹಣ ಹಂಚಿದೆ' ಎಂದು ಬಿಜೆಪಿ ಶಾಸಕ ಅನಿಲ ಬೆನಕೆ ಆಪಾದಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ಬಿಜೆಪಿ ಅಭ್ಯರ್ಥಿ ಅರುಣ ಶಹಾಪುರ 12 ವರ್ಷ ವಿಧಾನ ಪರಿಷತ್ ಸದಸ್ಯರಾಗಿ ಉತ್ತಮ ಕೆಲಸ ಮಾಡಿದ್ದಾರೆ. ಅವರಿಗೆ ಹೆದರಿ ಕಾಂಗ್ರೆಸ್‌ನವರು ಹಣ ಹಂಚಿದ್ದಾರೆ. ಚುನಾವಣೆ ಆಯೋಗಕ್ಕೆ ದೂರು ನೀಡಲಾಗಿದೆ' ಎಂದರು.

ಹುಕ್ಕೇರಿ ವಿರುದ್ಧ ದೂರು: ವಾಯವ್ಯ ಶಿಕ್ಷಕ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪ್ರಕಾಶ್ ಹುಕ್ಕೇರಿ ಅವರ ಪರವಾಗಿ ಮತದಾರರಿಗೆ ಹಂಚಲು ಕಾರಿನಲ್ಲಿ ಕೊಂಡೊಯ್ಯುತ್ತಿದ್ದ ₹17.40 ಲಕ್ಷ ನಗದನ್ನು ವಿಜಯನಗರದಲ್ಲಿ ವಶಪಡಿಸಿಕೊಂಡ ಘಟನೆ ಸಂಬಂಧ ವಾಯವ್ಯ ಶಿಕ್ಷಕರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅರುಣ ಶಹಾಪುರ ಅವರು ಡಿ.ಸಿ, ಎಸ್‌ಪಿಗೆ ಹುಕ್ಕೇರಿ ವಿರುದ್ಧ ದೂರು ನೀಡಿದ್ದಾರೆ.

ಕಾಂಗ್ರೆಸ್ ಗೆಲ್ಲುತ್ತೆ ಎಂದ ಜೆಡಿಎಸ್ ಎಂಎಲ್‌ಸಿ: (ಮೈಸೂರು ವರದಿ): 'ದಕ್ಷಿಣಪದವೀಧರರಕ್ಷೇತ್ರದಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಗೆಲ್ಲುತ್ತಾರೆ' ಎಂದು ವಿಧಾನ ಪರಿಷತ್ ಜೆಡಿಎಸ್ ಸದಸ್ಯ ಮರಿತಿಬ್ಬೇಗೌಡ ಹೇಳಿದರು. ಮತ ಚಲಾಯಿಸಿದ ಬಳಿಕ ಮಾತನಾಡಿ, 'ಕ್ಷೇತ್ರದಲ್ಲಿ ಅವರ ಪರವಾದ ಅಲೆ ಇದೆ' ಎಂದು ಹೇಳಿದರು.

ಶಾಸಕರ ವಿರುದ್ಧ ಎಫ್‌ಐಆರ್

ಬೆಳಗಾವಿ: ನಿಯಮ ಬಾಹಿರವಾಗಿ ಮತಗಟ್ಟೆ ಪ್ರವೇಶ ಮಾಡಿದ ಇಲ್ಲಿನ ಉತ್ತರ ಕ್ಷೇತ್ರದ ಶಾಸಕ ಅನಿಲ ಬೆನಕೆ ಹಾಗೂ ಅವರ ಐವರು ಬೆಂಬಲಿಗರ ವಿರುದ್ಧ ಎಪಿಎಂಸಿ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ಇಲ್ಲಿನ ವಿಶ್ವೇಶ್ವರಯ್ಯ ನಗರದಲ್ಲಿ ತೆರೆದ ಮತಗಟ್ಟೆಯನ್ನು ಶಾಸಕರು ಪ್ರವೇಶಿಸಿದ್ದರು.

1. ವಾಯವ್ಯ ಶಿಕ್ಷಕರ ಹಾಗೂ ಪದವೀಧರ ಮತಕ್ಷೇತ್ರ ವ್ಯಾಪ್ತಿಯ ಬೆಳಗಾವಿಯ ವಿಶ್ವೇಶ್ವರಯ್ಯ ನಗರ ಮತಗಟ್ಟೆಯಲ್ಲಿ ಮತದಾರರಿಗೆ ಕುಳಿತುಕೊಳ್ಳಲು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ತಮ್ಮ ಸಿಬ್ಬಂದಿಯೊಂದಿಗೆ ಡೆಸ್ಕ್ ತಂದು ಹಾಕಲು ಕೈಜೋಡಿಸಿದರು. 2. ದಕ್ಷಿಣ ಪದವೀಧರ ಕ್ಷೇತ್ರ ವ್ಯಾಪ್ತಿಯ ಮೈಸೂರಿನ ಕುವೆಂಪುನಗರದ ಸರ್ಕಾರಿ ಪದವಿಪೂರ್ವ ಕಾಲೇಜಿನ ಮತ ಕೇಂದ್ರದಲ್ಲಿ ಸಾಲುಗಟ್ಟಿ ನಿಂತಿರುವ ಮತದಾರರು. 3. ಧಾರವಾಡದ ವಿದ್ಯಾಗಿರಿಯಲ್ಲಿರುವ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ಸ್ಥಾಪಿಸಲಾಗಿದ್ದ ಮತಗಟ್ಟೆಯಲ್ಲಿ ಪಶ್ಚಿಮ ಶಿಕ್ಷಕರ ಮತಕ್ಷೇತ್ರದ ಅಭ್ಯರ್ಥಿಗಳಾದ ಬಿಜೆಪಿ ಅಭ್ಯರ್ಥಿ ಬಸವರಾಜ ಹೊರಟ್ಟಿ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಬಸವರಾಜ ಗುರಿಕಾರ ಪರಸ್ಪರ ಹಸ್ತಲಾಘವ ಮಾಡಿದರು

ವಿಧಾನಪರಿಷತ್ ಚುನಾವಣೆ: ಕೆಲವೆಡೆ ಮತಗಟ್ಟೆಗಳ ಬಳಿ ವಾಗ್ವಾದ

ಮತದಾನ ಬಹುತೇಕ ಶಾಂತಿಯುತ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ಬೆಳಗಾವಿ: ಹಣ ಹಂಚಿಕೆ ಆರೋಪ, ಮತದಾರರ ಮೇಲೆ ಪ್ರಭಾವ ಬೀರಲು ಯತ್ನಿಸಿದ ಮತಗಟ್ಟೆ ಅಧಿಕಾರಿಗಳು, ಮತಗಟ್ಟೆ ಪ್ರವೇಶಿಸಿದ ಶಾಸಕ ಹಾಗೂ ಅಧಿಕಾರಿಗಳೊಂದಿಗೆ ವಾಗ್ವಾದದಂತಹ ಘಟನೆಗಳು ವಿಧಾನಪರಿಷತ್‌ನ ಪಶ್ಚಿಮ ಶಿಕ್ಷಕರ ಕ್ಷೇತ್ರ, ವಾಯವ್ಯ ಪದವೀಧರರ ಹಾಗೂ ವಾಯವ್ಯ ಶಿಕ್ಷಕರ ಕ್ಷೇತ್ರದಲ್ಲಿ ಸೋಮವಾರ ನಡೆದಿವೆ. ಉಳಿದಂತೆ ಮತದಾನವು ಶಾಂತಿಯುತವಾಗಿತ್ತು.

ಪಶ್ಚಿಮ ಶಿಕ್ಷಕರ ಕ್ಷೇತ್ರ: 'ಮತದಾರರ ಮೇಲೆ ಪ್ರಭಾವ ಬೀರುತ್ತಿದ್ದಾರೆ' ಎಂಬ ಆರೋಪದ ಮೇಲೆ ಹುಬ್ಬಳ್ಳಿಯ ಮತಗಟ್ಟೆ- 26ರಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಮತಗಟ್ಟೆ ಅಧಿಕಾರಿ ಮತ್ತು ಸಹಾಯಕ ಮತಗಟ್ಟೆ ಅಧಿಕಾರಿಯನ್ನು ಬದಲಾಯಿಸಲಾಯಿತು. ಬಿಜೆಪಿ ಅಭ್ಯರ್ಥಿ ಬಸವರಾಜ ಹೊರಟ್ಟಿ ಅಧಿಕಾರಿಗಳ ನಡೆಗೆ ಆಕ್ರೋಶ ವ್ಯಕ್ತಪಡಿಸಿದರು. ಹೊರಟ್ಟಿ ಪುತ್ರ ವಸಂತ ಹೊರಟ್ಟಿ ಹಾಗೂ ಬೆಂಬಲಿಗರು ಅಧಿಕಾರಿಗಳೊಂದಿಗೆ ವಾಗ್ವಾದ ನಡೆಸಿದರು.

> ಹಿಂದಿನಿಂದಲೂ ಹೊರಟ್ಟಿ ಅವರು ಅಧಿಕಾರ ದುರುಪಯೋಗ ಮಾಡಿಕೊಂಡು ಬಂದಿದ್ದಾರೆ. ಕರ್ತವ್ಯನಿರತ ಶಿಕ್ಷಕರನ್ನು ಪ್ರಚಾರಕ್ಕೆ ಬಳಸಿಕೊಳ್ಳುವುದು ಎಗ್ಗಿಲ್ಲದೆ ನಡೆದಿದೆ
>
> **ಶ್ರೀಶೈಲ ಗಡದಿನ್ನಿ**
> ಜೆಡಿಎಸ್ ಅಭ್ಯರ್ಥಿ, ಪಶ್ಚಿಮ ಶಿಕ್ಷಕರ ಕ್ಷೇತ್ರ

> ನನ್ನ ವಿರುದ್ಧ ಪ್ರತಿಪಕ್ಷಗಳು ಏನೇ ಅಪಪ್ರಚಾರ ಮಾಡಿದರೂ ಪರಿಣಾಮ ಬೀರುವುದಿಲ್ಲ. ನನ್ನ ಗೆಲುವು ನಿಶ್ಚಿತ. ಶೇ 70ರಷ್ಟು ಮತ ಪಡೆದು ಗೆಲ್ಲುತ್ತೇನೆ
>
> **ಬಸವರಾಜ ಹೊರಟ್ಟಿ**
> ಬಿಜೆಪಿ ಅಭ್ಯರ್ಥಿ, ಪಶ್ಚಿಮ ಶಿಕ್ಷಕರ ಕ್ಷೇತ್ರ

'ಯಾವ ಡಿ.ಸಿ.ರೀ ಅವಾ...'

ಧಾರವಾಡ: 'ಇಬ್ಬರೇ ಏಜೆಂಟರು ಇರಬೇಕು ಎಂದು ನಿಯಮ ಮಾಡಿರೋ ಡಿ.ಸಿ ಯಾರ್ರೀ ಅವಾ...' ಹೀಗೆಂದವರು ಪಶ್ಚಿಮ ಶಿಕ್ಷಕರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಸವರಾಜ ಹೊರಟ್ಟಿ.

ನಗರದ ಶಾರದಾ ಪ್ರೌಢಶಾಲೆ ಮತಗಟ್ಟೆಯಲ್ಲಿ ಪಕ್ಷದ ಏಜೆಂಟರಿಗೆ ಮೀಸಲಿಟ್ಟದ್ದ ಜಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಿಜೆಪಿ ಕಾರ್ಯಕರ್ತರು ಸೇರಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಪಿಎಸ್‌ಐ, ಇಬ್ಬರನ್ನು ಹೊರತುಪಡಿಸಿ ಉಳಿದವರನ್ನು ಹೊರಕ್ಕೆ ಹೋಗುವಂತೆ ಸೂಚಿಸಿದರು. ಇದೇ ವೇಳೆ ಅಲ್ಲಿಗೆ ಬಂದ ಹೊರಟ್ಟಿ, 'ಪಕ್ಷದ ಕಾರ್ಯಕರ್ತರು ಕೂತರೆ ಏನು ತಪ್ಪು? ಕಾನೂನು ಪಾಲಿಸಿ, ಯಾರೋ ಹೇಳಿದ್ದನ್ನು ಅಲ್ಲ' ಎಂದು ಗದರಿದರು.

ಶಿಕ್ಷಕ ಶಶಿಧರ ಗಾಜಿ ಎಂಬುವರು ಹೊರಟ್ಟಿ ಅವರ ಭಾವಚಿತ್ರದ ಬ್ಯಾಡ್ಜ್ ಧರಿಸಿ ಹುಬ್ಬಳ್ಳಿಯ ಮತಗಟ್ಟೆಯೊಂದಕ್ಕೆ ಬಂದಾಗ ಕಾಂಗ್ರೆಸ್ ಕಾರ್ಯಕರ್ತರು ಆಕ್ಷೇಪ ವ್ಯಕ್ತಪಡಿಸಿದರು. ಈ ಬಗ್ಗೆ ಚುನಾವಣಾ ಆಯೋಗಕ್ಕೆ ದೂರು ನೀಡುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು ಎಂದು ಕಾಂಗ್ರೆಸ್ ಅಭ್ಯರ್ಥಿ ಬಸವರಾಜ ಗುರಿಕಾರ ತಿಳಿಸಿದರು.

ಮತಗಟ್ಟೆ ಪ್ರವೇಶಿಸಿದ ಶಾಸಕ

ಬೆಳಗಾವಿ: ಇಲ್ಲಿನ ವಿಶ್ವೇಶ್ವರಯ್ಯ ನಗರದಲ್ಲಿನ ವಾಯವ್ಯ ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರದ ಮತಗಟ್ಟೆ ಪ್ರವೇಶಿಸುವ ಮೂಲಕ, ಬಿಜೆಪಿ ಶಾಸಕ ಅನಿಲ ಬೆನಕೆ ನೀತಿ ಸಂಹಿತೆ ಉಲ್ಲಂಘಿಸಿದ ಆರೋಪ ಕೇಳಿಬಂದಿದೆ. ಸರದಿಯಲ್ಲಿ ನಿಂತಿದ್ದ ಮತದಾರರಿಗೆ ಕೈ ಮುಗಿಯುತ್ತ ಮತಗಟ್ಟೆ ಒಳಗೆ ಹೋಗಿ, ಮತದಾನ ಪ್ರಕ್ರಿಯೆಗಳನ್ನು ವೀಕ್ಷಿಸಿದರು. ಒಳಗೆ ನಿಂತುಕೊಂಡೇ ಮೊಬೈಲ್‌ನಲ್ಲಿ ಮಾತನಾಡಿದ್ದಾರೆ ಎಂದು ದೂರಲಾಗಿದೆ.

2018ರ ಸಾರ್ವತ್ರಿಕ ಚುನಾವಣೆ ವೇಳೆ ನೀತಿ ಸಂಹಿತೆ ಉಲ್ಲಂಘನೆ ಆರೋಪಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ 42ನೇ ಎಸಿಎಂಎಂ ನ್ಯಾಯಾಲಯ ಈಚೆಗೆ ಬೆನಕೆ ಅವರ ವಿರುದ್ಧ ಜಾಮೀನು ರಹಿತ ಬಂಧನ ವಾರಂಟ್ ಜಾರಿ ಮಾಡಿದೆ.

ಬೈಲಹೊಂಗಲ ಪಟ್ಟಣದಲ್ಲಿ ಸೋಮವಾರ ಮತದಾನ ವೇಳೆಯೂ ಹಣ ಹಂಚುತ್ತಿದ್ದ ಕೆಲವು ರಾಜಕೀಯ ಮುಖಂಡರು ಹಾಗೂ ಹಣಕ್ಕಾಗಿ ಮುಗಿಬಿದ್ದದ್ದ ಕೆಲವು ಮತದಾರರನ್ನು ಪೊಲೀಸರು ಚದುರಿಸಿದರು.

ಇಲ್ಲಿನ ರಾಣಿ ಚನ್ನಮ್ಮನ ಸಮಾಧಿ ರಸ್ತೆ ಪಕ್ಕದಲ್ಲಿರುವ ರಾಷ್ಟ್ರೀಯ ಪಕ್ಷವೊಂದರ ಕಚೇರಿಯಲ್ಲಿ ಮುಖಂಡರು ರಾಜಾರೋಷವಾಗಿ ಹಣ ಹಂಚುತ್ತಿದ್ದರು. ಇದನ್ನು ಕಂಡು ವಿರೋಧಿ ಗುಂಪಿನ ಕೆಲವರು ಚುನಾವಣಾಧಿಕಾರಿಗೆ ಮಾಹಿ ತಿ ನೀಡಿದರು. ಇದರಿಂದ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಡೆಸ್ಕ್ ಎತ್ತಿ ತಂದ ಡಿ.ಸಿ: ವಿಶ್ವೇಶ್ವರಯ್ಯ ನಗರದ ಮತಗಟ್ಟೆಯಲ್ಲಿ ಮತದಾರರು ಬಿಸಿಲಿನಲ್ಲಿ ನಿಂತಿದ್ದನ್ನು ಗಮನಿಸಿದ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಡೆಸ್ಕ್ ಎತ್ತಿ ತಂದು ಮರದಡಿ ಹಾಕಿ ಕುಳಿತುಕೊಳ್ಳಲು ವ್ಯವಸ್ಥೆ ಮಾಡಿದರು.

ಸುದ್ದಿ 2 ನಿಮಿಷ

ಮಲ್ಲೇಪುರಂಗೆ ಸೇಡಿಯಾಪು ಪ್ರಶಸ್ತಿ

ಉಡುಪಿ: ವಿದ್ವಾಂಸ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ್ ಅವರನ್ನು 2022ನೇ ಸಾಲಿನ ಸೇಡಿಯಾಪು ಕೃಷ್ಣ ಭಟ್ಟ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದ ಆಡಳಿತಾಧಿಕಾರಿ ಡಾ.ಬಿ.ಜಗದೀಶ್ ಶೆಟ್ಟಿ ತಿಳಿಸಿದ್ದಾರೆ.

ಕನ್ನಡ ಭಾಷೆ, ಸಾಹಿತ್ಯ, ವ್ಯಾಕರಣ, ಭಾಷಾ ಶಾಸ್ತ್ರ, ಕಥನ ಕಾವ್ಯ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿ ಮಹತ್ವದ ಕೊಡುಗೆ ನೀಡಿರುವ ಸೇಡಿಯಾಪು ಕೃಷ್ಣ ಭಟ್ಟರ ಸ್ಮರಣಾರ್ಥ ಪ್ರಶಸ್ತಿಯನ್ನು ನೀಡಲಾಗುತ್ತಿದ್ದು, ಪ್ರಶಸ್ತಿಯು ₹ 10 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ.

ಕಬ್ಬಿಣ ಅದಿರು ಸಾಗಣೆಗೆ ಮಾರ್ಗಸೂಚಿ

ಬೆಂಗಳೂರು: ಕಬ್ಬಿಣದ ಅದಿರನ್ನು ರಾಜ್ಯ, ಹೊರ ರಾಜ್ಯಗಳ ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಹಾಗೂ ವಿದೇಶಗಳಿಗೆ ರಫ್ತುಮಾಡಲು ಸುಪ್ರೀಂ ಕೋರ್ಟ್ ಅನುಮತಿ ನೀಡಿರುವುದರಿಂದ ಅದಿರಿನ ಸಾಗಣೆಯಲ್ಲಿ ಅನುಸರಿಸಬೇಕಾದ ಕ್ರಮಗಳ ಕುರಿತು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಭಾನುವಾರ ಮಾರ್ಗಸೂಚಿಗಳನ್ನು ಪ್ರಕಟಿಸಿದೆ.

ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಲಭ್ಯವಿರುವ ಕಬ್ಬಿಣದ ಅದಿರನ್ನು ಸುಪ್ರೀಂ ಕೋರ್ಟ್ ನೇಮಿಸಿರುವ ಮೇಲುಸ್ತುವಾರಿ ಸಮಿತಿಯ ನೇತೃತ್ವದಲ್ಲೇ ರಾಜ್ಯದಲ್ಲಿ ಇ-ಹರಾಜಿನ ಮೂಲಕ ಮಾರಾಟ ಮಾಡಲಾಗುತ್ತಿತ್ತು. ಗಣಿ ಮಾಲೀಕರ ಮನವಿಯನ್ನು ಪುರಸ್ಕರಿಸಿದ್ದ ಸುಪ್ರೀಂ ಕೋರ್ಟ್, ಗಣಿ ಮಾಲೀಕರಿಂದ ಕಬ್ಬಿಣದ ಅದಿರಿನ ನೇರ ಮಾರಾಟ ಹಾಗೂ ರಫ್ತು ಮಾಡುವುದಕ್ಕೂ ಅನುಮತಿ ನೀಡಿ ಮೇ 20ರಂದು ಆದೇಶಿಸಿತ್ತು. ಅದಕ್ಕೆ ಪೂರಕವಾಗಿ ಸಾಗಣೆ ನಿಯಂತ್ರಣಕ್ಕೆ ಮಾರ್ಗಸೂಚಿಗಳನ್ನು ಪ್ರಕಟಿಸಲಾಗಿದೆ.

ಗಣಿ ಮಾಲೀಕರು ರಾಜಧನ, ಜಿಲ್ಲಾ ಖನಿಜ ನಿಧಿ ವಂತಿಕೆ ಸೇರಿದಂತೆ ಎಲ್ಲ ಬಗೆಯ ಶುಲ್ಕಗಳನ್ನು ಪಾವತಿಸಿದ ಬಳಿಕವೇ ಅದಿರು ಸಾಗಣೆಗೆ ಪರವಾನಗಿ ವಿತರಿಸಬೇಕು. ಸಾಗಣೆ ಪರವಾನಗಿ ಅಗತ್ಯವಿರುವ ಅದಿರನ್ನು ಗುತ್ತಿಗೆದಾರರು ಪ್ರತ್ಯೇಕವಾಗಿ ಇರಿಸಬೇಕು. ಸಗಟು ಪರವಾನಗಿ ಕೋರುವವರು ಅದಿರಿನ ರಾಸಾಯನಿಕ ವಿಶ್ಲೇಷಣಾ ವರದಿ ಮತ್ತು ರಾಶಿಯ ಜಿಪಿಎಸ್ ಮಾಹಿತಿಯನ್ನೂ ಸಲ್ಲಿಸಬೇಕು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಗಣಿ ಇಲಾಖೆಯ ಉಪ ನಿರ್ದೇಶಕರು, ಹಿರಿಯ ಭೂವಿಜ್ಞಾನಿಗಳು ಅದಿರಿನ ದಾಸ್ತಾನನ್ನು ಪರಿಶೀಲಿಸಿದ ಬಳಿಕವೇ ಪರವಾನಗಿ ನೀಡಬೇಕು ಎಂಬ ಸಹಿತ ಹಲವು ನಿಬಂಧನೆಗಳನ್ನು ಪಾಲಿಸಬೇಕು ಎಂದು ತಿಳಿಸಲಾಗಿದೆ.

ಐಐಎಸ್‌ಸಿ ಮತ್ತು ಕೆಐಇಆರ್‌ನಿಂದ 3 ಡಿ ಮುದ್ರಿತ ಚಪ್ಪಲಿ ಅಭಿವೃದ್ಧಿ

ಮಧುಮೇಹಿಗಳಿಗೆ ವಿಶಿಷ್ಟ ಪಾದ'ರಕ್ಷೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀವು ಮಧುಮೇಹಿಗಳೇ, ನೀವು ನಡೆಯುವಾಗ ಪಾದಗಳಿಗೆ ಯಾವುದೇ ಸಂವೇದನೆಯೇ ಇಲ್ಲದೇ ಸಮತೋಲನ ಕಳೆದುಕೊಳ್ಳುತ್ತಿದ್ದೀರೇ? ಪಾದಗಳಿಗೆ ಗಾಯವಾಗಿ ರಕ್ತ ಸುರಿದರೂ ಗಮನಕ್ಕೆ ಬರುವುದಿಲ್ಲವೇ?

ಹಾಗಿದ್ದರೆ, ಇನ್ನು ಮುಂದೆ ಹೆಚ್ಚು ಚಿಂತಿಸಬೇಕಾಗಿಲ್ಲ. ಏಕೆಂದರೆ, ಪಾದಗಳಿಗೆ ಹೆಚ್ಚಿನ ಸುರಕ್ಷತೆ ನೀಡುವ ಉದ್ದೇಶದಿಂದ ನಗರದ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗ ವಿಶಿಷ್ಟ ಪಾದರಕ್ಷೆಯನ್ನು ಅಭಿವೃದ್ಧಿಪಡಿಸಿದೆ.

ಮಧುಮೇಹಿಗಳಿಗಾಗಿ ಮಾರುಕಟ್ಟೆಯಲ್ಲಿ ಈಗ ಲಭ್ಯವಿರುವ ಡಯಾಬಿಟಿಕ್ ಪಾದರಕ್ಷೆಗಿಂತ ಇದು ಭಿನ್ನವಾದುದು. ಈ ಪಾದರಕ್ಷೆಗಳು ವ್ಯಕ್ತಿಯ ದೇಹದ ಸಮತೋಲನವನ್ನು ಕಾಪಾಡುವುದರ ಜತೆಗೆ, ಪಾದಗಳಿಗೆ ಆದ ಗಾಯ ಬೇಗನೆ ವಾಸಿಯಾಗಲು ನೆರವಾಗುತ್ತದೆ ಮತ್ತು ಪಾದಗಳಲ್ಲಿ ಇತರ ಕಡೆ ಗಾಯವಾಗುವುದನ್ನು ತಡೆಗಟ್ಟುವ ಸ್ವಯಂ ನಿಯಂತ್ರಿತ ಚಿಕಿತ್ಸಕ ಗುಣವನ್ನೂ ಹೊಂದಿದೆ. ಕರ್ನಾಟಕ ಮಧುಮೇಹ ಸಂಸ್ಥೆಯ ಜತೆ ಸೇರಿ ಐಐಎಸ್‌ಸಿ ಪಾದರಕ್ಷೆಯನ್ನು ಅಭಿವೃದ್ಧಿಪಡಿಸಿದೆ.

ಡಯಾಬಿಟಿಕ್ ಪಾದರಕ್ಷೆ

ಮಧುಮೇಹಿಗಳ ಪಾದಗಳಿಗೆ ಗಾಯಗಳಾದರೆ, ಅವು ವಾಸಿಯಾಗಲು ಸಾಕಷ್ಟು ಸಮಯ ಹಿಡಿಯುತ್ತದೆ. ಆರೋಗ್ಯವಂತ ವ್ಯಕ್ತಿಯಲ್ಲಿ ಗಾಯ ಬೇಗನೇ ವಾಸಿಯಾಗುತ್ತದೆ. ಗಾಯ ಒಣಗಲು ತಡವಾದಷ್ಟು ರೋಗಿ ಸೋಂಕಿಗೆ ಒಳಗಾಗುವ ಸಾಧ್ಯತೆಯೂ ಹೆಚ್ಚು. ಇದರಿಂದ ಆರೋಗ್ಯ ಮತ್ತಷ್ಟು ಬಿಗಡಾಯಿಸುತ್ತದೆ. ಕೆಲವು ಪ್ರಕರಣಗಳಲ್ಲಿ ಬೆರಳು, ಪಾದ ಅಥವಾ ಕಾಲು ಕತ್ತರಿಸುವ ಅನಿವಾರ್ಯತೆಯೂ ಬರುತ್ತದೆ.

ಇವೆಲ್ಲ ಸಮಸ್ಯೆಗಳನ್ನು ನಿಭಾಯಿಸಲು ವಿಜ್ಞಾನಿಗಳ ತಂಡ ಮಧುಮೇಹಿ ವ್ಯಕ್ತಿಯ ನಡಿಗೆಯ ಶೈಲಿ, ಪಾದಗಳ ಅಳತೆ ಮತ್ತು ಆಕಾರಕ್ಕೆ ತಕ್ಕಂತೆ 3 ಡಿ ಪ್ರಿಂಟೆಡ್ ಪಾದರಕ್ಷೆಗಳನ್ನು ವಿನ್ಯಾಸಗೊಳಿಸಲಾಗಿದೆ. ಸಾಂಪ್ರದಾಯಿಕ ಚಿಕಿತ್ಸಕ ಪಾದರಕ್ಷೆಗಳಿಗಿಂತ ಇವು ಭಿನ್ನ. ''ಸ್ವಯಂ ಆಫ್‌ಲೋಡ್ ಇನ್‌ಸೋಲ್ ಹೊಂದಿರುವ ಸ್ನ್ಯಾಪಿಂಗ್ ಯಾಂತ್ರಿಕ ಕೌಶಲವನ್ನು ಈ ಪಾದರಕ್ಷೆ ಒಳಗೊಂಡಿದೆ. ಇದರಿಂದಾಗಿ ವ್ಯಕ್ತಿ ನಡೆಯುವಾಗ ಸಂಪೂರ್ಣ ಸಮತೋಲನ ಪಡೆಯುತ್ತಾನೆ. ಪಾದಗಳಲ್ಲಿ ಗಾಯವಾಗಿದ್ದರೂ ಬೇಗನೆ ಗುಣವಾಗುತ್ತದೆ, ಪಾದಗಳ ಇತರ ಭಾಗದಲ್ಲಿ ಗಾಯವಾಗುವುದನ್ನೂ ತಡೆಯುತ್ತದೆ' ಎನ್ನುತ್ತಾರೆ ಕರ್ನಾಟಕ ಮಧುಮೇಹ ಸಂಸ್ಥೆಯ ಪಾದಗಳ ವಿಭಾಗದ ಮುಖ್ಯಸ್ಥ ಪವನ್ ಬೆಳೇಹಳ್ಳಿ.

ಡಯಾಬಿಟಿಕ್‌ಪೆರಿಫೆರಲ್‌ನ್ಯೂರೋಪತಿ ಅಂದರೆ, ಮಧುಮೇಹಿಯ ಪಾದಗಳ ಹೊರಭಾಗದ ನರಗಳಿಗೆ ಹಾನಿಯಾಗಿದ್ದರೆ, ಅಂತಹ ವ್ಯಕ್ತಿಗಳ ಪಾದಗಳ ಸಂವೇದನೆಯೇ ನಷ್ಟವಾಗಿರುತ್ತದೆ. ಗಾಯವಾಗಿ ರಕ್ತ ಸ್ರಾವವಾದರೂ ಅವರ ಗಮನಕ್ಕೇ ಬರುವುದಿಲ್ಲ. ಇಂತಹ ವ್ಯಕ್ತಿಗಳಿಗೆ ಈ ಪಾದರಕ್ಷೆಗಳು ಹೆಚ್ಚಿನ ಉಪಯೋಗ ಆಗುತ್ತವೆ.

ಪಾದಗಳ ಮೇಲೆ ಸಮಾನ ಒತ್ತಡ ಹಂಚಿಕೆ: ಪಾದಗಳು ಕ್ರಮೇಣ ಸಂವೇದನಾ ರಹಿತವಾಗುವುದರಿಂದ ನಡಿಗೆಯಲ್ಲೂ ವ್ಯತ್ಯಯವಾಗುತ್ತದೆ. ಆರೋಗ್ಯವಂತ ವ್ಯಕ್ತಿ ಸಾಮಾನ್ಯವಾಗಿ ಮೊದಲಿಗೆ ತನ್ನ ಹಿಮ್ಮಡಿಯನ್ನು ನೆಲದ ಮೇಲೆ ಊರುತ್ತಾನೆ.

ಮಾಜಿ ಶಾಸಕ ಎ.ಜಿ.ಕೊಡ್ಗಿ ನಿಧನ



ಎ.ಜಿ.ಕೊಡ್ಗಿ

ಕುಂದಾಪುರ (ಉಡುಪಿ ಜಿಲ್ಲೆ): ಮಾಜಿ ಶಾಸಕ ಹಾಗೂ ರಾಜ್ಯದ 3ನೇ ಹಣಕಾಸು ಆಯೋಗದ ಅಧ್ಯಕ್ಷರಾಗಿದ್ದ ಅಮಾಸೆಬೈಲ್ ಗೋಪಾಲ ಕೃಷ್ಣ ಕೊಡ್ಗಿ (93) ಸೋಮವಾರ ಮಣಿಪಾಲದ ಕೆಎಂಸಿ ಆಸ್ಪತ್ರೆಯಲ್ಲಿ ಬಹುಅಂಗಾಂಗ ವೈಫಲ್ಯದಿಂದ ನಿಧನರಾದರು.

ಎ.ಜಿ.ಕೊಡ್ಗಿ ಎಂದೇ ಹೆಸರುವಾಸಿಯಾಗಿದ್ದ ಅವರು, ಬೈಂದೂರು ವಿಧಾನಸಭಾ ಕ್ಷೇತ್ರದಿಂದ ಎರಡು ಅವಧಿಗೆ (1972 ಹಾಗೂ 1978) ಕಾಂಗ್ರೆಸ್‌ನಿಂದ ಆಯ್ಕೆಯಾಗಿದ್ದರು. 1993ರಲ್ಲಿ ಬಿಜೆಪಿ ಸೇರಿದ್ದರು. 2006ರಲ್ಲಿ ರಾಜ್ಯದ 3ನೇ ಹಣಕಾಸು ಆಯೋಗದ ಅಧ್ಯಕ್ಷರಾಗಿ ಹಾಗೂ 2009ರಲ್ಲಿ 3ನೇ ಹಣಕಾಸು ಆಯೋಗದ ವರದಿ ಅನುಷ್ಠಾನ ಕಾರ್ಯಪಡೆಯ ಅಧ್ಯಕ್ಷರಾಗಿದ್ದರು.

ಈಚೆಗೆ ಸಕ್ರಿಯ ರಾಜಕಾರಣದಿಂದ ದೂರವಾಗಿದ್ದು, ಅಮಾಸೆಬೈಲ್ ಚಾರಿಟಬಲ್ ಟ್ರಸ್ಟ್ ಮೂಲಕ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು.

ಅವರಿಗೆ ಪತ್ನಿ ಸುನಂದಾ, ಪುತ್ರಿ, ರಾಜ್ಯ ಆಹಾರ ನಿಗಮದ ಉಪಾಧ್ಯಕ್ಷ ಎ.ಕಿರಣಕುಮಾರ ಕೊಡ್ಗಿ, ಕ್ಯಾಂಪ್ಕೊ ಅಧ್ಯಕ್ಷ ಎ.ಕಿಶೋರಕುಮಾರ ಕೊಡ್ಗಿ ಸೇರಿದಂತೆ ಐವರು ಪುತ್ರರು ಇದ್ದಾರೆ.

ಅಂತಿಮ ದರ್ಶನಕ್ಕೆ ಅಮಾಸೆಬೈಲಿನಲ್ಲಿ ಮಂಗಳವಾರ (ಜೂ.14) ಮಧ್ಯಾಹ್ನ 1 ಗಂಟೆಯವರೆಗೆ ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದ್ದು, ನಂತರ ಸ್ವಗೃಹದ ಸಮೀಪ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಯಚೂರಿನಲ್ಲಿ ಸೋಮವಾರ ನಡೆದ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಪುರಸ್ಕೃತರ ಜೊತೆಗೆ ಸಾಹಿತಿ ಎಚ್‌.ಎಸ್‌.ಶಿವಪ್ರಕಾಶ್, ಅಕಾಡೆಮಿ ಅಧ್ಯಕ್ಷ ಬಿ.ವಿ.ವಸಂತಕುಮಾರ ಮತ್ತು ಅತಿಥಿಗಳು ಇದ್ದಾರೆ

ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ರಾಯಚೂರು: ಇಲ್ಲಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಪ್ರೇಕ್ಷಾಗೃಹದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ವತಿಯಿಂದ ಸೋಮವಾರ ನಡೆದ ಸಮಾರಂಭದಲ್ಲಿ ಸಾಹಿತಿಗಳಿಗೆ 2020–21ನೇ ಸಾಲಿನ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಾಹಿತಿಗಳಾದ ಜಿನದತ್ತ ದೇಸಾಯಿ, ಡಾ.ನಾ.ಮೊಗಸಾಲೆ, ಡಾ.ಸರಸ್ವತಿ ಚಿಮ್ಮಲಗಿ, ಪ್ರೊ.ಬಸವರಾಜ ಕಲ್ಗುಡಿ ಮತ್ತು ಯಲ್ಲಪ್ಪ ಕೆ.ಕೆ.ಪುರ ಅವರಿಗೆ 'ಗೌರವ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಪ್ರಶಸ್ತಿಯು ₹50 ಸಾವಿರ ನಗದು ಒಳಗೊಂಡಿದೆ.

ಸಾಹಿತಿಗಳಾದ ಡಾ.ಚಂದ್ರಕಲಾ ಬಿದರಿ, ಪ್ರೊ.ಎಂ.ಎನ್.ವೆಂಕಟೇಶ, ಡಾ. ಚನ್ನಬಸವಯ್ಯ ಹಿರೇಮಠ, ಡಾ.ಮ. ರಾಮಕೃಷ್ಣ, ಅಬ್ದುಲ್ ರಶೀದ್, ಡಾ.ವೈ. ಎಂ.ಭಜಂತ್ರಿ, ಗಿರೀಶರಾವ್ ಹತ್ವಾರ್ (ಜೋಗಿ), ಮೈಸೂರು ಕೃಷ್ಣಮೂರ್ತಿ, ಗಣೇಶ ಅಮೀನಗಡ, ಆಲೂರು ದೊಡ್ಡನಿಂಗಪ್ಪ ಅವರಿಗೆ 'ಸಾಹಿತ್ಯ ಶ್ರೀ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಪ್ರಶಸ್ತಿಯು ₹25 ಸಾವಿರ ನಗದು ಒಳಗೊಂಡಿದೆ.

ವರ್ಷದ ಪುಸ್ತಕ ಬಹುಮಾನಕ್ಕೆ ಆಯ್ಕೆಯಾದ 19 ಕೃತಿಗಳ ಲೇಖಕರಿಗೆ ನಗದು ಮತ್ತು ಪ್ರಮಾಣಪತ್ರ ನೀಡಲಾಯಿತು. ದತ್ತಿ ಬಹುಮಾನಕ್ಕೆ ಆಯ್ಕೆಯಾದ 10 ಕೃತಿಗಳ ಲೇಖಕರಿಗೂ ಬಹುಮಾನ ನೀಡಲಾಯಿತು.

ಇದಕ್ಕೂ ಮುನ್ನ ಅಭಿನಂದನಾ ನುಡಿಗಳನ್ನಾಡಿದ ಸಾಹಿತಿ ಎಚ್. ಎಸ್.ಶಿವಪ್ರಕಾಶ್ ಅವರು, 'ಮಹಾರಾಜರು ನಿರ್ಮಿಸಿದ ಸ್ಮಾರಕಗಳು ಅಳಿದುಹೋಗಿವೆ. ಆದರೆ, ಸಾಹಿತ್ಯ ಪರಂಪರೆಗೆ ಅಳಿವಿಲ್ಲ' ಎಂದು ಹೇಳಿದರು.

'ಜಗತ್ತಿನ ಬೇರೆಬೇರೆ ದೇಶಗಳ ಸಾಹಿತ್ಯವನ್ನು ಅವಲೋಕಿಸಿದಾಗ, ಭಾರತದಲ್ಲಿರುವ ವೈವಿಧ್ಯಮಯ ಸಾಹಿತ್ಯ ಅವರಲ್ಲಿ ಇಲ್ಲ' ಎಂದರು.

'ಕನ್ನಡದಲ್ಲಿರುವ ಸಮಗ್ರತೆ ಬೇರೆ ಸಾಹಿತ್ಯದಲ್ಲಿ ಇಲ್ಲ. ಆದರೆ, ಕ್ಯುಬಾದಂತಹ ಸಣ್ಣ ದೇಶಗಳಲ್ಲೂ ವರ್ಷಕ್ಕೆ ಹತ್ತಾರು ಅಂತರ ರಾಷ್ಟ್ರೀಯ ಮಟ್ಟದ ಕಾವ್ಯ ಸಮ್ಮೇಳನ ನಡೆಯುತ್ತವೆ. ಭಾರತದಲ್ಲಿ ಈ ರೀತಿ ಕಾರ್ಯಕ್ರಮಗಳಾಗುವುದಿಲ್ಲ. ವಿದೇಶಗಳಲ್ಲಿ ಸಾಹಿತ್ಯವನ್ನು ಎಲ್ಲ ಸ್ತರಗಳಲ್ಲೂ ಒಯ್ಯುತ್ತಾರೆ. ಜೈಲು, ಆಸ್ಪತ್ರೆ, ವೃದ್ಧಾಶ್ರಮದಲ್ಲೂ ಸಾಹಿತ್ಯ ಕಾರ್ಯಕ್ರಮ ನಡೆಯುತ್ತವೆ' ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್ ಕಾರ್ಯಕ್ರಮ ಉದ್ಘಾಟಿಸಿದರು. ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ.ವಸಂತಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಸಕ ಡಾ.ಶಿವರಾಜ ಪಾಟೀಲ ಅಧ್ಯಕ್ಷತೆ ವಹಿಸಿದ್ದರು.

ಅವೈಜ್ಞಾನಿಕ ಡಿ.ಪಿ.ಆರ್ ರದ್ದತಿಗೆ ಜಿಲ್ಲೆಯಾದ್ಯಂತ ತೀವ್ರ ಒತ್ತಾಯ

ನದಿ ಜೋಡಣೆ: ಸೂಕ್ಷ್ಮ ಪರಿಸರಕ್ಕೆ ಕುತ್ತು

• ಗಣಪತಿ ಹೆಗಡೆ

ಶಿರಸಿ: ಪಶ್ಚಿಮ ಘಟ್ಟವನ್ನು ಸಮೃದ್ಧವಾಗಿಡುವ ಪ್ರಮುಖ ನದಿಗಳು ಬೇಡ್ತಿ ಹಾಗೂ ವರದಾ. ಈ ನದಿಗಳ ನೀರನ್ನು ಬಿಸಿಲನಾಡಿನ ತುಂಗಭದ್ರಾ ಎಡದಂಡೆ ಕಾಲುವೆಗೆ ಹರಿಸುವ ಸಂಬಂಧ ರಾಜ್ಯ ಸರ್ಕಾರದ ಸೂಚನೆ ಮೇರೆಗೆ 'ರಾಷ್ಟ್ರೀಯ ಜಲಮೂಲ ಅಭಿವೃದ್ಧಿ ಏಜೆನ್ಸಿ' (ಎನ್.ಡಬ್ಲ್ಯು.ಡಿ.ಎ.) ಸಿದ್ಧಪಡಿಸಿದ ವಿಸ್ತೃತ ಯೋಜನಾ ವರದಿಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ವ್ಯಾಪಕ ವಿರೋಧ ವ್ಯಕ್ತವಾಗಿದೆ.

2021ರ ಬಜೆಟ್‌ನಲ್ಲಿ ಡಿ.ಪಿ.ಆರ್. ಸಿದ್ಧಪಡಿಸಲು ಅನುದಾನ ಮೀಸಲಿಡಲಾಗಿತ್ತು. ಈಚೆಗೆ ರಾಜ್ಯ ಸರ್ಕಾರಕ್ಕೆ ಡಿಪಿಆರ್ ಸಲ್ಲಿಕೆಯಾಗಿದೆ. ಇದನ್ನು ಆಧರಿಸಿ ಸರ್ಕಾರ ಶೀಘ್ರವೇ ಯೋಜನೆ ಜಾರಿಗೆ ತರಬಹುದು ಎಂಬ ಆತಂಕ ಜಿಲ್ಲೆಯಲ್ಲಿ ಮನೆಮಾಡಿದೆ.

'ನದಿ ನೀರನ್ನು ತಿರುಗಿಸಿ ಒಯ್ಯುವ ಯೋಜನೆ ನಿಷ್ಪ್ರಯೋಜಕ ಎಂಬುದು ಎತ್ತಿನ ಹೊಳೆ ಯೋಜನೆಯಿಂದ ಮನದಟ್ಟಾಗಿದೆ. ಆದರೂ ಸರ್ಕಾರ ಸಾವಿರಾರು ಕೋಟಿ ವೆಚ್ಚದ ಯೋಜನೆ ಕೈಗೆತ್ತಿಕೊಂಡು ಸೂಕ್ಷ್ಮ ಪರಿಸರಕ್ಕೆ ಕುತ್ತು ತರುವುದು ಏಕೆ ಎಂಬುದೇ ಅರ್ಥವಾಗುತ್ತಿಲ್ಲ' ಎನ್ನುತ್ತಾರೆ ಪರಿಸರ ತಜ್ಞರು.

'ಸ್ಥಳ ಸಮೀಕ್ಷೆ ನಡೆಸದೆ ಕೇವಲ ನಕ್ಷೆ, ಮಳೆಯ ಅಂಕಿ–ಅಂಶ ಆಧರಿಸಿ ಸಿದ್ಧಪಡಿಸಿದ ಡಿ.ಪಿ.ಆರ್. ಅವೈಜ್ಞಾನಿಕವಾಗಿದೆ. ಅರಣ್ಯ ಭೂಮಿ, ಕೃಷಿಭೂಮಿ ನಾಶದ ಕುರಿತು ನಿಖರ ಮಾಹಿತಿಯನ್ನೂ ಒಳಗೊಂಡಿಲ್ಲ' ಎಂದು ಪರಿಸರ ತಜ್ಞರು ದೂರಿದ್ದಾರೆ.

'ತುಂಗಭದ್ರಾ ಎಡದಂಡೆ ಯೋಜನಾ ಪ್ರದೇಶವಾದ ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಗೆ ನೀರನ್ನು ಒಯ್ಯುವುದು ಯೋಜನೆಯ ಉದ್ದೇಶ. ಆ ಭಾಗದಲ್ಲಿ ಅತಿ ನೀರಾವರಿಯಿಂದಾಗಿ ಹೊಲಗಳು ಜವುಳಾಗಿದೆ. ಕ್ಷಾರತೆ ಹೆಚ್ಚಿ, ಫಲವತ್ತತೆ ಕಳೆದುಕೊಂಡು ನಿಷ್ಪ್ರಯೋಜಕವಾಗುತ್ತಿದೆ. ಮತ್ತೆ ಅಲ್ಲಿಗೆ ನೀರು ಹರಿಸುವ ಅಗತ್ಯ ಇಲ್ಲ. ಅಲ್ಲಿಗೆ ಹರಿಸುವಷ್ಟು ನೀರು ಎಲ್ಲ ಕಾಲದಲ್ಲೂ ಬೇಡ್ತಿ, ಶಾಲ್ಮಲಾದಲ್ಲಿ ಲಭ್ಯವಿರದು' ಎನ್ನುತ್ತಾರೆ ಸಂರಕ್ಷಣಾ ಜೀವಶಾಸ್ತ್ರಜ್ಞ ಡಾ.ಕೇಶವ ಕೊರ್ಸೆ.

'ನದಿ ಜೋಡಣೆ ಯೋಜನೆಯಿಂದ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚು ಎಂಬ ಅಂಶವನ್ನು ಅಧ್ಯಯನ ಸಮೇತ ಪರಿಸರ ತಜ್ಞರು ಮನವರಿಕೆ ಮಾಡಿಕೊಟ್ಟಿದ್ದಾರೆ. ಯೋಜನೆ ಕೈಬಿಡುವಂತೆ ಸರ್ಕಾರಕ್ಕೆ ಮನದಟ್ಟು ಮಾಡಲಾಗುವುದು' ಎಂದು ವೃಕ್ಷಲಕ್ಷ ಆಂದೋಲನ ಸಮಿತಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಹೇಳಿದ್ದಾರೆ.

ಯಲ್ಲಾಪುರದ ಮಾಗೋಡು ಸಮೀಪ ಹರಿಯುವ ಬೇಡ್ತಿ ನದಿ

> ನದಿ ನೀರನ್ನು ಸಾಗಿಸಲು ಪಶ್ಚಿಮಘಟ್ಟದ ಪರ್ವತಗಳಿಗೆ ಕೊರೆಯುವ ಸುರಂಗದಿಂದ ಭೂಕುಸಿತ ಹೆಚ್ಚಲಿದೆ. ಸೂಕ್ಷ್ಮ ಅರಣ್ಯನಾಶ, ವನ್ಯಜೀವಿಗಳಿಗೆ ನೆಲೆ ಇಲ್ಲದಂತಾಗಲಿದೆ
>
> **ಡಾ.ಕೇಶವ ಕೊರ್ಸೆ**
> ಸಂರಕ್ಷಣಾ ಜೀವಶಾಸ್ತ್ರಜ್ಞ

ಸಮಾವೇಶ ಇಂದು

ನದಿ ಜೋಡಣೆ ಯೋಜನೆ ವಿರುದ್ಧ ಸ್ವರ್ಣವಲ್ಲಿ ಮಠದ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಮಾರ್ಗದರ್ಶನದಲ್ಲಿ ವೃಕ್ಷಲಕ್ಷ ಆಂದೋಲನ ಸಮಿತಿ, ಬೇಡ್ತಿ ಕೊಳ್ಳ ಸಂರಕ್ಷಣಾ ಸಮಿತಿ, ಇನ್ನಿತರ ಸಂಘ–ಸಂಸ್ಥೆಗಳೊಂದಿಗೆ ಸೇರಿ ಆಂದೋಲನ ಆರಂಭಿಸಿವೆ. ಯೋಜನೆ ವಿರುದ್ಧ ಸರಣಿ ಸಭೆ ನಡೆದಿವೆ. ಜೂನ್14 ರಂದು ಯಲ್ಲಾಪುರದ ಮಂಚಿಕೇರಿಯಲ್ಲಿ ಸಮಾವೇಶ ಏರ್ಪಾಟಾಗಿದೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79 ಫ್ಯಾಕ್ಸ್: 080–22268667
ಇ–ಮೇಲ್: kerc-ka@nic.in ವೆಬ್‌ಸೈಟ್: www.karunadu.karnataka.gov.in/kerc
ಸಂಖ್ಯೆ:ಕವಿನಿಆ/01/ಡಿಡಿಡಿ/22–23/303, ಬೆಂಗಳೂರು ದಿನಾಂಕ: 13–06–2022

ಸೂಚನೆ

ವಿಷಯ: ಕರಡು – ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳು (ಸಿಓಎಸ್) (ಹತ್ತನೇ ತಿದ್ದುಪಡಿ) 2022.

ಮೇಲ್ಕಂಡ ವಿಷಯದಲ್ಲಿ ಪ್ರಸ್ತಾಪಿಸಿರುವ ಷರತ್ತುಗಳ ಕರಡು ತಿದ್ದುಪಡಿಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 13–05–2022 ರಂದು ಪ್ರಕಟಗೊಳಿಸಲಾಗಿದ್ದು, ಸದರಿ ಪ್ರತಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ವೆಬ್‌ಸೈಟ್: www.karunadu.karnataka.gov.in/kerc ನಲ್ಲಿ ಲಭ್ಯವಿರಿಸಲಾಗಿದೆ.

ಆಯೋಗವು ದಿನಾಂಕ: **15–06–2022 ರಂದು ಬೆಳಿಗ್ಗೆ 11.00 ಗಂಟೆಗೆ** ಆಯೋಗದ ನ್ಯಾಯಾಂಗ ಸಭಾಂಗಣದಲ್ಲಿ ಏರ್ಪಡಿಸಿದ್ದ ಸಾರ್ವಜನಿಕ ವಿಚಾರಣೆಯನ್ನು ಅನಿವಾರ್ಯ ಕಾರಣಗಳಿಂದ ದಿನಾಂಕ: **23–06–2022 ರಂದು ಬೆಳಿಗ್ಗೆ 11.00 ಗಂಟೆಗೆ ಆಯೋಗದ ನ್ಯಾಯಾಂಗ ಸಭಾಂಗಣದಲ್ಲಿ ಮರು ನಿಗದಿಪಡಿಸಲಾಗಿದೆ.** ಆಸಕ್ತರು ಈ ವಿಚಾರಣೆಯಲ್ಲಿ ಭಾಗವಹಿಸಿ ಆಯೋಗದ ಮುಂದೆ ದಿನಾಂಕ: **23–06–2022ರಂದು ಬೆಳಿಗ್ಗೆ 11.00 ಗಂಟೆಗೆ** ಖುದ್ದಾಗಿ ಹಾಜರಾಗಬಹುದು ಮತ್ತು ಮೌಖಿಕ ಸಲ್ಲಿಕೆಗಳನ್ನು ಮಾಡಬಹುದು.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ
ವಾಸಾಸಂಇ/ವಾ.ಪ್ರ/872/2022–23

MADRAS ENGINEER GROUP & CENTRE, BANGALORE

MADRAS SAPPERS
EX-SERVICEMEN RALLY 2022

HIGHLIGHTS
- Medical Camp
- Dental Camp
- Pension Related Issues
- ECHS Card Related Issues
- Welfare Schemes
- Banking Related Issues
- Aadhar Card Related Issues
- Canteen Card Related Issues
- Lunch

DATE : 25th JUNE 2022,
TIME : 0900-1700 HRS.
VENUE : CICE GROUND, MEG & CENTRE
ENTRY : SPG GATE
"FOR ESM OF MEG OF KARNATAKA STATE ONLY"

CONTACTS
Sub Maj RAMESH SHETTY +91-8861716155
Sub Maj DORAIRAJ +91-8448332971, +91-6239065003
Sub Maj RAVI +91-7829765848
email : meg1780@yahoo.co.in

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಉದ್ಯಮ)
ಕಾರ್ಯಾಲಯ : ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ, ಐಬಿಸಿ ವಿಭಾಗ ಸಂ:1 ಕೆಂಭಾವಿ, ತಾ: ಸುರಪುರ, ಜಿ: ಯಾದಗಿರಿ
Phone: 08443-278674, e-Mail: ee_ibcdiv1kembhavi@yahoo.com
ಸಂ: ಕೃಭಾಜನಿನಿ/ಐಬಿಸಿ ವಿ–1/ಪಿಬಿ/ಟೆಂಡರ /2022–23/88 ದಿನಾಂಕ: 30–05–2022

ಅಲ್ಪಾವಧಿ ಟೆಂಡರ ಪ್ರಕಟಣೆ CALL-2
(ಇ–ಪ್ರಾಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ವಿಭಾಗ ಸಂ.1 ಕೆಂಭಾವಿ ಇವರು ಕರ್ನಾಟಕ ಸರಕಾರದ ಇ–ಪ್ರಾಕ್ಯೂರಮೆಂಟ್ ಪೋರ್ಟಲ್‌ನಲ್ಲಿ Head work (gutti basavanna LIS) ಅಡಿಯಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಯಾದ Providing and installing 8 numbers of new VT pump and motors to Indi lift scheme (Gutti Basavanna) at Kembhavi jackwell, Tq Shorapur Dist Yadgir with operation and Maintenance for a period of Five years (Civil work: Intake canal lining)(I.N.21893) ಟೆಂಡರ ಮೊತ್ತ: 99.87 ಲಕ್ಷಗಳು ಇ.ಎಂ.ಡಿ ಮೊತ್ತ:2.00 ಲಕ್ಷಗಳು percentage basis from A valid Copy of registration certificate as class-I and above contractors registered in KPWD. ಗುತ್ತಿಗೆದಾರರಿಂದ ಟೆಂಡರನ್ನು ದ್ವಿ ಮಾತ್ರ–ಲಕೋಟೆ ಪದ್ಧತಿಯ ಮೂಲಕ ಟೆಂಡರನ್ನು ಅಹ್ವಾನಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ ವೆಬ್ ಸೈಟ್ http://eproc.karnataka.gov.in/eportal/index.seam link ಮಾಹಿತಿ ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಬಹುದು.

1) ಇ–ಪ್ರಾಕ್ಯೂರಮೆಂಟ್ http://eproc.karnataka.gov.in/eportal/index.seam link ವೆಬ್‌ಸೈಟ್ ನಿಂದ ಖಾಲಿ ಟೆಂಡರ ಬಿಡ್ ದಾಖಲೆಗಳನ್ನು ಡೌನ್ ಲೋಡ್ ಮಾಡಿಕೊಳ್ಳುವದು ಮತ್ತು ಭರ್ತಿ ಮಾಡಿದ ಬಿಡ್ ದಾಖಲೆಗಳನ್ನು ಸಲ್ಲಿಸುವ ದಿನಾಂಕ: **15–06–2022 ರಿಂದ 22–06–2022** ರ ಸಾಯಂಕಾಲ 4.30 ಗಂಟೆಯವರೆಗೆ ಸಲ್ಲಿಸುವದು. 2) ಭರ್ತಿಗೊಳಿಸಿದ ಇ–ಟೆಂಡರ ಮುಸ್ತಕವನ್ನು ಸಲ್ಲಿಸಲು ಕೊನೆ ದಿನಾಂಕ: **22–06–2022ರ ಸಾಯಂಕಾಲ 4.30 ಘಂಟೆಯವರೆಗೆ ಸಲ್ಲಿಸುವದು.** 3) ಕವರ–I(technical bid) ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ವಿಭಾಗ ಸಂ. 1 ಕೆಂಭಾವಿ ತಾ: ಸುರಪುರ ಜಿಲ್ಲೆ:ಯಾದಗಿರಿ ಕಛೇರಿಯಲ್ಲಿ ದಿನಾಂಕ: **24–06–2022 ರ ಬೆಳಿಗ್ಗೆ 11.00** ಘಂಟೆಗೆ ಹಾಜರಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವದು. 4) ಕವರ–II(Financial bid) ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ವಿಭಾಗ ಸಂ. 1 ಕೆಂಭಾವಿ ತಾ: ಸುರಪುರ ಜಿಲ್ಲೆ:ಯಾದಗಿರಿ ಕಛೇರಿಯಲ್ಲಿ ದಿನಾಂಕ: 28–06–2022 ರ ಬೆಳಿಗ್ಗೆ 11.00 ಘಂಟೆಗೆ ಹಾಜರಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವದು. 5) ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸುವದು. 6) ಯಾವುದೇ ಕಾರಣ ನೀಡದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳು ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ. ಐಬಿಸಿ ವಿಭಾಗ ಸಂ 1 ಕೆಂಭಾವಿ–585216
ವಾ.ಸಾ.ಸಂ.ಇ/ಯಾದಗಿರಿ/97/ಎಂಸಿಎ/2022–23

ಜಿಲ್ಲಾ ಪಂಚಾಯತ್ ತುಮಕೂರು,
ಕಾರ್ಯಪಾಲಕ ಅಭಿಯಂತರರವರ ಕಚೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ.
ದೂ:0816-2252937
ಸಂಖ್ಯೆ12/ಕಾಪಾಅ/ಗ್ರಾಕುನೀನೈ ವಿ/ತುಮ/ಟೆಂಡರ್/2022–23/656 ದಿನಾಂಕ 10.06.2022

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 12/2022–23
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ ಮತ್ತು ನೈರ್ಮಲ್ಯ ವಿಭಾಗ, ತುಮಕೂರು ಇವರು 2022–23 ನೇ ಸಾಲಿಗೆ ಏಕ–ಲಕೋಟೆ ಮತ್ತು ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಸೂಕ್ತ ನೊಂದಾಯಿತ ಗುತ್ತಿಗೆದಾರರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನ ವಿವರ ಈ ಕೆಳಕಂಡಂತಿರುತ್ತದೆ. ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಅನುಮೋದನೆಗೊಂಡಿರುವ ಗುಬ್ಬಿ, ಶಿರಾ ಮತ್ತು ಪಾವಗಡ ತಾಲ್ಲೂಕಿನ ಕಾಮಗಾರಿಗಳಿಗೆ ಇ–ಪ್ರೂಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ (https://www.eproc. karnataka. gov.in) ಬಿಡ್ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಅ) ಕನಿಷ್ಠ ಕಾಮಗಾರಿ ಮೊತ್ತ ರೂ.5.38 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.13500/– ಗಳು ಹಾಗೂ ಆ) ಗರಿಷ್ಠ ಮೊತ್ತ ರೂ.83.69 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.167380/– ಗಳು (1) ಭರ್ತಿಮಾಡಿದ ಟೆಂಡರ್‌ನ್ನು ಸಲ್ಲಿಸುವ ಅಂತಿಮ ದಿನಾಂಕ : **20.06.2022** ಸಂಜೆ 5:00 ಘಂಟೆ ವರೆಗೆ (2) ಪೂರ್ವಭಾವಿ ಸಭೆ (KW-3 ಕಾಮಗಾರಿಗಳಿಗೆ) ದಿನಾಂಕ: **16.06.2022** ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ&ನೈರ್ಮಲ್ಯ ವಿಭಾಗ ತುಮಕೂರು (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **21.06.2022** ಸಂಜೆ 05.30 ಘಂಟೆಯ ನಂತರ (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **27.06.2022** ಬೆಳಿಗ್ಗೆ 11.00 ಘಂಟೆಯ ನಂತರ.

ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ತುಮಕೂರು ವಿಭಾಗ, ತುಮಕೂರು
DIPR/TMK/201/MCA/2022-23

ಕ್ಷೇಮ ಕುಶಲ

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599 ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಕೊರೊನಾ ಕಾರ್ಮೋಡದಡಿ ಮಳೆಗಾಲದ ಆರೋಗ್ಯಪಾಲನೆ



ಡಾ. ಸತ್ಯನಾರಾಯಣ ಭಟ್ ಪಿ.

ಕರಿಮೋಡವನ್ನೇ ದೂತನನ್ನಾಗಿಸಿದ ಮಹಾಕವಿ ಕಾಳಿದಾಸ. ಸವಿಗನ್ನಡದ ಕವಿವರರ ಲೇಖನಿಯ ಮಳೆಗಾಲದ ಬಣ್ಣನೆಯೂ ಅಪೂರ್ವ. '... ಕನ್ನಡನಾಡಿನ ಹಸಿವಿನ ಭೂತದ ಕೂವೋ? ಹೊಸತಿದು ಕಾಲನ ಕೋಣನ ಓವೋ? ಬೊಬ್ಬೆಯ ಹಬ್ಬಿಸಿ ಒಂದೇ ಬಾರಿಗೆ ಕೆರೆಗಳನುಕ್ಕಿಸಿ ಉಬ್ಬರ ಎಬ್ಬಿಸಿ ಕಡಲಿನ ನೀರಿಗೆ ತೊರೆಗಳನುಕ್ಕಿಸಿ ಬರುವುದು ಬರ ಬರ ಭರದಲಿ ಬರುವುದು ಕಾರ್ಮೋಡ!' ಹೀಗೆಂದರು ಪಂಜೆ ಮಂಗೇಶರಾಯರು. '...ಬಂತೈ ಬಂತೈ ಇದೆ ಇದೆ ಬಂತೈ ಜಿನುಗುತಿರುವ ಹನಿ ಸೋನೆಗಳು/ ಗುಡುಗನು ಗುಡುಗಿಸಿ ನೆಲವನು ನಡುಗಿಸಿ ಸುರಿಸಿದ ತೆಂಕಣ ಗಾಳಿಯು ಕೊಂಕಣ ಸೀಮೆಗೆ ಬಂತೈ ಬಂತೈ.' 'ನೇಗಿಲ ಹಿಡಿದ ಹೊಲದಲಿ ಹಾಡುವ ಉಳುವಾ ಯೋಗಿಯ ನೋಡಲ್ಲಿ!' ಕುವೆಂಪು ಬರೆದ ಮಳೆಗಾಲದ ಕಾಯಕ ಯೋಗಿಯ ಮಳೆಗಾಲದ ಜೀವನಗಾಥೆ. ಇಂತಹ ಸಾಲುಗಳು ಅಂದು ಇಂದು ಎಂದೆಂದಿಗೂ ಪ್ರಸ್ತುತ. ಆದರೆ ಇಂದು ಹೊಸ ಕಾಲಘಟ್ಟದ ಸವಾಲುಗಳನ್ನೆದುರಿಸುವ ಅನಿವಾರ್ಯತೆ, ಅನಿಶ್ಚಿತತೆ ನಮ್ಮನ್ನು ಕಾಡುತ್ತಿರುವುದು ನಿತ್ಯ ಸತ್ಯ. 'ಅಯ್ಯೋ ನೆಗಡಿಯೇ' – ಎಂದು ಹೀಗಳೆಯುವ ಕಾಲವಿದಲ್ಲ. ನೆಗಡಿಯೇ ಆಳುವವರ, ಅಳುವವರ ಮೂಗು ಹಿಡಿದು ಹಿಂಡಿ ಹಿಪ್ಪೆಯಾಗಿವೆ. ಎರಡು ಮಳೆಗಾಲಗಳು ಅಂತೂ ಇಂತೂ ಕಳೆದುವು. ಇದೀಗ ಮತ್ತೆ ಶುರು. ಕಾರ್ಗಾಲದ ವೈಭವ! ಇಂತಹ ವಿಷಮ ಋತು ಮತ್ತು ರೋಗಭಯದ ನಡುವೆ ನಾವೇನು ಮಾಡಬೇಕು? ಆರೋಗ್ಯಭಾಗ್ಯವನ್ನು ಪಡೆಯುವ ದಾರಿಗಳಾವುವು? ಆಯುರ್ವೇದ ರೀತ್ಯಾ ಮಳೆಗಾಲದಲ್ಲಿ ರೋಗನಿರೋಧಕ ಕಸುವು ಬೆಳೆಸಿಕೊಳ್ಳುವ ವಿಧಾನಗಳ್ಯಾವುವು? ಹವಾಮಾನ ವೈಪರೀತ್ಯ ಎಂಬ ಅಂತರರಾಷ್ಟ್ರೀಯ ಮಟ್ಟದ ಸವಾಲುಗಳಿಗೆ ನಮ್ಮ ರಾಜ್ಯವೂ ಹೊರತಾಗಿಲ್ಲ.

ಯಾವುದು ಬೇಸಿಗೆ, ಯಾವುದು ಮಳೆಗಾಲ – ಎಂಬ ದ್ವಂದ್ವ ಮನುಷ್ಯರ ಸಮಸ್ಯೆ ಮಾತ್ರವಲ್ಲ. ಕಾಡು, ನಾಡು ಪ್ರಾಣಿಗಳು, ಪಕ್ಷಿಸಂಕುಲ ಸಹ ಎದುರಿಸುವ ಸವಾಲುಗಳು. ಗಿಡ ಮರಗಳೂ ಅಕಾಲದ ಹೂ ಹಣ್ಣು, ಫಸಲು ತಳೆದಿವೆ. ಬಿಸಿಲು– ಮಳೆಗಳ ಜೂಟಾಟ ಮುಂದುವರೆದಂತೆ ಉಸಿರಾಟದ ಸಮಸ್ಯೆ ಉಲ್ಬಣ. ಮೋಡ ಕವಿದಷ್ಟೂ ವಾತಾವರಣದ ಆಮ್ಲಜನಕಾಂಶ ಕುಸಿತ. ಹೀಗಾದಾಗ ಗುಂಡಿಗೆ ರೋಗ, ಪುಪ್ಪುಸದ ಕಾರ್ಯಕ್ಷಮತೆ ಇಳಿಮುಖ. ನದಿ, ಕೆರೆ ತುಂಬ ತುಂಬಿ ಹರಿದಾಡುವ ಹೊಸ ನೀರು ಪಾನ ಯೋಗ್ಯವಲ್ಲ ಅನ್ನುತ್ತದೆ, 'ಚರಕಸಂಹಿತೆ'. ಅಂತಹ ಮೂಲಗ್ರಂಥಗಳ ನಿಲುವುಗಳಾವುವು?

ಜಲಮೂಲಗಳ ಶುದ್ಧೀಕರಣ

ಅಧರ್ಮದಿಂದ ಜನಸಮೂಹ ನಾಶವಾಗುವ ಸಂಗತಿ ಹಿಂದೆ ಇತ್ತು. ಅದರ ಬಗೆಗಳನ್ನು ಚರಕಸಂಹಿತೆಯಲ್ಲಿ ಸವಿವರವಾಗಿ ಬಣ್ಣಿಸಿದ್ದು ಐದು ಸಹಸ್ರ ವರ್ಷಗಳ ಪೂರ್ವದಲ್ಲಿ. ಜನರ ಮನಸ್ಸು ಸಹ ಭೂಮಿ, ಗಾಳಿ ಮತ್ತು ನೀರು ಕೆಡುವಂತೆ ಕೆಡುವುದು ಸಹಜ. ಕುದಿಸಿದ ನೀರು ಕುಡಿಯುವ ಪರಿಪಾಠ ಎಂದಿಗಿಂತ ಮಳೆಗಾಲಕ್ಕೆ ಹೆಚ್ಚು ಅನ್ವಯ. ಬೇರೆ ಸಮಯದಲ್ಲಿ ಕಾದಾರಿದ ನೀರು ಕುಡಿಯುವ ಅಭ್ಯಾಸವಿದ್ದವರೂ, ಮಳೆಗಾಲದಲ್ಲಿ ಕಾದು ಬಿಸಿಬಿಸಿಯಾಗಿರುವ ನೀರು ಕುಡಿಯುವುದು ಒಳಿತು. ಊಟ ತಿಂಡಿಯ ನಡು ನಡುವೆ ಬಿಸಿ ನೀರು ಕುಡಿಯುತ್ತಾ ಆಹಾರ ಸೇವಿಸಿರಿ. ಆಯುರ್ವೇದದರೀತ್ಯಾ, ಮಳೆಗಾಲದುದ್ದಕ್ಕೆ ವಾತ ದೋಷ ಉಲ್ಬಣಿತ. ಹಾಗಾಗಿ ಅದಕ್ಕೆ ಪ್ರತ್ಯುಪಾಯ ಬಿಸಿ ಆಹಾರ ಮತ್ತು ಪಾನೀಯ ಸೇವನೆ. ಪಂಚಕೋಲ, ಅಂದರೆ ಶುಂಠಿ, ಹಿಪ್ಪಲಿ, ಕಾಳುಮೆಣಸು, ಕಾಳು ಮೆಣಸಿನ ಬಿಳಲ ಬೇರು ಮತ್ತು ಚಿತ್ರಮೂಲವೆಂಬ ಸಸ್ಯದ ಬೇರು. ಈ ಐದನ್ನು ಒಣಗಿಸಿ ಕುಟ್ಟಿ ಪುಡಿ ಮಾಡಿಡಬೇಕು. ಅಂತಹ ಪುಡಿಯನ್ನು ಕುಡಿಯುವ ನೀರಿನ ಸಂಗಡ ಬೆರಸಿ ಕುಡಿದರೆ ಹಿತ. ಹಳೆಯ ಧಾನ್ಯ ಬಳಕೆಗೆ ಮಳೆಗಾಲ ಸೂಕ್ತ. ಹಿಂದೆ ಅಂತಹ ವಿಧಾನಗಳು ಚಾಲ್ತಿಯಲ್ಲಿತ್ತು. ಹೊಸ ಧಾನ್ಯ ಬಳಸಿದ್ದಾದರೆ ಕಫ ಹೆಚ್ಚಳ ಎಂಬ ಸತ್ಯ ನೆನಪಿಡಿರಿ. ತುಳಸಿ, ತುಂಬೆ, ಬಿಲ್ವಪತ್ರೆಯಂತಹ ಎಲೆಗಳಿಂದ ಜಲಶುದ್ಧೀಕರಣ ಸಾಧ್ಯ. ಅವುಗಳನ್ನು ಕುಡಿಯುವ ನೀರಿನ ಸಂಗಡ ಹಾಕಿ ಕುದಿಸಬಹುದು. ಕುಡಿಯಲು ಬಳಸಬಹುದು. ಮನೆಯವರಿಗೆಲ್ಲ ಇದು ಸಾಧು. ಮನಸ್ಸಿಗೆ ಇದು ಆಹ್ಲಾದಕರ. ಕೇರಳದಲ್ಲಿ ಲಾವಂಚ, ಪದಿಮೊಗ (ಹಳದಿ ಚಕ್ಕೆ), ಲವಂಗ ಹಾಕಿದ ಬಿಸಿನೀರನ್ನು ವರ್ಷವಿಡೀ ಕುಡಿಯುವ ರಿವಾಜಿದೆ. ಇದರ ಹಿಂದೆ ಆಯುರ್ವೇದ ಸಂಗತಿಗಳಿವೆ.

ಮಳೆಗಾಲದ ಆಹಾರ

ಸುಲಭವಾಗಿ ಅರಗುವ ಆಹಾರವಷ್ಟೆ ಸಾಕು. ಭತ್ತದ ಅರಳು, ಹೆಸರುಬೇಳೆ, ಶುಂಠಿ ಹಾಕಿದ ಮಜ್ಜಿಗೆ ಬಳಸಿರಿ. ಹುಳಿ ಮತ್ತು ಸಿಹಿರಸಕ್ಕೆ ಜೈ. ಅತಿ ಖಾರ, ಮಸಾಲೆ ಪದಾರ್ಥ ಸೇವನೆ ಬೇಡ. ಮಿತಿಯರಿತ ಎಣ್ಣೆ, ತುಪ್ಪದ ಬಳಕೆಯಿಂದ ಹಿತವಿದೆ. ವಾತದ ಪ್ರಕೋಪಕ್ಕೆ ಅದರಿಂದ ಕಡಿವಾಣ. ಮಾಂಸಾಹಾರಿಗಳಿಗೆ ಬೇಗ ಜೀರ್ಣವಾಗುವಂತಹ ಆಹಾರದ ಆಯ್ಕೆ ಸೂಕ್ತ. ಹಲಸಿನ ಬಳಕೆಯ ಸಂಗಡ ತುಪ್ಪ ಮತ್ತು ಜೇನು ಮಿಶ್ರಣದಿಂದ ಲಾಭವಿದೆ. ಬೇಯಿಸಿದ ಹಲಸಿನ ತೊಳೆ ಖಾದ್ಯಗಳಿಗೆ ಒತ್ತು ನೀಡಿರಿ. ಆಷಾಢದ ಏಕಾದಶಿಗೆ ಹಲಸಿನ ಬಳಕೆಗೆ ಪರಂಪರೆಯ ಒತ್ತು ನೀಡಿದ್ದು ನೆನಪಿಡಿರಿ.

ವಿಹಾರಕ್ರಮ

ವೆಚ್ಚಕ್ಕೆ ಹೊನ್ನಾಗಿ ಬೆಚ್ಚನೆಯ ಮನೆಯಾಗಿ, ಇಚ್ಛೆಯನರಿತು ನಡೆವ ಸತಿಯಿದ್ದೊಡೆ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ! ಮನೆ ಬೆಚ್ಚಗಾಗಿಸಲು ಧೂಪನ ವಿಧಾನ ಹೇಳಿದೆ. ಮನ ಬೆಚ್ಚಗಾಗಲು ಧೂಮಪಾನ, ನಶೆಗಳು ಮಾತ್ರ ಬೇಡ. ಮಧೂದಕ, ಅಂದರೆ ಜೇನುನೀರಷ್ಟೆ ಕುಡಿಯಿರಿ. ಬೆಚ್ಚನೆಯ ಬಟ್ಟೆ ಧರಿಸಿರಿ. ಕೈಕಾಲು ಬೆಚ್ಚಗೆ ಇರುವಂತೆ ಕೈಗವಸು, ಕಾಲ್ಚೀಲದ ಬಳಕೆ ಲೇಸು. ಅನಗತ್ಯ ಓಡಾಟ ಬೇಡ. ಕುಳಿರ್ಗಾಳಿ, ಎದಿರು ಮಳೆ, ತುಂತುರು ಸೋನೆಗೊಡ್ಡಿಕೊಳ್ಳದಿರಿ. ಜಾಗಿಂಗ್ ನೆಪದಲ್ಲಿ ಅಪಾಯ ತಂದುಕೊಳ್ಳದಿರಿ. ಮನೆಯೊಳಗಿನ ವ್ಯಾಯಾಮ, ಯೋಗ, ಪ್ರಾಣಾಯಾಮಗಳಿಗಿರಲಿ ಒತ್ತು. ❖

ಗಾಳಿ ಶುದ್ಧೀಕರಣ

ಉಸಿರಾಡುವ ಗಾಳಿ ಶುದ್ಧೀಕರಣದ ಬಗೆ ಹೇಗೆ? ಮಳೆಗಾಲದ ಬೀಸುಗಾಳಿಯಲ್ಲಿ ತೇವಾಂಶ ಅಧಿಕ. ಮನೆಗಳಲ್ಲಿ ಮಣ್ಣಿನ ಕುಂಡದ ತುಂಬ ಕೆಂಡ ಹಾಕಿ ಅದಕ್ಕೆ ಕೆಲ ಸುವಾಸನಾಭರಿತ ವಸ್ತುಗಳನ್ನು ಉದುರಿಸಿ ಧೂಪದ ಹೊಗೆ ಬರಿಸುವ ವಿಧಾನ. 'ಅಗ್ನಿಷ್ಟಿಕೆ' ಎಂಬ ಹೆಸರಿನ ಈ ವಿಧಾನದ ಹಿಂದೆ ಆಯುರ್ವೇದ ಸೂತ್ರಗಳಿವೆ. ಲಕ್ಕಿಗಿಡದ ಎಲೆಯ ಧೂಪನ ಬಹಳ ಪ್ರಖರ. ಮಳೆಗಾಲದ ಏಕಾಣು, ವೈರಾಣು ಜನಿತ ಕಾಯಿಲೆಗಳೆನಿಸಿದ ಮಲೇರಿಯಾ, ಡೆಂಗ್ಯೂ, ಚಿಕೂನ್‌ಗುನ್ಯಾ ಬರಲು ಕಾರಣ ಸೊಳ್ಳೆ ಕಡಿತ. ಅದರ ತಡೆ ಮತ್ತು ನಿವಾರಣೆಗೆ ಸೊಳ್ಳೆಗಳ ನಿರ್ಮೂಲನೆ ಅತ್ಯಗತ್ಯ. ಲಕ್ಕಿಸೊಪ್ಪು, ಮಡ್ಡಿ ಸಾಂಬ್ರಾಣಿ, ಸಾಸಿವೆ, ಬಜೆ ಬೇರು, ಬೆಳ್ಳುಳ್ಳಿ ಸಿಪ್ಪೆ, ತುಳಸಿ ಎಲೆಯ ಘಾಟು ಹೊಗೆ ಮನೆಯಲ್ಲಿ ಹಾಯಿಸಿರಿ. ಕಡು ಮಳೆಗಾಲದ ದಿನಗಳಿಗೆ ಮನೆಯ ಒಳಗಿನ ತೇವಾಂಶ ಕಳೆಯಲಿದು ಸುಲಭ ಉಪಾಯ. ಕಾಳುಮೆಣಸು, ವೀಳ್ಯದೆಲೆ, ಅರಶಿನಪುಡಿ, ಅರಶಿನಗಿಡದ ಎಲೆ, ದಾಲ್ಚೀನಿ ಎಲೆ, ಏಲಕ್ಕಿಸಿಪ್ಪೆ, ಹರಳುಗಿಡದ ಎಲೆ, ಒಣಬೇರು, ತುಪ್ಪದಂತಹ ಸುವಸ್ತುಗಳು ಎಲ್ಲರ ಕೈಗೆಟಕುತ್ತವೆ. ನಗರವಾಸಿಗಳೂ ಅಪಾರ್ಟ್‌ಮೆಂಟ್ ನಿವಾಸಿಗಳೂ ಈ ಉಪಾಯ ಸುಲಭವಾಗಿ ಕೈಗೊಳ್ಳಲಾದೀತು. ಹೆಂಚಿನ ತುಂಡಿನಲ್ಲಿ ಕೆಂಡ ಹಾಕಿಕೊಳ್ಳಿರಿ. ಇಂತಹ ವಸ್ತುಗಳ ಪುಡಿ ಉದುರಿಸಿ. ಹೊಗೆ ಬರಿಸಿ ವಾತಾವರಣ ಮತ್ತು ವಾಸದ ಕೋಣೆಯ ತೇವಾಂಶ ನೀಗಿರಿ. ನಿಗಿ ನಿಗಿ ಕೆಂಡದ ಉದುರಿಸಬಹುದಾದ ವಸ್ತುಗಳ ಪಟ್ಟಿ ಓದಿದಿರಲ್ಲ. 'ವನಸ್ಪತಿ ರಸೋತ್ಪನ್ನೋ ಧೂಪೋಯಂ ಪ್ರತಿಗೃಹ್ಯತಾಂ' ಎಂಬ ಮಂತ್ರ ಹೇಳಿ ಪೂಜೆಯ ವೇಳೆ ಧೂಪ ಹಾಕುವೆವು. ಅದರ ಹಿಂದಿನ ಆರೋಗ್ಯಕಾಳಜಿಯನ್ನು ಮರೆತೆವು.

ನೀವಿನ್ನೂ ಮಾಸ್ಕ್ ಬಿಟ್ಟಿಲ್ವಾ!

ಡಾ. ಕೆ. ಎಸ್. ಪವಿತ್ರ

'ಅರೆರೆ! ಕೋವಿಡ್ ಮುಗಿದಿದೆ. ಕೋವಿಡ್ ಮುಗಿಯುವುದಕ್ಕೂ ಮೊದಲೇ ನಾವು ಮಾಸ್ಕ್ ಎಸೆದಾಯಿತು, ಇವರ್‍ಯಾಕೆ ನೀವು ಮಾಸ್ಕ್ ಹಾಕೋದು ಬಿಟ್ಟಿಲ್ವಲ್ಲಾ? – ಅಂತಿದ್ದಾರೆ ಎಂದು ಆಶ್ಚರ್ಯ ಆಗುತ್ತಿದೆಯೇ? ನಾನು ಕೇಳುತ್ತಿರುವ 'ಮಾಸ್ಕ್' ಬಾಯಿಗೆ ವೈರಸ್ ಬರದಿರುವಂತೆ ತೊಡಿಸುವುದಲ್ಲ; ವ್ಯಕ್ತಿತ್ವಕ್ಕೆ ನಾವೆಲ್ಲರೂ ಆಗಾಗ ಹಾಕುವ ಮಾಸ್ಕ್ ಬಗ್ಗೆ! ಏನಿದು ವ್ಯಕ್ತಿತ್ವಕ್ಕೆ ಹಾಕುವ ಮಾಸ್ಕ್? ನಮಗೆಲ್ಲರಿಗೂ ಮುಖವಾಡಗಳಿವೆ! ಕಪಾಟು ತುಂಬಾ ಮುಖವಾಡಗಳು. ಪ್ರತಿ ಸನ್ನಿವೇಶಕ್ಕೆ, ಪ್ರತಿ ಒತ್ತಡಕ್ಕೆ, ಆಯಾ ಸಂದರ್ಭಕ್ಕೆ ಯಾವ ಮುಖವಾಡ ಧರಿಸಲಿ ಎಂಬ ಚಿಂತೆ! ಮಾಸ್ಕ್ ಉಸಿರುಗಟ್ಟಿಸುವಂತೆ ಈ ಮುಖವಾಡಗಳೂ ಉಸಿರುಗಟ್ಟಿಸಲು ಸಾಧ್ಯವಿದೆ.

ನಮ್ಮ ಭಾವನೆಗಳಿಗೆ ವಿವಿಧ ಮುಖವಾಡಗಳನ್ನು ಹಾಕುವುದು ನಮಗೆ ಹೊಸತೇನೂ ಅಲ್ಲ. ನಮಗೆ ಯಾವ ವಿಷಯಕ್ಕೋ ಕೋಪ ಬಂದಿರುತ್ತದೆ. ಆದರೆ ನಗುತ್ತಾ ಅತಿಥಿಗಳನ್ನು ಸ್ವಾಗತಿಸುತ್ತೇವೆ. ಒಳಗೊಳಗೇ ದ್ವೇಷಿಸುತ್ತಲೇ, ಹೊರಗೆ ಗೌರವ ತೋರುತ್ತಾ ತಮಾಷೆ ಮಾಡುತ್ತೇವೆ. ಕೆಲವು ಉದ್ದೇಶಪೂರ್ವಕವಾಗಿ ನಾವು ಹಾಕಿಕೊಳ್ಳುವ ಮುಖವಾಡಗಳಾದರೆ, ಇನ್ನು ಕೆಲವು ನಮಗೆ ಗೊತ್ತಿರದೇ ನಾವು ಧರಿಸುವ 'ಮಾಸ್ಕ್'ಗಳು. ಕೋವಿಡ್ ಬರದಿರಲೆಂದು ಮಾಸ್ಕ್ ಧರಿಸುವುದನ್ನು ರೂಢಿ ಮಾಡಿಕೊಂಡೆವಷ್ಟೆ. ಹಾಗೆಯೇ ಕೋವಿಡ್ ಮುಗಿದ ತಕ್ಷಣ ಮಾಸ್ಕ್ ಕಿತ್ತು ಹಾಕುವುದೂ ನಮಗೆ ಸುಲಭವೇ. ಆದರೆ ವ್ಯಕ್ತಿತ್ವಗಳಿಗೆ, ಭಾವನೆಗಳಿಗೆ ನಾವು ತೊಡಿಸುವ ಮುಖವಾಡಗಳದ್ದು ಇಷ್ಟು ಸುಲಭದ ಕಥೆಯಲ್ಲ! ಮನೋವೈಜ್ಞಾನಿಕವಾಗಿ ನಮ್ಮ ಸಹಜ ಹಾವಭಾವಗಳು, ಚಹರೆ, ಮಾತು, ಭಾವನೆಗಳನ್ನು ಸಂದರ್ಭಕ್ಕೆ ತಕ್ಕಂತೆ ಮರೆಮಾಡುವುದನ್ನು, ಬೇರೆಯೇ ಆಗಿಸುವುದನ್ನು 'ಮಾಸ್ಕಿಂಗ್' ಎಂದೇ ಗುರುತಿಸಲಾಗುತ್ತದೆ.

ಸಾಮಾನ್ಯವಾಗಿ ನಾವೆಲ್ಲರೂ ಇಂಥ ಮುಖವಾಡಗಳನ್ನು ಧರಿಸಿಯೇ ಧರಿಸುತ್ತೇವೆ. ಇದ್ದಕ್ಕಿದ್ದಂತೆ ಕೆಲವೊಮ್ಮೆ ಇಂಥ ಮುಖವಾಡ ಧರಿಸಿ ಪಕ್ಕದಲ್ಲಿದ್ದವರನ್ನು 'ಆ!' ಎನ್ನುವಂತೆ ಮಾಡಿಬಿಡುತ್ತೇವೆ. ಆದರೆ ಮುಖವಾಡ ಹಾಕುವುದು ಏಕೆ? ಮಾಸ್ಕನ್ನು ಬಾಯಿ-ಮೂಗುಗಳನ್ನು ಮುಚ್ಚುವಂತೆ ಧರಿಸುವಾಗ ನಮ್ಮ ಉದ್ದೇಶ ಏನು? ವೈರಸ್ / ಧೂಳು ನಮಗೆ ತಗುಲಬಾರದು ಎಂಬುದು ಒಂದು ಕಾರಣವಾದರೆ, ನಮ್ಮ ಬಾಯಿಂದ ಬೇರೆಯವರಿಗೆ ರೋಗ ಹರಡಬಾರದು ಎಂಬುದು ಇನ್ನೊಂದು. ನಾಟಕದ ಮುಖವಾಡಗಳದ್ದು ಮತ್ತೊಂದು ಉದ್ದೇಶ. ವ್ಯಕ್ತಿಯ ನಿಜಚಹರೆಯನ್ನು ಮರೆಮಾಚಿ ನಾಟಕದ ಪಾತ್ರದ ವೇಷವನ್ನು ಸಾಧ್ಯ ಮಾಡುವುದು. ಸ್ವಾರಸ್ಯಕರ ಸಂಗತಿಯೆಂದರೆ ನಿಜಜೀವನದ ಮತ್ತು ನಾಟಕದ ಎರಡೂ ಉದ್ದೇಶಗಳನ್ನು ಏಕಕಾಲಕ್ಕೆ ಮನೋವೈಜ್ಞಾನಿಕವಾಗಿ 'ಮಾಸ್ಕಿಂಗ್' ಸಾಧ್ಯವಾಗಿಸಿಬಿಡುತ್ತದೆ.

ನೀವೇ ಸ್ವಲ್ಪ ಯೋಚಿಸಿ ನೋಡಿ. ಹಿಂದಿನ ಬಾರಿ ನೀವು ಮುಖವಾಡ ಹಾಕಿದ್ದು ಯಾವಾಗ? 'ಪಾರ್ಟಿಫೇಸ್' ಎಂಬ ಮಾಸ್ಕ್ ಪಾರ್ಟಿಗೆ ಹೋಗುವಾಗ ಹಾಕಿದ್ದಿರಿ ತಾನೇ? 'ಪಾರ್ಟಿಫೇಸ್' ಮಾಸ್ಕನ್ನು ನಾವು ಒಳಗೆ ಎಷ್ಟೋ ಕಷ್ಟಪಡುತ್ತಿದ್ದರೂ ಹೊರಗೆ 'ನಾವು ಸಂತೃಪ್ತರು' ಎಂಬುದನ್ನು ತೋರಿಸಲು ಉಪಯೋಗಿಸುತ್ತೇವೆ. ಇದರಿಂದ ನಾವು ಸಾಧಿಸಲು ಇಷ್ಟಪಡುವುದೇನು? ಬೇರೆಯವರ ಟೀಕೆ-ಕುಹಕಗಳಿಗೆ ನಾವು ಗುರಿಯಾಗಬಾರದು; ಒಳಗಿರುವ ಕಷ್ಟ-ಸಂಕಟಗಳು ಇತರರಿಗೆ ಕಾಣಬಾರದು. ಕೆಲವೊಮ್ಮೆ ಇತರರಿಗೆ ನೋವುಂಟುಮಾಡಬಾರದು ಎಂಬ ಉದ್ದೇಶವೂ ಇರಬಹುದು. ಅಥವಾ ಆತ್ಮವಿಶ್ವಾಸದ ಕೊರತೆಯಿರುವ ವ್ಯಕ್ತಿ, ಈ ಕೊರತೆಯನ್ನು ಮುಚ್ಚಿಕೊಳ್ಳಲು ಬಹುದರ್ಪದ ವ್ಯಕ್ತಿಯಂತೆ, ಎಲ್ಲರನ್ನೂ ನಿಯಂತ್ರಿಸುವವನಂತೆ ನಡೆದುಕೊಳ್ಳಬಹುದು.

ಮಕ್ಕಳೂ 'ಮಾಸ್ಕ್' ಧರಿಸುತ್ತಾರೆ! ಮಕ್ಕಳನ್ನು ಸುಲಭವಾಗಿ ತಿಳಿಯಬಲ್ಲ ಅಮ್ಮನಿಗೆ ಮಕ್ಕಳು ಇಂಥ 'ಮುಖವಾಡ' ಹಾಕಿಕೊಂಡರೆ ಅದರ ಹಿಂದೆ 'ಇಂಥದ್ದೇ' ಸಮಸ್ಯೆ ಎಂದೂ ಕಂಡುಹಿಡಿಯಲಾದೀತು. ಅಂದರೆ ಮಗು 'ನನಗೆ ಯಾಕೋ ತುಂಬಾ ಸುಸ್ತು' ಎಂದರೆ 'ಇವತ್ತು ಶಾಲೆಯಲ್ಲಿ ಏನೋ ಆಗಿದೆ/ ಆಟದ ಗುಂಪಿನಲ್ಲಿ ಮಗುವಿಗೆ ಬೇಸರವಾಗುವಂಥದ್ದು ಏನೋ ನಡೆದಿದೆ' ಎಂಬ ತೀರ್ಮಾನಕ್ಕೆ ಬರುವಂತೆ ಮುಖವಾಡ ಮಕ್ಕಳ ಮನಸ್ಸನ್ನು ಅರಿಯುವ ಸಾಧನವೂ ಆಗಬಹುದು.

ನಾವು 'ಮುಖವಾಡ' ಹಾಕಿಕೊಳ್ಳುವುದು ಹೇಗೆ ನಮಗೆ ಆ ಕ್ಷಣದ ಒತ್ತಡದಿಂದ ರಕ್ಷಣೆ ನೀಡಬಹುದೋ, ಹಾಗೆಯೇ ಇತರರ ಮುಖವಾಡವೂ! ಒಂದೊಮ್ಮೆ ಆತ್ಮೀಯರು ಮುಖವಾಡ ಧರಿಸಿದಂತೆ ನಡೆದುಕೊಳ್ಳುತ್ತಿದ್ದಾರೆ; ಆದರೆ ನಿಮಗೆ ಮುಖವಾಡದ ಹಿಂದೆ ಏನಿದೆ ಎಂಬುದು ಗೊತ್ತು ಎಂದುಕೊಳ್ಳಿ. ಆಗ ನೀವು ಏನು ಮಾಡಬೇಕು ಎಂದು ಯೋಚಿಸಿ ನಿರ್ಧಾರ ಕೈಗೊಳ್ಳಬೇಕಾಗುತ್ತದೆ. ಅಂದರೆ ಒಂದೊಮ್ಮೆ ಕೌಟುಂಬಿಕ ಹಿಂಸೆ/ ಮೋಸದಂತಹ ಸನ್ನಿವೇಶಗಳಲ್ಲಿ ಇಂತಹ 'ಮಾಸ್ಕ್' ಅಪಾಯಕಾರಿ. ಆಗ ಅದನ್ನು ನಾವು ಮುಖಗವಸು ಧರಿಸಿದ ಕಳ್ಳನನ್ನು ಎದುರಿಸಬೇಕಾದ ರೀತಿ ಕಲ್ಪಿಸಿಕೊಳ್ಳಬೇಕು. ಅಪಾಯ ಗ್ರಹಿಸಿ ಪಾರಾಗುವತ್ತ ಯೋಚನೆಗೆ ತೊಡಗಬೇಕು. ಮತ್ತೊಂದೆಡೆ, ವ್ಯಕ್ತಿಗೆ ಅಪಾರವಾದ ನೋವಿದೆ, ನೋವನ್ನು ಮರೆಮಾಚಲು, ಸಂತೋಷದ ಮೇಲ್ಪದರ ಧರಿಸಿದ್ದಾನೆ. ನಿಮಗೆ 'ನೋವು' ಏನೆಂಬುದು ಅಕಸ್ಮಾತ್ ಅರಿವಿದ್ದರೂ, ಆತನ ಮುಖವಾಡವನ್ನು ಗೌರವಿಸಬೇಕು. ಕೆದಕಿ, ಕೆದಕಿ ಹೇಗಾದರೂ ಮಾಡಿ ಮುಖವಾಡವನ್ನು ಎಳೆಯಲು ತೊಡಗಬಾರದು. ನೀವು ಅವರ ಹಿತೈಷಿಗಳೇ ಹೌದಾದರೆ, ನಿಧಾನವಾಗಿ ಅವರೊಬ್ಬರ ಬಳಿ ಸದುದ್ದೇಶವನ್ನು ಸ್ಪಷ್ಟಪಡಿಸಿ ಮುಖವಾಡ ತೆಗೆದು, ಮನಸ್ಸಿನ ನಿಜ ಭಾವನೆಗಳನ್ನು ಹಂಚಿಕೊಳ್ಳಲು ಅವರಿಗೆ ಪ್ರೇರಣೆ ನೀಡಬೇಕು.

ಸಂಬಂಧಗಳಲ್ಲಿ ನಿಕಟತೆ, ನೇರ ನಡವಳಿಕೆ ಇದ್ದಷ್ಟೂ ಮುಖವಾಡದ ಅಗತ್ಯ ಬೀಳದು. ಸಂಬಂಧಗಳಲ್ಲಿ ಮನೆಯ ಪರಿಸರದಲ್ಲಿಯೂ ಮತ್ತೆ ಮತ್ತೆ 'ಮಾಸ್ಕ್' ಧರಿಸಬೇಕಾಗಿ ಬಂದರೆ, ಎಲ್ಲೋ ಏನೋ ಸರಿಯಿಲ್ಲ ಎಂದೇ! 'ಮುಖವಾಡಗಳು' -'ಮಾಸ್ಕ್' ಎಂಬ ಶೆಲ್ ಸಿಲ್ವರ್‌ಸ್ಟೀನ್ ಬರೆದ ಇಂಗ್ಲಿಷ್ ಕವಿತೆಯ ಸಾಲುಗಳ ಭಾವ ಹೀಗಿದೆ:

ಅವಳಿಗಿದ್ದದ್ದು ನೀಲಿಚರ್ಮ
ಅವನಿಗೂ ಇದ್ದದ್ದು ಅದೇ!
ಅವನು ಅದನ್ನು ಮುಚ್ಚಿಟ್ಟಿದ್ದ
ಅವಳೂ ಮಾಡಿದ್ದು ಅದೇ!
ಹುಡುಕಿದರು ಹುಡುಕಿದರು
ನೀಲಿಗಾಗಿ
ಇಡೀ ಜೀವನಪೂರ್ತಿ
ಇಬ್ಬರೂ ಅಕ್ಕಪಕ್ಕ ಸರಿದು ಹೋದರೂ
ಗೊತ್ತಾಗಲೇ ಇಲ್ಲ ಕೊನೆಗೂ!

ಕೋವಿಡ್‌ನ ಮಾಸ್ಕ್ ತೆಗೆದಂತೆ, ಮನಸ್ಸಿನ ಮುಖವಾಡಗಳನ್ನೂ ತೆಗೆದು ಹಾಕೋಣ. ನಮಗಾಗಿ ಬದುಕುವುದನ್ನು, ಪ್ರಾಮಾಣಿಕವಾಗಿ ಭಾವನೆಗಳನ್ನು ವ್ಯಕ್ತಪಡಿಸುವುದನ್ನು ಕಲಿಯೋಣ! ❖



ಭಯ ಬಿಸಾಕು

ಭಯವನ್ನು ಭಯದಿಂದ ಗೆಲ್ಲಲಾಗದು. ಧೈರ್ಯದಿಂದ ಗೆಲ್ಲಬೇಕು. ಅನಿಶ್ಚಯ ಸಂದರ್ಭವನ್ನು ಒಪ್ಪಿಕೊಳ್ಳದಿರುವುದೇ ಭಯ.

ರಘು ವಿ.

ಭಯ! ಎಲ್ಲ ಜೀವಿಗಳನ್ನೂ ಹುಟ್ಟಿನಿಂದ ಸಾವಿನವರೆಗೆ ಕಾಡುವ ಭಾವಸ್ಥಿತಿ ಭಯ. ಹುಟ್ಟಿಗೆ ಸಾವಿನ ಭಯ. ಸಾವಿಗೆ ಹುಟ್ಟಿನ ಭಯ. ಉಪನಿಷತ್ತು ಕೂಡ ಭಯವಿಲ್ಲದ ಜಾಗವನ್ನು 'ಸ್ವರ್ಗ' ಎನ್ನುತ್ತದೆ: 'ಸ್ವರ್ಗೇಲೋಕೇ ನ ಭಯಂ ಕಿಂಚನಾಸ್ತಿ, ನ ತತ್ರ ತ್ವಂ ನ ಜರಯಾ ಬಿಭೇತಿ, ಉಭೇ ತ್ರೀತ್ವಾ ಅಶನಾಯಾಪಿಪಾಸೇ, ಶೋಕಾತಿಗೋ ಮೋದತೇ ಸ್ವರ್ಗಲೋಕೇ' (ಕಠೋಪನಿಷತ್ತು). ಅಂದರೆ, 'ಸ್ವರ್ಗದಲ್ಲಿ ಭಯವಿಲ್ಲ, ಅಲ್ಲಿ ನೀನಿಲ್ಲ (ನೀನು = ಯಮ), ಮುಪ್ಪಿನ ಭೀತಿಯಿಲ್ಲ, ಸ್ವರ್ಗಲೋಕದಲ್ಲಿ ಹಸಿವುಬಾಯಾರಿಕೆಯಾದಿಗಳು ಇಲ್ಲ, ಶೋಕ ಇಲ್ಲ. ಇದುವೇ ಸ್ವರ್ಗ.' ಭಯದ ವಿವಿಧ ರೂಪಗಳನ್ನು ಈ ಒಂದೇ ಶ್ಲೋಕ ಹೇಳಿಬಿಟ್ಟಿದೆ. ಸ್ವರ್ಗದ ಕಲ್ಪನೆ ನಿಂತಿರುವುದೇ ನರಕದ ಭಯದ ಮೇಲೆ. ಮತ್ತೂ ಮುಂದುವರೆದು ಹೇಳಬೇಕೆಂದರೆ ಸಾಂಸ್ಥಿಕ ಧರ್ಮಗಳು ನಿಂತಿರುವುದೇ ಜನಸಾಮಾನ್ಯರಲ್ಲಿ ಅದು ಬಿತ್ತುವ ಭಯದ ನೆಲೆಯ ಮೇಲೆ. ಎಲ್ಲ ಓಡುವಿಕೆಯ ಹಿಂದೆ ಭಯವಿದೆ. ಹಿಂದುಳಿಯುವ ಭಯ, ಮುಂದುವರೆಯುವ ಭಯ, ಇದ್ದಲ್ಲೇ ಇರುವ ಭಯ! ವಿದ್ಯಾರ್ಥಿಗಳಿಗೆ ಪರೀಕ್ಷೆಯ ಭಯ, ಪರೀಕ್ಷೆಗೆ ಫಲಿತಾಂಶದ ಭಯ, ಫಲಿತಾಂಶಕ್ಕೆ ಭವಿಷ್ಯದ ಭಯ. ಆಗ ಹುಟ್ಟಿದ ಮಗು ಕೂಡ ಅಳುತ್ತದೆ. ಹೊಸ ಲೋಕದ, ಅಸ್ತಿತ್ವದ ಭಯ. ಇಡೀ ಬದುಕು ಭಯದ ನೂರು ತೆರೆ.

ಭಯವು ಸಾಮಾನ್ಯ ಸಾರ್ವತ್ರಿಕ ಎಂದರೂ ಮನುಷ್ಯನ ಮೂಲಸ್ವರೂಪ ಆನಂದವಾದ್ದರಿಂದ ಅವನು ಭಯದ ಆವರಣಗಳನ್ನು ದಾಟಿ ಆನಂದದ ನೆಲೆಯನ್ನು ತಲುಪಬೇಕು, ತಲುಪುತ್ತಾನೆ. ಸಾಮಾನ್ಯ ಭಯಗಳು ನಮ್ಮ ಗುರಿಗೆ ಪ್ರಚೋದಕಗಳೂ ಆಗಬಹುದು. ಪರೀಕ್ಷೆಯಲ್ಲಿ ಅನುತ್ತೀರ್ಣನಾಗುವ ಭಯದಿಂದಲೇ ವಿದ್ಯಾರ್ಥಿಯು ವಿಷಯದ ಅಧ್ಯಯನ ಮಾಡುವುದು. ಜೀವನವನ್ನು ಕಟ್ಟಿಕೊಳ್ಳುವ ಈ ಪ್ರಯತ್ನಗಳಲ್ಲಿನ ಭಯದ ಸ್ವರೂಪ ಬೇರೆ. ತನ್ನೊಳಗೇ ಹುಟ್ಟಿಕೊಳ್ಳುವ ಭಯ ಬೇರೆ. ಈ ಜಗತ್ತಿನ ಇತರ ವ್ಯಕ್ತಿ ಮತ್ತು ಸಮಾಜದ ಸಂಸರ್ಗದ ಸಮಯದಲ್ಲಿ ಹುಟ್ಟಿಕೊಳ್ಳುವ ಭಯ ಬೇರೆ. ಇವೆಲ್ಲವನ್ನು ಮೆಟ್ಟಿ ನಿಂತಾಗಲೇ ವ್ಯಕ್ತಿಗೆ ಆನಂದದ ನಿಜಸ್ವರೂಪದ ದರ್ಶನವಾಗುವುದು. ಭಯದ ನೂಲೆಳೆಯಿದ್ದರೂ ಆತಂಕದ ಕಾರಣದಿಂದ ಆನಂದದಿಂದ ವಂಚಿತರಾಗುತ್ತೇವೆ. ಕಗ್ಗ, 'ಕಳವಳವ ನೀಗಿಬಿಡು, ತಳಮಳವ ದೂರವಿಡು' ಎಂದು ಹೇಳಿ, '...ತಳ್ಳು ಗಲಭೆ ಗಾಬರಿಯ ಮನದಿಂದ, ಅಲೆದಾಡುತಿರೆ ದೀಪ ಕಣ್ಣೆ ಗುರಿ ತಪ್ಪುವುದು' ಎಂದು ಪದ್ಯವನ್ನು ಮುಕ್ತಾಯಗೊಳಿಸುತ್ತದೆ. ಅಂದರೆ ಭಯದ ಕಾರಣದಿಂದ ಮನಸ್ಸು ವಿಚಲಿತವಾಗಿದ್ದರೆ ಅಲ್ಲಿ ಶಾಂತಿ ಇಲ್ಲ, ಆ ಕಾರಣದಿಂದ ಅಲ್ಲಿ ಆನಂದವೂ ಇಲ್ಲ! ಆಧುನಿಕ ಯುಗದಲ್ಲಂತೂ ಎಲ್ಲದಕ್ಕೂ ಆತಂಕ. ಯಾರಾದರೂ ನಮ್ಮತನವನ್ನು ಕದಿಯುತ್ತಾರೋ, ನಮ್ಮ ಪಾಸ್ ವರ್ಡ್, ಪಿನ್ ನಂಬರ್ ಕದಿಯುತ್ತಾರೋ ಎಂಬ ಭಯ! ಲೋಕಜಾಲವನ್ನು ಮತ್ತು ಪುರಾಣದ ಮಾಯಾಲೋಕವನ್ನೂ ಮೀರಿಸುವ ಅಂತರ್ಜಾಲವೆಂಬ ಲೋಕದ ಅಮೂರ್ತ ದಾಳಿಕೋರರ ಭಯ. ಬಳಸದಿರುವಂತಿಲ್ಲ, ಬಳಸಿದರೆ ಅಸ್ತಿತ್ತ್ವವನ್ನು ಕಾಪಾಡಿಕೊಳ್ಳುವ ಭಯ.

ಭಯವನ್ನು ಭಯದಿಂದ ಗೆಲ್ಲಲಾಗದು. ಧೈರ್ಯದಿಂದ ಗೆಲ್ಲಬೇಕು. ಅಂದರೆ? ರೂಮಿ ಹೇಳುತ್ತಾನೆ: 'ಅನಿಶ್ಚಯ ಸಂದರ್ಭವನ್ನು ಒಪ್ಪಿಕೊಳ್ಳದಿರುವುದೇ ಭಯ. ಅದನ್ನು ಒಮ್ಮೆ ಒಪ್ಪಿಕೊಂಡುಬಿಟ್ಟರೆ ಬದುಕೊಂದು ಸಾಹಸ!' ಭಯದ ನಿರಾಕರಣೆ ಮಾಡದೆ ಆ ಭಾವದ ಉದಾತ್ತೀಕರಣ ಮಾಡುವತ್ತ ಗಮನಹರಿಸು ಎನ್ನುತ್ತದೆ ಗೀತೆ. 'ಎಲ್ಲ ಭಯಗಳನ್ನು ಬದಿಗೆ ಸರಿಸಿ ನಿನಗೆ ವಿಧಿಸಿದ ಕಾರ್ಯದಲ್ಲಿ ತೊಡಗು, ಅದರಲ್ಲಿ ಪೂರ್ಣ ಮನವಿಡು' ಎನ್ನುತ್ತಾನೆ ಶ್ರೀಕೃಷ್ಣ. ಅಧ್ಯಯನ ಮಾಡುವಾಗ ಪರೀಕ್ಷೆಯ ಚಿಂತೆಯನ್ನೂ, ಪರೀಕ್ಷೆ ಬರೆವಾಗ ಫಲಿತಾಂಶದ ಭಯವನ್ನು ಹೊಂದಿರಬಾರದು. ಬದುಕುವಾಗ ಸಾವಿನ ಭಯ ಇರಬಾರದು. ಸಾವು ಬಂದಾಗ ಅದನ್ನು ಸ್ವೀಕರಿಸುವ ಧೈರ್ಯವೂ ಇರಬೇಕು. ಆರೋಗ್ಯದಲ್ಲಿ ಇರುವಾಗ ಅನಾರೋಗ್ಯದ ಚಿಂತೆ ಕಾಡಬಾರದು. ಹಾಗೆಯೇ ಅನಾರೋಗ್ಯ ಬಂದಾಗ ಎದೆಗುಂದಬಾರದು. ಮೊನ್ನೆ ಕೊರೊನಾ ಸಂದರ್ಭದಲ್ಲಿ ಕೋವಿಡನ್ನು ಗೆದ್ದುಬಂದವರೂ ಇದ್ದಾರೆ. ಹಾಗೆಯೇ ಸೋಂಕು ತಗುಲಿದೆ ಎಂಬುದನ್ನು ಕೇಳಿ ಕುಸಿದುಬಿದ್ದವರೂ ಇದ್ದಾರೆ. ಧೈರ್ಯದಿಂದ ಮಾತ್ರ ಭಯವನ್ನು ಗೆಲ್ಲಬಹುದು. 'ಜೀವನದ ಪ್ರತಿ ಕ್ಷಣದಲ್ಲೂ ಭಯದಿಂದ ಕೊರಗುತ್ತ ಹೇಡಿಯಂತೆ ಬಾಳುವೆಯೇಕೆ? ಓ.. ನನ್ನ ಸೋದರ, ಸಾವು ಅನಿವಾರ್ಯ, ನಿರ್ಜೀವ ವಸ್ತುಗಳಂತೆ, ಕಲ್ಲಿನಂತೆ ಜೀವಿಸುವುದಕ್ಕಿಂತ ಆದರ್ಶ ನಾಯಕನಂತೆ ಧೀರತೆಯಿಂದ ಸಾಯುವುದು ಒಳಿತಲ್ಲವೆ? ಈ ನಶ್ವರ ಜಗತ್ತಿನಲ್ಲಿ ಒಂದೆರಡು ದಿನ ಹೆಚ್ಚಿಗೆ ಇರುವುದರಿಂದೇನು ಪ್ರಯೋಜನ? ತುಕ್ಕು ಹಿಡಿದು ಸಾಯುವುದಕ್ಕಿಂತ, ಇತರರ ಒಳಿತಿಗಾಗಿ ಸೇವೆ ಸಲ್ಲಿಸುತ್ತ ಸವೆಯುವುದು ಒಳಿತು' ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಮುಂದುವರೆದು, ಮತ್ತೊಂದೆಡೆಯಲ್ಲಿ 'ವೈಶಾಲ್ಯವೇ ಜೀವನ, ಸಂಕುಚಿತತೆಯೇ ಮರಣ' – ಎನ್ನುತ್ತಾರೆ ಅವರು.

ಕೊನೆಯದಾಗಿ, ಭೂತ ಭವಿಷ್ಯತ್ತುಗಳನ್ನು ಬಿಟ್ಟು ಆ ಕ್ಷಣದಲ್ಲಿ ಬದುಕುವುದೇ ಭಯಕ್ಕೆ ಪರಿಹಾರ ಎಂಬುದಕ್ಕೆ ರಮಣರ ಜೀವನದ ಈ ಘಟನೆ ಸಾಕ್ಷಿ. ಒಮ್ಮೆ ಅವರು ತಮ್ಮ ಭಕ್ತರೊಂದಿಗೆ ಮಾತನಾಡುತ್ತ ಕುಳಿತಿದ್ದರು. ಇದ್ದಕಿದ್ದಂತೆ ಹಾವೊಂದು ಅವರ ಪಾದಗಳ ಮೇಲೆ ಹರಿದುಹೋಯಿತು. ಇದು ಕ್ಷಣಮಾತ್ರದಲ್ಲಿ ನಡೆದುದ್ದರಿಂದ ಭಕ್ತರಿಗೆ ಗಾಬರಿಯಾದರೂ ಏನೂ ತೋಚಲಿಲ್ಲ. ಹಾವು ಹೋದಮೇಲೆ ಒಬ್ಬರು ಕೇಳಿದರು, 'ಸ್ವಾಮಿ, ಏನನ್ನಿಸಿತು?' ರಮಣರು ಯಾವುದೇ ಭಾವವನ್ನು ತೋರದೆ, 'ತಣ್ಣಗಿತ್ತು, ನುಣುಪಾಗಿತ್ತು' ಎಂದರು. ಅದು ಹಾವು, ವಿಷಜಂತು, ಕಚ್ಚಬಲ್ಲದು, ಸಾಯಿಸಬಲ್ಲದು ಇವೆಲ್ಲ ಅಲ್ಲಿ ಬರಲೇ ಇಲ್ಲ. ಆ ಕ್ಷಣದ ಅನುಭವಕ್ಕೆ ಮಾತ್ರ ಅವರ ಮನಸ್ಸು ತೆರೆದಿತ್ತು. ಹಾಗಾಗಿ ಅಲ್ಲಿ ಭಯ ಆತಂಕ ಉದ್ಭವಿಸಲಿಲ್ಲ. ನಾವು ಕೂಡ ಬದುಕಿನ ಸಲ್ಲಾಪದಲ್ಲಿ ತೊಡಗಿದ್ದೇವೆ. ಹಾವುಗಳು ಹರಿಯಲಿ ಬಿಡಿ; ಭಯ ಬಿಸಾಕಿ, ಆನಂದದಿಂದ ಬದುಕಿ! ❖

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ರಾಷ್ಟ್ರಮಂದಿರ ಹೇಳಿಕೆ ಮುಖ್ಯಮಂತ್ರಿಯಿಂದ ಸಲ್ಲದ ಮಾತು

ಭಾರತಕ್ಕೆ ಒಂದು ರಾಷ್ಟ್ರಧ್ವಜ ಇದೆ. ಹಾಗೆಯೇ, ರಾಷ್ಟ್ರಲಾಂಛನ ಇದೆ. ರಾಷ್ಟ್ರವನ್ನು ಹೆಮ್ಮೆಯಿಂದ ಪ್ರತಿನಿಧಿಸುವ ರಾಷ್ಟ್ರಪಕ್ಷಿ, ರಾಷ್ಟ್ರಪ್ರಾಣಿ ಕೂಡ ನಮಗೆ ಇವೆ. ಈಗ ಈ ಪಟ್ಟಿಗೆ ಇನ್ನೊಂದನ್ನು ಸೇರಿಸಬೇಕು ಎಂಬ ಆಗ್ರಹ ಬಂದಿದೆ. ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಅಯೋಧ್ಯೆಯ ರಾಮ ಮಂದಿರವು ರಾಷ್ಟ್ರಮಂದಿರವಾಗಲಿದೆ ಎಂದು ಈಚೆಗೆ ಘೋಷಿಸಿದರು. ರಾಮ ಮಂದಿರದ ಗರ್ಭಗುಡಿಯ ಅಡಿಗಲ್ಲು ಹಾಕುವ ಸಂದರ್ಭದಲ್ಲಿ ಅವರು ಈ ಮಾತು ಆಡಿದ್ದಾರೆ. ದೀರ್ಘ ಅವಧಿಗೆ ನಡೆದ ಕಾನೂನು ಸಮರದ ನಂತರದಲ್ಲಿ ಸುಪ್ರೀಂ ಕೋರ್ಟ್ ಈ ಜಮೀನನ್ನು ಹಿಂದೂಗಳಿಗೆ ನೀಡಿದೆ. ಅಲ್ಲಿ ಈಗ ರಾಮ ಮಂದಿರ ನಿರ್ಮಾಣ ಆಗುತ್ತಿದೆ. ಈ ಜಮೀನನ್ನು ಹಿಂದೂಗಳಿಗೆ ಹಸ್ತಾಂತರ ಮಾಡಬೇಕು ಎಂದು ಬಿಜೆಪಿ ಮತ್ತು ಸಂಘ ಪರಿವಾರದ ಇತರ ಸಂಘಟನೆಗಳು ಬಹುಕಾಲದಿಂದ ಒತ್ತಾಯಿಸುತ್ತ ಬಂದಿದ್ದವು. ಸುಪ್ರೀಂ ಕೋರ್ಟ್ ತೀರ್ಪಿನ ನಂತರದಲ್ಲಿ ಈ ಜಮೀನಿಗೆ ಸಂಬಂಧಿಸಿದ ರಾಜಕೀಯ ಹಾಗೂ ಕಾನೂನು ಸಮರ ಪೂರ್ಣಗೊಂಡಂತೆ ಎಂದು ಭಾವಿಸಬೇಕಿತ್ತು. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರದಲ್ಲಿ ಈ ಜಮೀನಿಗಾಗಿ ನಡೆದ ಅಭಿಯಾನವು ಬೇರೆ ಯಾವ ವಿಷಯಗಳಿಗೂ ಸಾಟಿ ಇಲ್ಲದಂತೆ ಸಮಾಜವನ್ನು ಧ್ರುವೀಕರಿಸಿದೆ. ಆದಿತ್ಯನಾಥ ಅವರ ಹೇಳಿಕೆಯು ಈ ಜಮೀನು, ಮಂದಿರಕ್ಕಾಗಿ ನಡೆದ ಅಭಿಯಾನವು ಇನ್ನೂ ಜೀವಂತವಾಗಿದೆ ಎಂಬುದನ್ನು ತೋರಿಸುತ್ತಿದೆ.

ಧರ್ಮನಿರಪೇಕ್ಷ ದೇಶದಲ್ಲಿ ರಾಷ್ಟ್ರಮಂದಿರ ಪರಿಕಲ್ಪನೆಗೆ ಅವಕಾಶ ಇರುವುದಿಲ್ಲ

ಧರ್ಮನಿರಪೇಕ್ಷ ಸರ್ಕಾರವೊಂದರ ಮುಖ್ಯಸ್ಥರು ಪಾಲಿಸಬೇಕಿದ್ದ ನಿಯಮಗಳನ್ನು ಮೀರಿ ಪ್ರಧಾನಿ ನರೇಂದ್ರ ಮೋದಿ ಅವರು 2020ರಲ್ಲಿ ರಾಮ ಮಂದಿರಕ್ಕೆ ಅಡಿಗಲ್ಲು ಹಾಕಿದರು. ಮೋದಿ ಅವರು ಪ್ರಧಾನಿಯಾಗಿ, ದೇವಸ್ಥಾನದ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಹೋಮ ನಡೆಸಿದ್ದರು. ಇದು ಸಾಂವಿಧಾನಿಕ ಮೌಲ್ಯಗಳಿಗೆ ವಿರುದ್ಧವಾಗಿತ್ತು. ಮೋದಿ ಅವರು ಪ್ರಧಾನಿಯಾಗಿ ಸಂವಿಧಾನದ ಮೌಲ್ಯಗಳನ್ನು ಎತ್ತಿಹಿಡಿಯಬೇಕಿತ್ತು. ಈಗ ಆದಿತ್ಯನಾಥ ಅವರೂ ಸಾಂವಿಧಾನಿಕ ಮೌಲ್ಯಗಳಿಗೆ ವಿರುದ್ಧವಾದ ಕೆಲಸ ಮಾಡಿದ್ದಾರೆ. ಯುಕ್ತವಲ್ಲದುದನ್ನು ಅವರು ಮಾತನಾಡಿರುವುದಷ್ಟೇ ಅಲ್ಲ, ದೇವಸ್ಥಾನದ ಬಗ್ಗೆ ಈ ರೀತಿ ಮಾತನಾಡುವ ಮೂಲಕ ತಮ್ಮ ತಿಳಿವಳಿಕೆ ಕೊರತೆಯನ್ನೂ ಅವರು ತೋರಿಸಿದ್ದಾರೆ. ರಾಮ ಮಂದಿರವು ರಾಷ್ಟ್ರದ ಮಂದಿರ ಎಂದು ಹೇಳುವ ಅಧಿಕಾರ ಆದಿತ್ಯನಾಥ ಅವರಿಗೆ ಇಲ್ಲ. ರಾಷ್ಟ್ರವನ್ನು ಪ್ರತಿನಿಧಿಸುವ ಎಲ್ಲ ಲಾಂಛನಗಳನ್ನು ನಿರ್ದಿಷ್ಟ ಪ್ರಕ್ರಿಯೆ ಮೂಲಕ ಅಂತಿಮಗೊಳಿಸಲಾಗಿದೆ. ರಾಷ್ಟ್ರಧ್ವಜ ಹಾಗೂ ರಾಷ್ಟ್ರಗೀತೆ ಯಾವುದಾಗಿರಬೇಕು ಎಂಬುದನ್ನು ಸಂವಿಧಾನ ರಚನಾ ಸಭೆ ತೀರ್ಮಾನಿಸಿದೆ. ಕೆಲವು ಮಾನದಂಡಗಳಿಗೆ ಅನುಗುಣವಾಗಿ ಇರುವುದನ್ನು ಮಾತ್ರ ರಾಷ್ಟ್ರದ ಲಾಂಛನಗಳಾಗಿ ಸ್ವೀಕರಿಸಲಾಗುತ್ತದೆ. ಅವುಗಳನ್ನು ಕೇಂದ್ರ ಸರ್ಕಾರವು ಅಧಿಸೂಚನೆಯಲ್ಲಿ ಪ್ರಕಟಿಸಬೇಕಾಗುತ್ತದೆ. ಇಂತಹ ವಿಚಾರಗಳಲ್ಲಿ ತೀರ್ಮಾನ ಕೈಗೊಳ್ಳಲು ಆದಿತ್ಯನಾಥ ಅವರಿಗೆ ಯಾವುದೇ ಅಧಿಕಾರ ಇಲ್ಲ.

ವಾಸ್ತವದಲ್ಲಿ, ಈ ಸಂಬಂಧ ಯಾರು ತೀರ್ಮಾನ ಕೈಗೊಳ್ಳಬೇಕು ಎಂಬುದು ಚರ್ಚೆಯ ವಿಚಾರವೇ ಅಲ್ಲ. ಧರ್ಮನಿರಪೇಕ್ಷ ದೇಶದಲ್ಲಿ ರಾಷ್ಟ್ರಮಂದಿರ ಇರಲು ಅವಕಾಶವಿಲ್ಲ. ರಾಷ್ಟ್ರಮಂದಿರವನ್ನು ಹೊಂದುವ ಮೂಲಕ ಭಾರತವು ಈಗಾಗಲೇ ಹಿಂದೂ ರಾಷ್ಟ್ರವಾಗಿದೆ ಎಂದು ಹೇಳಲು ಯೋಗಿ ಆದಿತ್ಯನಾಥ ಯತ್ನಿಸುತ್ತಿದ್ದಾರೆಯೇ? ಹಿಂದೂ ರಾಷ್ಟ್ರದಲ್ಲಿಯೂ ಯಾವುದೋ ಒಂದು ಮಂದಿರವನ್ನು ರಾಷ್ಟ್ರಮಂದಿರ ಎಂದು ಹೇಳಲು ಆಗುವುದಿಲ್ಲ. ಅಸಂಖ್ಯ ದೇವರು ಇರುವ ದೇಶದಲ್ಲಿ ಲಕ್ಷಾಂತರ ದೇವಸ್ಥಾನಗಳು ಇರುತ್ತವೆ. ಇತರ ದೇವರಿಗಿಂತ ದೊಡ್ಡ ದೇವರು, ದೊಡ್ಡ ದೇವಸ್ಥಾನ ಎಂಬುದೆಲ್ಲ ಇರುವುದಿಲ್ಲ. ಪ್ರತೀ ವ್ಯಕ್ತಿಗೂ ತಾನು ನಂಬುವ ದೇವರು, ತನ್ನ ಇಷ್ಟದ ದೇವಸ್ಥಾನ ದೊಡ್ಡದು. ಹಿಂದೂ ಧರ್ಮವು ತನ್ನ ಅನುಯಾಯಿಗಳಲ್ಲಿ, ಈ ದೇಶದಲ್ಲಿ ಶತಮಾನಗಳಿಂದ ಉಳಿದು ಬಂದಿರುವುದು ಈ ಮೂಲಕ. ಅಯೋಧ್ಯೆಯ ರಾಮ ಮಂದಿರವನ್ನು ರಾಷ್ಟ್ರಮಂದಿರ ಎಂದು ಹೇಳುವುದು 'ಒಂದು ದೇಶ, ಒಂದು ಮಂದಿರ' ಎಂದು ಘೋಷಿಸುವುದಕ್ಕೆ ಸನಿಹದ ಮಾತು. ಭಾರತವು ದೇವಸ್ಥಾನಗಳಲ್ಲಿ ಎಷ್ಟರಮಟ್ಟಿಗೆ ಅಸ್ಮಿತೆಯನ್ನು ಹೊಂದಿದೆಯೋ, ಚರ್ಚು, ಮಸೀದಿ, ಇತರ ಧಾರ್ಮಿಕ ಸ್ಥಳಗಳಲ್ಲಿಯೂ ಅಷ್ಟೇ ಪ್ರಮಾಣದಲ್ಲಿ ಅಸ್ಮಿತೆಯನ್ನು ಹೊಂದಿದೆ. ಆದರೆ ಈ ಯಾವುವೂ ರಾಷ್ಟ್ರದ ಲಾಂಛನ ಆಗುವುದಿಲ್ಲ.

ದಿನದ ಟ್ವೀಟ್

ಹಡಗು ತೂತಾಗಿದೆ...

20 ವರ್ಷದ ಹಿಂದೆ 85 % ಮಕ್ಕಳು ಕನ್ನಡ ಮಾಧ್ಯಮದಲ್ಲಿ ಓದುತ್ತಿದ್ದರು. ಈಗ ಅದು 52 %ಗೆ ಇಳಿದಿದೆ. ಕರ್ನಾಟಕದ 40 % ಮಕ್ಕಳು ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೆ ಹೊರಟು ಹೋಗಿದ್ದಾರೆ. ಪಠ್ಯಪುಸ್ತಕದ ಸುತ್ತ ಸೈದ್ಧಾಂತಿಕ ತಿಕ್ಕಾಟದಲ್ಲಿ ತೊಡಗಿರುವ ಯಾರಿಗೂ ತೂತಾಗಿರುವ ಕನ್ನಡ ಮಾಧ್ಯಮ ಅನ್ನುವ ಹಡಗನ್ನು ಮುಳುಗದಂತೆ ಕಾಪಾಡುವುದು ಹೇಗೆ ಅನ್ನುವುದರ ಬಗ್ಗೆ ಚಿಂತೆ ಇಲ್ಲ.

ವಸಂತ್ ಶೆಟ್ಟಿ, ಬರಹಗಾರ

ಕಿಡಿನುಡಿ

ಒಕ್ಕೂಟದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ರಸ್ತೆಯ ನಿರ್ಮಾಣದಲ್ಲಿ ಗಿನ್ನಿಸ್ ದಾಖಲೆಗಳನ್ನು ಬರೆಯುತ್ತಿದೆಯೇ ಹೊರತು ಅದರ ನಿರ್ವಹಣೆ ಹಾಗೂ ದರ್ಜೆಯ ಬಗ್ಗೆ ಮುತುವರ್ಜಿ ಅಥವಾ ಕಾಳಜಿ ವಹಿಸುತ್ತಿಲ್ಲ.

ರಾಜು ಗಡೇಕರ್, ವಕೀಲ

25 ವರ್ಷಗಳ ಹಿಂದೆ

ಶನಿವಾರ, 14-6-1997

• **ದೆಹಲಿ: ಚಿತ್ರಮಂದಿರದಲ್ಲಿ ಬೆಂಕಿ– 60 ಮಂದಿ ಸಾವು**

ನವದೆಹಲಿ, ಜೂನ್ 13 (ಯುಎನ್ಐ, ಪಿಟಿಐ)– ದಕ್ಷಿಣ ದೆಹಲಿಯ ಚಿತ್ರಮಂದಿರವೊಂದರಲ್ಲಿ ಇಂದು ಸಂಜೆ ಸಂಭವಿಸಿದ ಭೀಕರ ಬೆಂಕಿ ಆಕಸ್ಮಿಕದಲ್ಲಿ 60 ಮಂದಿ ಪ್ರೇಕ್ಷಕರು ಸತ್ತಿದ್ದಾರೆ ಹಾಗೂ ಇತರ 200 ಮಂದಿ ಗಾಯಗೊಂಡಿದ್ದಾರೆ.

ನೂತನವಾಗಿ ಬಿಡುಗಡೆಯಾಗಿರುವ 'ಬಾರ್ಡರ್' ಹಿಂದಿ ಚಿತ್ರದ ಪ್ರದರ್ಶನ 'ಉಪಹಾರ್' ಚಿತ್ರಮಂದಿರದಲ್ಲಿ ನಡೆದಿತ್ತು. ಚಿತ್ರಮಂದಿರದಲ್ಲಿ 1,400 ಜನ ಕುಳಿತುಕೊಳ್ಳಬಹುದಾಗಿದ್ದು, ದುರ್ಘಟನೆ ಸಂಭವಿಸಿದಾಗ ಚಿತ್ರಮಂದಿರ ತುಂಬಿತ್ತು.

ಇಂದು ಸಂಜೆ 5.10ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿತು. ಬೆಂಕಿಯನ್ನು ಆರಿಸಲು 200 ಮಂದಿ ಅಗ್ನಿಶಾಮಕ ಸಿಬ್ಬಂದಿ ಮತ್ತು 48 ಅಗ್ನಿಶಾಮಕ ವಾಹನಗಳು ಸುಮಾರು ಎರಡು ತಾಸು ಶ್ರಮಿಸಿದವು.

ಚಿತ್ರಮಂದಿರದ ನೆಲಮಾಳಿಗೆಯಲ್ಲಿ ಇಟ್ಟಿದ್ದ ಟ್ರಾನ್ಸ್‌ಫಾರ್ಮರ್ ಸ್ಫೋಟಗೊಂಡಿದ್ದರಿಂದ ಬೆಂಕಿ ಹತ್ತಿಕೊಂಡಿತು. ಟ್ರಾನ್ಸ್‌ಫಾರ್ಮರ್‌ನಲ್ಲಿದ್ದ ತೈಲದಿಂದಾಗಿ ಬೆಂಕಿ ಶೀಘ್ರವೇ ವ್ಯಾಪಿಸುವಂತಾಯಿತು ಎಂದು ಹೆಚ್ಚುವರಿ ಪೊಲೀಸ್ ಕಮಿಷನರ್ ಮ್ಯಾಕ್ಸ್‌ವೆಲ್ ಪೆರಿರಾ ಅವರು ತಿಳಿಸಿದ್ದಾರೆ.

ಟ್ರಾನ್ಸ್‌ಫಾರ್ಮರ್ ಸ್ಫೋಟಗೊಂಡಿದ್ದರಿಂದ ಚಿತ್ರಮಂದಿರದ ಒಳಗೆ ಹೊಗೆ ವ್ಯಾಪಿಸಿತು. ಹೊಗೆಯ ಕಾರಣ ಗೊತ್ತಾಗುವಷ್ಟರಲ್ಲೇ ಬೆಂಕಿ ಚಿತ್ರಮಂದಿರವನ್ನು ವ್ಯಾಪಿಸಿತು. ಸತ್ತವರಲ್ಲಿ ಬಹುತೇಕ ಜನ ಉಸಿರು ಕಟ್ಟಿ ಮತ್ತು ಕಾಲ್ತುಳಿತಕ್ಕೆ ಸಿಕ್ಕಿ ಸತ್ತಿರಬಹುದು ಎಂದು ಶಂಕಿಸಲಾಗಿದೆ.

ಬೆಂಕಿ ವ್ಯಾಪಿಸುತ್ತಿರುವುದು ತಿಳಿದ ತಕ್ಷಣ ಚಿತ್ರಮಂದಿರದ ಬಾಗಿಲುಗಳನ್ನು ತೆರೆದಿದ್ದರಿಂದ ಇನ್ನಷ್ಟು ಅನಾಹುತ ಸಂಭವಿಸುವುದು ತಪ್ಪಿತು. ಸತ್ತವರಲ್ಲಿ ಬಹುತೇಕರು ಬಾಲ್ಕನಿಯಲ್ಲಿ ಕುಳಿತಿದ್ದವರು.

50 ವರ್ಷಗಳ ಹಿಂದೆ

ಬುಧವಾರ, 14-6-1972

• **ಅರಸು ಅವರಿಗೆ ಪ್ರಚಂಡ ಜಯ**

ಮೈಸೂರು, ಜೂನ್ 13– ಹುಣಸೂರು ಕ್ಷೇತ್ರದಿಂದ ರಾಜ್ಯ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸು ಅವರು ಪ್ರಚಂಡ ಬಹುಮತದಿಂದ ಜಯ ಗಳಿಸಿದ್ದಾರೆ.

ಶ್ರೀ ಅರಸು ಅವರು ತಮ್ಮ ಸಮೀಪ ಪ್ರತಿಸ್ಪರ್ಧಿಗಳಿಗಿಂತ 35 ಸಾವಿರಕ್ಕೂ ಹೆಚ್ಚು ಮತ ಗಳಿಸಿ ಚುನಾಯಿತರಾಗಿದ್ದಾರೆ.

ಸೋತ ನಾಲ್ವರು ಪಕ್ಷೇತರ ಅಭ್ಯರ್ಥಿಗಳೂ ತಮ್ಮ ಠೇವಣಿ ಕಳೆದುಕೊಂಡಿದ್ದಾರೆ. ಈ ಪೈಕಿ ಶ್ರೀ ಸಿದ್ಧಪ್ಪ ಅವರು ತಾವು ನಿವೃತ್ತರಾಗಿರುವುದಾಗಿ ಚುನಾವಣೆಗೆ ಮುಂಚೆ ಪ್ರಕಟಿಸಿದ್ದರು.

ಮೂರು ತಿಂಗಳ ಹಿಂದೆ ಮುಖ್ಯಮಂತ್ರಿಯಾದಾಗ ಶ್ರೀ ಅರಸು ಅವರು ವಿಧಾನಮಂಡಲದ ಸದಸ್ಯರಾಗಿರಲಿಲ್ಲವಾದ ಕಾರಣ ಅವರಿಗೆ ಸ್ಥಾನ ತೆರವು ಮಾಡಿಕೊಡುವ ಸಲುವಾಗಿ, ಈ ಕ್ಷೇತ್ರದಿಂದ ಆಯ್ಕೆಯಾಗಿದ್ದ ಶ್ರೀ ಕರಿಯಪ್ಪ ಗೌಡ ಅವರು ರಾಜೀನಾಮೆ ಇತ್ತಿದ್ದರಿಂದ ಈ ಉಪಚುನಾವಣೆ ನಡೆಯಬೇಕಾಯಿತು.

• **ಕಾವೇರಿ ಜಲವಿವಾದ: ಅಂಕಿಅಂಶ ಸಂಗ್ರಹಕ್ಕೆ ನಾಲ್ವರ ಸಮಿತಿ ನೇಮಕ**

ನವದೆಹಲಿ, ಜೂನ್ 13– ಕಾವೇರಿ ನದಿ ನೀರು ಹಂಚಿಕೆಗೆ ಸಂಬಂಧಿಸಿದ ವಿವಾದ ಇತ್ಯರ್ಥ ಪ್ರಯತ್ನದ ಅಂಗವಾಗಿ ಇಂದು ಕೇಂದ್ರ ಸರ್ಕಾರವು ನಾಲ್ವರು ಸದಸ್ಯರಿರುವ ಅಂಕಿಅಂಶ ಸಂಗ್ರಹ ಸಮಿತಿಯೊಂದನ್ನು ನೇಮಕ ಮಾಡಿತು.

ಸದಸ್ಯರು: ಸಿಂಧೂ ನದಿ ನಿವೃತ್ತ ಕಮಿಷನರ್ ಹಾಗೂ ಕೇಂದ್ರ ನೀರಾವರಿ ಮತ್ತು ವಿದ್ಯುತ್ ಖಾತೆ ಜಂಟಿ ಕಾರ್ಯದರ್ಶಿ ಆರ್.ಅಹೂಜ, ಪಂಜಾಬಿನ ನಿವೃತ್ತ ಚೀಫ್ ಎಂಜಿನಿಯರ್ ಜತೀಂದ್ರ ಸಿಂಗ್, ಕೇಂದ್ರ ಸರ್ಕಾರದ ನಿವೃತ್ತ ಕೃಷಿ ಕಮಿಷನರ್ ಡಾ. ಜೆ.ಎಸ್. ಪಟೇಲ್, ಇನ್ನೊಬ್ಬ ಸದಸ್ಯರನ್ನು (ನಿವೃತ್ತ ನ್ಯಾಯಾಧೀಶರು) ಸದ್ಯದಲ್ಲೇ ನೇಮಕ ಮಾಡಲಾಗುತ್ತದೆ.

ಅಹಂಕಾರವನ್ನು ತಲೆಗೇರಿಸಿಕೊಂಡ ವ್ಯಕ್ತಿಯೊಬ್ಬನ ಈ ಮಲಯಾಳಂ ಕಥಾನಕ ನಿಜಕ್ಕೂ ಹೊಸತು

ಅಂತಸ್ತು, ಅಧಿಕಾರದಿಂದ ಬಿದ್ದ 'ಪುಳು'

ವಿಶ್ಲೇಷಣೆ

ಕೃಷ್ಣಮೂರ್ತಿ ಹನೂರು

ಎಲ್ಲೆಂದರಲ್ಲಿ ನಾಟಕ ಪ್ರದರ್ಶನ, ರಿಹರ್ಸಲ್, ಏಕಪಾತ್ರಾಭಿನಯ ಎಂದು ಓಡಾಡುವ ದಲಿತ ನಟನನ್ನು ಮೆಚ್ಚಿದ ಸುಂದರ ಹೆಂಗಸು, ಅವನ ಬೈಕಿನಲ್ಲಿ ಕೂತು ಹೋಗುತ್ತಿದ್ದವಳು 'ಗಾಡಿಗೆ ಲೈಸೆನ್ಸ್ ತೆಗೆದುಕೊಳ್ಳಬಾರದಾ' ಎಂದು ನೆನಪಿಸುತ್ತಾಳೆ. ಹೀಗೆ ಪರವಾನಗಿ ಇಲ್ಲದೆ ಗಾಡಿ ಓಡಿಸುವವನ ಅಭಿನಯದ ಹಲವು ಸಂಗತಿಗಳು ಬಿಚ್ಚಿಕೊಳ್ಳುತ್ತಾ ಅದು ಸಂಕೀರ್ಣತೆಯ ಆಳಕ್ಕಿಳಿಯುತ್ತಾ ಹೋಗುವ ಇತ್ತೀಚಿನ ಮಲಯಾಳಂ ಸಿನಿಮಾ 'ಪುಳು' ನೋಡುಗರ ರೆಪ್ಪೆ ಬಡಿಸುವುದಿಲ್ಲ.

ವಿಚಿತ್ರ ವಿರೋಧಾಭಾಸದ ವಿಷವರ್ತುಲದಲ್ಲಿ ಮುಳುಗೇಳುವ, ಜಾತಿ ಅಂತಸ್ತಿಗೆ ಜೋತುಬಿದ್ದಿರುವ ಹಾಗೂ ಅಧಿಕಾರದ ಉನ್ನತ ಹುದ್ದೆಯಲ್ಲಿದ್ದ ಮತ್ತೊಬ್ಬ ವ್ಯಕ್ತಿ ನಿವೃತ್ತ ಪೊಲೀಸ್ ಅಧಿಕಾರಿ. ಆತ ನಿರಂತರವಾಗಿ ತಾನೇ ಸೃಷ್ಟಿಸಿಕೊಳ್ಳುವ ಗಟಾರದ ಹುಳುವಾಗಿಬಿಡುವ ಚಿತ್ರ ಇದು. ಇದೀಗ ಬಿಡುಗಡೆಯಾಗುತ್ತಿರುವ ತಮ್ಮ ಚಿತ್ರ ಸಂಪೂರ್ಣ ಭಿನ್ನ, ಡಿಫರೆಂಟ್ ಎನ್ನುವ ಎಲ್ಲ ನಿರ್ದೇಶಕರು ಮತ್ತು ಪ್ರಸಿದ್ಧ ನಟರ ಮಾತು ಸವೆದು ಸನ್ನಿ ಹಿಡಿದು ಹೋಗಿದ್ದರೂ ಮಮ್ಮುಟ್ಟಿ ಅಭಿನಯದ ಈ ಸಿನಿಮಾ ಮಾತ್ರ ನಿಜಕ್ಕೂ ಹೊಸತು.

ನಿವೃತ್ತನಾದ ಪೊಲೀಸ್ ಅಧಿಕಾರಿಗೆ ಮೈಮೇಲಿನ ಖಾಕಿ ವಸ್ತ್ರ ಹೋಗಿದೆ. ಆದರೆ ಕಾಲಿನಲ್ಲಿ ಕೆಂಪು ಬೂಟು ಹಾಗೇ ಇದೆ, ತಲೆಯಲ್ಲಿ ಜಾತಿ ಅಂತಸ್ತು, ಕಳೆದುಹೋದ ಅಧಿಕಾರದ ಅಹಂಕಾರ ತುಂಬಿಕೊಂಡಿದೆ. ಆದರೆ ಈ ಮೇಲರಿಮೆಯ ಅಧಿಕಾರಿಯ ಸುಂದರ ತಂಗಿಯೇ ಮೇಲೆ ಹೇಳಿದ ದಲಿತ ನಟ ಕುಟ್ಟಪ್ಪನ್ ಜೊತೆ ಹೊರಟಿದ್ದಾಳೆ! ಇಂಥ 'ಅವಮಾನ'ದ ಹಿಂದೆಯೇ ಈ ಪೊಲೀಸ್ ಅಧಿಕಾರಿಯ ಪತ್ನಿ ಎಂಟ್ಹತ್ತು ವರ್ಷದ ಒಬ್ಬ ಮಗನನ್ನು ಬಿಟ್ಟು ತೀರಿಕೊಂಡಿದ್ದಾಳೆ. ಹೆಂಡತಿ ತೀರಿಹೋಗುವ ಪೂರ್ವದ ಕೆಲವು ವಿಡಿಯೊ ಚಿತ್ರಗಳಿವೆ. ವಿಧುರ ತಂದೆ ಆಗಾಗ ಮಗನೊಂದಿಗೆ ಸಂಜೆ ಹೊತ್ತಿನಲ್ಲಿ ಹಳೆಯ ನೆನಪಿನ ರೀಲನ್ನು ನೋಡುತ್ತಿರುತ್ತಾನೆ. ಹಾಗೆ ನೋಡುವ ಚಿತ್ರಾವಳಿ ಹುಡುಗನಿಗೂ ಅಪ್ಪನಿಗೂ ಸಮಾಧಾನ ತರುತ್ತದೋ ಇಲ್ಲ ಮತ್ತಷ್ಟು ವಿಷಾದ ಉಕ್ಕಿಸುತ್ತದೋ ಎಂಬುದು ಚಿತ್ರದ ಸೂಕ್ಷ್ಮ ದ್ವಂದ್ವ.

ಒಂದು ಇಕ್ಕಟ್ಟಿನ ಸಂದರ್ಭವೆಂದರೆ, ಪೊಲೀಸ್ ಅಧಿಕಾರಿ ನಿವೃತ್ತಿಯಾದಾಗ ಯಾವ ಫ್ಲ್ಯಾಟಿನಲ್ಲಿ ವಾಸ ಮಾಡುತ್ತಿದ್ದನೋ ಅಲ್ಲಿಗೆ ಅನಿವಾರ್ಯವೆಂಬಂತೆ ತಂಗಿಯೂ ನಟನೂ ಬಂದು ವಾಸಿಸುವ ಸಮಯ ಒದಗಿ, ನಾಯಕನಿಗೆ ನಿಧಾನವಾಗಿ ಲಿಫ್ಟ್ ಹತ್ತುವಲ್ಲಿ ಇಳಿಯುವಲ್ಲಿ ಅಂತರಂಗದ ತುಡಿತ ತೀವ್ರವಾಗಿ ಉಸಿರು ಬಿಗಿ ಹಿಡಿದಂತಾಗುತ್ತದೆ. ಅದಾಗಿ ಫ್ಲ್ಯಾಟಿನೊಳಗೆ ಈ ತಂದೆ, ಮಗನಿಗೆ ಎಲ್ಲ ಐಷಾರಾಮಿ ವಸ್ತುಗಳು ಇದ್ದೂ ಅಲ್ಲಿ ಏನೇನೂ ಇಲ್ಲ ಅನ್ನಿಸುತ್ತಾ ಹೋಗುವುದೇ ಚಿತ್ರದ ಮಾರ್ಮಿಕ ಸಂಗತಿ. ಆದರೂ ತಂದೆಯು ಶಿಸ್ತು ಇರಬೇಕೆಂದು ಮಗನಿಗೆ ಬೂಟು ಬಿಚ್ಚಿ ಚಪ್ಪಲಿ ಹಾಕಿಕೊಳ್ಳುವುದರಿಂದ ಹಿಡಿದು ಬೆಳಗಾಗಿ ಹಲ್ಲು ಉಜ್ಜುವುದರವರೆಗೆ ಪಾಠ ಹೇಳಿಕೊಡುತ್ತಾನೆ.

ಅಂತಸ್ತು ಅನುಸರಿಸಬೇಕೆನ್ನುವಲ್ಲಿ ಬೀದಿಯ ಮಕ್ಕಳೊಂದಿಗೆ ಆಟವಿಲ್ಲದೆ, ಬೇರೆಯವರ ಸಂಗವಿಲ್ಲದೆ ಸೊರಗುವ ಮಗನ 'ಕೋಣೆ'ಯೊಳಗಿನ ಓದು ಅದೆಷ್ಟು ಗಹನವಾಗಿರುತ್ತದೆ ಎಂದರೆ, ನೋಡಲು ಸೇಬಿನಂತಿರುವ ಟೊಮ್ಯಾಟೊವನ್ನು ಹಣ್ಣು ಎಂದು ಓದಿಕೊಳ್ಳುವವನಿಗೆ, ತಂದೆ 'ಅದು ತರಕಾರಿ' ಅನ್ನುತ್ತಾನೆ. ಹುಡುಗ ಕಿಚ್ಚು 'ಗೂಗಲ್ ಸರ್ಚ್‌ನಲ್ಲಿ ಅದು ಹಣ್ಣು ಎಂದಿದೆ' ಎನ್ನುತ್ತಾನೆ. ಕಿಚ್ಚು ಎಂಬ ಅಡ್ಡ ಹೆಸರಿನ ಈ ಹುಡುಗನ ನಿಜ ನಾಮಧೇಯ ಹೃಷಿಕೇಶ.

ಅಪ್ಪನ ನಿತ್ಯ ಕಟ್ಟುನಿಟ್ಟಿಗೆ ಸಿಟ್ಟೇರಿಸಿಕೊಳ್ಳುವ ಹುಡುಗ ತನ್ನ ಪುಸ್ತಕದ ಕಪಾಟಿನಿಂದ ಆಟದ ಪಿಸ್ತೂಲನ್ನೆತ್ತಿ ಅಪ್ಪನತ್ತ ಗುರಿ ಇಡುತ್ತಾನೆ. ತಂದೆಯೂ ಪೊಲೀಸನಾಗಿದ್ದ ಕಾರಣ ತಾನೂ ಒಂದು ಪಿಸ್ತೂಲು ಅಡಗಿಸಿಟ್ಟು, ತಡೆಯಲಾಗದ ಉದ್ವೇಗದ ವೇಳೆ ಅದನ್ನು ಸವರಿ ನೋಡುತ್ತಲೇ ಇರುತ್ತಾನೆ. ಸವರಿ ಸಮಾಧಾನ ಮಾಡಿಕೊಳ್ಳಬೇಕಾದ ಅಂತರಂಗ ಮಾತ್ರ ಮತ್ತಷ್ಟು ಆಘಾತಕ್ಕೊಳಗಾಗುತ್ತದೆ. ಯಾಕೆಂದರೆ ಈತನ ಅಧಿಕಾರಾವಧಿ ಮತ್ತು ಆನಂತರದ ತಾರುತಂಟೆಗಳು, ಉಪದ್ವ್ಯಾಪಗಳು ಒಂದೆರಡಲ್ಲ! ಅವನ ಕೈ ರಿಯಲ್ ಎಸ್ಟೇಟ್ ದಂಧೆಗೂ ಚಾಚಿರುತ್ತದೆ. ಆ ನಿಮಿತ್ತ ಶ್ರೀಮಂತ ಕುಳಗಳೊಡನೆ ನಿರ್ಜನ ಪ್ರವಾಸಿ ಬಂಗಲೆಗಳಲ್ಲಿ ಗುಟ್ಟಾಗಿ ಕೂತು ಮಾತಾಡುವುದು, ಅದೇನಾದರೂ ಬಂಗಲೆ ಕಾಯುವ ಮೇಟಿಗೆ ಗೊತ್ತಾಗಿಬಿಟ್ಟಿತೇ ಎಂದು ಅನುಮಾನಪಡುವುದು ಅವನ ಅಭ್ಯಾಸ. ಈ ಕಾರಣ ಯಾರನ್ನೋ ಬಂಧಿಸಿ ಲಾಕಪ್ಪಿಗೆ ಹಾಕುವುದು, ಅವರೇ ಏಕಾಂತದ ಬಂಗಲೆಯ ಕೋಣೆಗಳಲ್ಲಿ ತನ್ನ ಸಾವಿಗೆ ಸಂಚು ಹೂಡಬಹುದೇ ಎಂದು ತಳಮಳಿಸುವುದು, ಅದರ ಸಮಾಧಾನಕ್ಕಾಗಿ ಕಂಡಕಂಡ ಎಡೆಗಳಲ್ಲೆಲ್ಲ ಎಡತಾಕುತ್ತಾನೆ.

ಪ್ರಾಕೃತಿಕ ವಾತಾವರಣದಲ್ಲಿ ರಿಯಲ್ ಎಸ್ಟೇಟ್‌ನವರೊಂದಿಗೆ ಮಾತನಾಡಿ ಕೋಣೆಯಲ್ಲಿ ವಿಶ್ರಮಿಸುವವನಿಗೆ ಸ್ನಾನದ ವೇಳೆ ಉಸಿರು ಕಟ್ಟಿದಂತಾಗುತ್ತದೆ. ಅಷ್ಟೇ ಅಲ್ಲ ಫ್ಲ್ಯಾಟಿನ ಲಿಫ್ಟಿನಲ್ಲಿ ಒಬ್ಬನೇ ಮಹಡಿ ಏರಲು ಹೋಗುವಲ್ಲಿಯೂ ಉಸಿರು ಕಟ್ಟಿದಂತಾಗುತ್ತದೆ. ಅಲ್ಲಿಯೇ ಯಾರಾದರೂ ನಿರ್ವಾತ ಸೃಷ್ಟಿಸಿರಬಹುದೇ ಎಂಬ ಅನುಮಾನ. ರಾತ್ರಿ ಹೊತ್ತು ತಾನು ಮೂಗಿಗೆ ಅಡರಿಸಿಕೊಳ್ಳುವ ಆಮ್ಲಜನಕದ ಬಟ್ಟಲಿನಲ್ಲಿಯೂ ವಿಷಾನಿಲ ಇದ್ದುಬಿಡುವಂತಾದರೆ ಎಂಬ ಅನುಮಾನದ ಮೇಲೆ, ಆಗಲೇ ಎದ್ದು ಬಂದು ಅದನ್ನು ನಾಯಿಯೊಂದರ ಮೇಲೆ ಪ್ರಯೋಗಿಸುತ್ತಾನೆ.



ನವ್ಯ ಸಂದರ್ಭದ ಸ್ವಗತ ಲಹರಿಯ ಹಿನ್ನೆಲೆಯಲ್ಲಿ ಬಂದ ಅಥವಾ ಸ್ಪಷ್ಟವಾಗಿ ಹೇಳುವುದಾದರೆ, ಚಿತ್ತಾಲರ 'ಶಿಕಾರಿ' ಕಾದಂಬರಿ ಕಥನವನ್ನು ನೆನಪಿಸುತ್ತಾನೆ ಈ ಚಿತ್ರದ ನಾಯಕ. ತಾನು ಸೇವಿಸುವ ಗಾಳಿಯನ್ನು ವಿಷಾನಿಲವಾಗಿ ಪರಿವರ್ತಿಸುವ ಕ್ರಿಮಿನಲ್‌ಗಳು ತನ್ನ ಸುತ್ತುಮುತ್ತಲೇ ಇದ್ದಾರೆಯೇ ಎಂದು ಭ್ರಮಿಸುತ್ತಾ, ಕಂಡಕಂಡವರೆಲ್ಲ ತನ್ನ ಶತ್ರುಗಳೆಂದು ಭಯ ಬೀಳುತ್ತಾ, ಇದನ್ನೆಲ್ಲ ತಂಗಿಯ ಪ್ರಿಯಕರ ದಲಿತ ಕುಟ್ಟಪ್ಪನ್ ಮೇಲೆ ತಿರುಗಿಸಿಬಿಡುತ್ತಾನೆ.

ಸತ್ತ ಹೆಂಡತಿಯ ಅಗಲಿಕೆ, ಟೊಮ್ಯಾಟೊವನ್ನು ಹಣ್ಣು ಎಂದು ಗೂಗಲ್‌ನಲ್ಲಿ ಸರ್ಚ್ ಮಾಡಿ ಓದುವ ಮಗ, ಶಾಲೆಯಲ್ಲಿ ಅಪ್ಪನ ಮೇಲೆ ಈ ಮಗನ ಕಂಪ್ಲೇಂಟ್, ರಿಯಲ್ ಎಸ್ಟೇಟ್‌ನವರ ಸಿಟ್ಟು, ಅಸಮಾಧಾನ, ಮಂತ್ರಿಯೊಂದಿಗಿನ ಮಾತುಕತೆಯ ವೈಫಲ್ಯ ಇಂಥ ಸಂದರ್ಭದಲ್ಲೇ ಅಸಹಾಯಕರ ಮೇಲೆ ಕೈ ಮಾಡುವುದು, ಕಡೆಗೆ ತಾನೇ ಉಸಿರುಗಟ್ಟುತ್ತಿರುವೆನಲ್ಲ ಎಂಬ ಭಯಂಕರ ವ್ಯಾಕುಲದ ತಾಕಲಾಟದಲ್ಲಿ ಈ ನಾಯಕ ತಂಗಿಯ ಮನೆಗೆ ಬರುತ್ತಾನೆ. ಆಕೆ ಸಂಭ್ರಮಬಿದ್ದು ಸ್ವಾಗತಿಸುತ್ತಾಳೆ. ಭಾವನೆನಿಸುವ ಕುಟ್ಟಪ್ಪನ್ 'ನಿನ್ನ ಅಣ್ಣನಿಗೆ ಟೀ ಮಾಡಿಕೊಡು' ಎಂದರೆ ತಂಗಿ ಅಡುಗೆ ಮನೆಯಿಂದ 'ಟೀಗೆ ಸಕ್ಕರೆ ಹಾಕಲೇ ಅಣ್ಣ' ಎನ್ನುತ್ತಾಳೆ. ಆದರೆ ಎದೆ ತುಂಬ ಬೆಂಕಿ ಹತ್ತಿಸಿಕೊಂಡು ಉರಿಯುತ್ತಿದ್ದ ನಾಯಕ ತನ್ನ ಸಿಟ್ಟಿನ ಆಧಿಕ್ಯದ ಕಡೆಯ ಕೃತ್ಯವೋ ಎಂಬಂತೆ, ಕುಟ್ಟಪ್ಪನ್ ತನಗೆ ಬಂದ ಪ್ರಶಸ್ತಿಯ ಸ್ಮರಣಿಕೆಯ ವಿವರಗಳನ್ನು ಹೇಳುತ್ತಿರುವಲ್ಲಿಯೇ ಅದೇ ಸ್ಮರಣಿಕೆಯಿಂದ ಅವನನ್ನು ಹೊಡೆದು ಕೊಲ್ಲುತ್ತಾನೆ. ಟೀಗೆ ಸಕ್ಕರೆ ಬೆರೆಸಿ ತಂದ ಸುಂದರ ತಂಗಿಯನ್ನು ಕೂಡಾ ಮಲಗಿಸುತ್ತಾನೆ!

ಭಾವ, ತಂಗಿಯನ್ನು ಕೊಲ್ಲುವ ಭಾವತೀವ್ರತೆಯ ಮತ್ತು ಲಾಗಾಯ್ತಿನಿಂದಲೂ ಅಂತಸ್ತಿನ ಅಹಂಕಾರಕ್ಕೆ ಸಿಕ್ಕಿಬಿದ್ದ ಈ ವ್ಯಕ್ತಿಯ ಕೃತ್ಯ ಈ ಹೊತ್ತಿನ ಆಧುನಿಕತೆಯ ನಡುವೆ ಅತಿರೇಕವಾಯಿತಲ್ಲವೇ ಅಂದುಕೊಂಡರೂ ಮರ್ಯಾದೆಗೇಡುಹತ್ಯೆಗಳು ನಡೆಯುತ್ತಲೇ ಇವೆಯಲ್ಲ.

ಪಂಪನು ಭ್ರಮಾಧೀನ ವ್ಯಕ್ತಿಯ ಸಾಧನೆಯನ್ನು 'ಹೇಯ' ಎಂದರೆ, ಕುಮಾರವ್ಯಾಸ ಅಂಥದ್ದನ್ನು 'ತೋರಿ ಕೆಡುವೀ ತನುವಿನಭಿರಂಜನೆ' ಎನ್ನುತ್ತಾನೆ. ಅಲ್ಲಮನಾದರೋ 'ತನುವಿನೊಳಗಣ ಮಾಯೆಯೇ ಲಯದ ಬೀಜ' ಎಂದಿದ್ದಾನೆ.

ಚಿತ್ರದ ಕಡೆಯಲ್ಲಿ ಒಂದು ನಾಟಕದ ದೃಶ್ಯ ಜೋಡಣೆಯಿದೆ. ಆರಂಭದಲ್ಲಿಯೂ ಈ ಬಗೆಯ ನಾಟಕ ದೃಶ್ಯ ಇದೆ. ಆದರೆ, ಆ ದೃಶ್ಯದಲ್ಲಿ ಕಾಣಿಸುವವನು ಒಬ್ಬನೇ ನಟ ಕುಟ್ಟಪ್ಪನ್. ದಲಿತನಾದುದರಿಂದ ತಾನೊಬ್ಬನೇ ಏಕಪಾತ್ರಾಭಿನಯ ಮಾಡುವ ಅನಿವಾರ್ಯ ಅವನಿಗಿತ್ತು. ಚಿತ್ರದ ಕಡೆಯ ದೃಶ್ಯದಲ್ಲಿ, ತೆಂಗಿನ ಮರದಂತೆ ಇದ್ದ ಭರ್ಜಿಯನ್ನು ತಲೆಕೆಳಗಾಗಿಸಿ ತೆಗೆದು ನಟನೊಬ್ಬ ಜಂತುವೊಂದನ್ನು ಚುಚ್ಚಿ ಕೊಲ್ಲುವನು. ಆದರೆ ಬದುಕಿನ ಪರ್ಯಂತರ ನಮ್ಮ ಅಂತರಂಗದೊಳಗೆ ತುಂಬಿ ಕಾಡುವ ಮತ್ತು ಕಾಣದ ಭ್ರಮೆಯ ಹುಳುವನ್ನು ಕೊಲ್ಲುವ ಬಗೆ ಹೇಗೆ? ಇಂಥದ್ದೊಂದು ಪುರುಷಾಧಿಪತ್ಯದ ಮಲಯಾಳಂ ಚಿತ್ರದ ನಿರ್ದೇಶಕಿ ರತೀನಾ ಎಂಬ ಹೆಣ್ಣು ಮಗಳು.

ಸುಭಾಷಿತ

ನಮ್ಮ ಧರ್ಮಗಳು ಕೂಡಿ ಬಾಳುವುದನ್ನು ನಮಗೆ ಕಲಿಸದೇ ಇದ್ದರೆ ಆ ಧರ್ಮಗಳು ಏಕೆ?

–ಸಿದ್ಧೇಶ್ವರ ಸ್ವಾಮೀಜಿ

ಚುರುಮುರಿ



ಕತ್ತೆ ಕಾಯೋರು!

• ಲಿಂಗರಾಜು ಡಿ.ಎಸ್.

'ನಮ್ಮತಾವ ಪಕ್ಸ ಕಟ್ಟಕ್ಕೂ ಕಾಸಿಲ್ಲ. ಹೋಗೋರೆಲ್ಲ ಹೋಗ್ರಿ. ನಿಮಿಗೆ ಕೈಸಾಲ ಸಮಾರೋದನೆ ಮಾಡ್ತಿವೇ ಹೊರತು ಹೊಂದಾಣಿಕೆಗೆ ಬಿಲ್ಕುಲ್ ಬರಕ್ಕುಲ್ಲ' ಅಂದೋರೆ ದಳದೋರು! ಕೊನೆಗೆ ಮೂರೇ ಜನ ಉಳಿದಾರ ಅಂತ!' ಅಂತು ಯಂಟಪ್ಪಣ್ಣ.

'ಹಂಗೇನಿಲ್ಲ ಕನಣ್ಣೆ. ಪಕ್ಸದ ಟಿಕೆಟ್ನೆಲ್ಲವ ನಮ್ಮನೇರಿಗೆ ಕೊಟ್ಟು ಸಾಸಕರಾಗಿ ಮಾಡ್ಕತೀವಿ ಅಂದವ್ರೆ' ಅಂತಂದೆ.

'ಹೌದೇಳಪ್ಪ, ಪಕ್ಕದ ರಾಜ್ಯಗಳಲ್ಲಿ ನೋಡು ಲೋಕಲ್ ಪಕ್ಸಗಳು ಹ್ಯಂಗೆ ದಾಸತ್ತಲ್ಲಿ ಎಲೆಕ್ಸನ್ ಗೆದ್ದು ರಾಜ್ಯಭಾರ ಮಾಡ್ತಾ ರಾಷ್ಟ್ರೀಯ ಪಕ್ಸಗಳಿಗೆ ಜುಲಾಬು ಕೊಡ್ತಾವೆ. ಕಣ್ಣಿಗೆ ಬಣ್ಣದ ಗಾಜು ಇಕ್ಕ್ಯಂಡು ಬಂದಿರೋ ಇಬ್ರಾಯಿಮಣ್ಣ ಅದೇನು ನಾಟಿ ಔಸದ ಕೊಡ್ತದೋ ನೋಡಬಕು' ತುರೇಮಣೆ ವಿಶ್ಲೇಷಿಸಿದರು.

'ಪಕ್ಸಗಳು ಕಾಸಿನ ಕುಳಗಳ ಕರಕಬಂದು, ಆತ್ಮಸಾಕ್ಷಿ ಖರೀದಿ ಮಾಡಿ ರಾಜ್ಯಸಭೆಗೆ ನೆಂಬ್ರು ಮಾಡಿ ಡೆಲ್ಲಿಗೆ ಕಳಿಸ್ತಾವ್ರೆ. ಇದು ಕಾರ್ಯಕರ್ತರಿಗೆ ಮಾಡ್ತಿರೋ ಅನ್ನೇಯ ಅಲ್ಲುವರಾ? ಅದ್ನೇ ಕುಮಾರಣ್ಣ ಅಂದಿರದು' ಅಂದೆ.

'ಪಕ್ಸಗಳು ಬದುಕಬೇಕಲ್ಲುಡಾ! ಪಕ್ಸದ ಕಾಪಿ ಖರ್ಚಿನ ಬಿಲ್ಲು, ರೆಸಾರ್ಟ್ ಉಂಡಾಟದ ಬಿಲ್ಲು ಎತ್ತಕೆ ಸಕ್ತಿವಂತರು ಬೇಕಲ್ಲೋ' ಯಂಟಪ್ಪಣ್ಣ ವಿಶ್ಲೇಷಿಸಿತು.

'ಅಣ್ಣೆ, ಪಕ್ಸಗಳು ಎಲೆಕ್ಸನ್ ಬಾಂಡು ಹೆಸರಲ್ಲಿ ತೆರಿಗೆ ಇಲ್ಲದೇ ಕೋಟಿ ದೇಣಿಗೆ ತಕ್ಕೋದಿಲ್ವೆ? ಅಷ್ಟು ಸಾಲದು ಅಂತ ನಮ್ಮ ಪಿಂಚಣಿ ಚಿಲ್ಲರೆ ಕಾಸಿಗೂ ತೆರಿಗೆ ಇಸುಗತರೆ. 'ಪಿಂಚಣಿ ಆದಾಯ ಅಲ್ಲ, ಇದಕ್ಕೆ ತೆರಿಗೆ ವಿನಾಯಿತಿ ಕೊಡಿ' ಅಂತ ನೀವು ವಾಟ್ಸಪ್ಪಲ್ಲಿ ಗ್ವಾಮಾಳೆ ಹರಕಂಡುದ್ದೇ ಬಂತು' ತುರೇಮಣೆ ಒಳನೋಟ ಕೊಟ್ಟರು.

'ಯಂಟಪ್ಪಣ್ಣ ಈ ಪುಲಾರ ಬಗೆಹರಿಯಕುಲ್ಲ. ಸುಮ್ಮನೆ ಬಂಟ್ವಾಳಕ್ಕೆ ಕತ್ತೆ ಮೇಯಿಸಕ್ಹೋಗಮು ನಡೀರಿ. ಅದೇ ಮರ್ಯಾದಸ್ಥರ ಬದುಕು ಈಗ!' ಅಂತಂದೆ.

'ಅಭಿವೃದ್ಧಿ ಹೆಸರಲ್ಲಿ ನಮ್ಮಂತೇ ಕತ್ತೆಗಳ ಮೇಯ್ಸಿ ಹಾಲು ಕರಕೊಳೋದೇ ರಾಜಕೀಯ ಅಲ್ಲವೇನೋ? ಕೈ ತೋರಿಸಿ ಬಾಯಲ್ಲಿ ಕೇಸರಿ ಅಂದ್ರಾಯ್ತು' ಅಂದು ಕತ್ತೆ ಕಾಲದ ರಾಜಕೀಯ ಬಿಡಿಸಿಟ್ಟರು!

ಸಂಗತ

ನೀಗೋಣ 'ಶಕ್ತಿ ಬಡತನ'

ಜಾಗತಿಕ ತಾಪಮಾನದ ಸಮಸ್ಯೆ ಬಿಗಡಾಯಿಸದಂತೆ ನೋಡಿಕೊಳ್ಳಬೇಕಾದರೆ ವಾಯುಶಕ್ತಿಯ ಬಾಗಿಲು ಬಡಿಯಬೇಕಾದುದು ಅನಿವಾರ್ಯ

• ಬಿ.ಎಸ್.ಭಗವಾನ್

ಗಾಳಿಗೂ ತೂಕವುಂಟು- ಇದು ಶಾಲೆಯಲ್ಲಿ ಮಕ್ಕಳಿಗೆ ಪ್ರಯೋಗಸಹಿತ ಬೋಧಿಸುವ ಮೊದಲ ವಿಜ್ಞಾನ ಪಾಠ. ಪೆಟ್ರೋಲು, ನೈಸರ್ಗಿಕ ಅನಿಲ, ಖನಿಜ ಅಕ್ಷಯವೇನಲ್ಲ. ಇದನ್ನು ಅರಿತೂ ಅವನ್ನು ಎಗ್ಗಿಲ್ಲದೆ ಬಳಸುತ್ತಿದ್ದೇವೆ. ಸೌರಶಕ್ತಿ, ಜಲಶಕ್ತಿ ಹಾಗೂ ವಾಯುಶಕ್ತಿ- ಇವು ವರಸದೃಶ ಪುನರ್ ನವೀಕರಿಸಬಹುದಾದ ಅದಮ್ಯ ಚೈತನ್ಯಗಳು. ಈ ಒಂದೊಂದು ಶಕ್ತಿಗೂ ಮರುರೂಪ ನೀಡುವುದು ಅನಿವಾರ್ಯವಾಗಿದೆ.

ಇಂಧನ, ಅನಿಲ, ಖನಿಜದ ಮಿತವ್ಯಯ ಸಾಧಿಸದಿದ್ದರೆ ಜಾಗತಿಕ ತಪನದ ಸಮಸ್ಯೆ ಬಿಗಡಾಯಿಸೀತು. ಪರಿಣಾಮವಾಗಿ ಸೌರಶಕ್ತಿ ಹಾಗೂ ವಾಯುಶಕ್ತಿಯ ಉತ್ಪಾದನೆ ತ್ರಾಸವಾಗುವುದು! ಹಾಗಾಗಿ ಒಂದು ಅರ್ಥದಲ್ಲಿ ಭೂಮಾತೆ ಕಾವೇರುವ ಮೂಲಕ ನಮಗೆ ಹಿತಮಿತವಾಗಿ ಉರುವಲುಗಳನ್ನು ಬಳಸುವಂತೆ ಎಚ್ಚರಿಸುತ್ತಾಳೆ. ಭಾರತದಲ್ಲಿ ವಿಶೇಷವಾಗಿ ಗುಜರಾತ್, ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ರಾಜ್ಯಗಳಲ್ಲಿ ಸ್ಥಿರ, ಏಕಪ್ರಕಾರದ, ವೇಗದ ವಾಯುವಿನ ಹರಿವಿದ್ದು ವಾಯುಶಕ್ತಿಯ ಉತ್ಪಾದನೆಗೆ ವಿಪುಲ ಅವಕಾಶವಿದೆ.

ಬಿಗಡಾಯಿಸುತ್ತಿರುವ 'ಶಕ್ತಿ ಬಡತನ' ನೀಗುವ ದಿಸೆಯಲ್ಲಿ ಗಾಳಿಯ ಬಾಗಿಲು ತಟ್ಟುವುದು ಮಹತ್ವದ ಹೆಜ್ಜೆ. ಬೀಸುವ ಗಾಳಿಯಲ್ಲಿ ನಿಹಿತವಾಗಿರುವ ಚೈತನ್ಯ ವಿಶಿಷ್ಟ. ಇತರ ವಿದ್ಯುಚ್ಛಕ್ತಿ ಮೂಲಗಳಿಗೆ ಇಂಧನ ಅಗತ್ಯ. ಆದರೆ ವಾಯುಶಕ್ತಿಗೆ ಇಂಧನವೂ ಬೇಡ, ಸ್ಥಳೀಯವಾಗಿ ಅದು ಲಭ್ಯವಿರುವುದರಿಂದ ಸಾಗಾಣಿಕೆಯ ಸಮಸ್ಯೆಯೂ ಇಲ್ಲ. ವಾಯುಶಕ್ತಿಯ ಬಳಕೆಯಿಂದ ಇಂಗಾಲದ ಉತ್ಸರ್ಜನೆಯ ರಗಳೆಯಿಲ್ಲ. ಪೆಟ್ರೋಲ್, ಕಲ್ಲಿದ್ದಲು, ನೈಸರ್ಗಿಕ ಅನಿಲ, ಕಟ್ಟಿಗೆ ಉರಿಸಿದರೆ ಅಪಾರ ಪ್ರಮಾಣದ ಇಂಗಾಲದ ಡೈಆಕ್ಸೈಡ್ ವಾತಾವರಣ ಸೇರುತ್ತದೆ.

ಇಂದಿಗೆ ವಿಶ್ವದ 91 ದೇಶಗಳು ವಿದ್ಯುಚ್ಛಕ್ತಿಗೆ ಮಾರುತವನ್ನೇ ನಂಬಿವೆ. ಇದರ ಫಲವಾಗಿ ವರ್ಷಕ್ಕೆ 100 ಕೋಟಿಗಿಂತಲೂ ಹೆಚ್ಚು ಟನ್ನುಗಳಷ್ಟು ಇಂಗಾಲದ ಡೈ ಆಕ್ಸೈಡ್ ವಾತಾವರಣ ಸೇರುವುದು ತಪ್ಪಿದೆ. ಕಳೆದ ಅರ್ಧ ಶತಮಾನದಲ್ಲಿ ಸರಾಸರಿ ಜಾಗತಿಕ ತಾಪಮಾನದ ಏರಿಕೆ 0.5 ಡಿಗ್ರಿ ಸೆಲ್ಸಿಯಸ್. ಒಟ್ಟು ಬಳಕೆಯಾಗುವ ಶಕ್ತಿ ಸಂಪನ್ಮೂಲಗಳ ಪೈಕಿ ಅರ್ಧದಷ್ಟು ವಾಯುವಿನದೇ ಕಾರುಬಾರಾದರೆ, 2050ರ ವೇಳೆಗೆ ಜಾಗತಿಕ ತಾಪಮಾನದ ಏರಿಕೆಯ ಪ್ರಮಾಣವನ್ನು ಶೂನ್ಯಕ್ಕಿಳಿಸಲು ಸಾಧ್ಯ.

ವಾಸ್ತವವಾಗಿ ವಾಯುಶಕ್ತಿಯ ಬಳಕೆ ಬಹು ಪ್ರಾಚೀನವಾದುದೇ. 5,000 ವರ್ಷಗಳ ಹಿಂದೆಯೇ ಈಜಿಪ್ಷಿಯನ್ನರಿಗೆ ನೈಲ್ ನದಿ ದಾಟಲು ಮಾರುತವೇ ಬಲ, ದಿಕ್ಕು. ಕ್ರಿ.ಪೂ. 2000ದ ಸುಮಾರಿನಲ್ಲಾಗಲೇ ಅಫ್ಗಾನಿಸ್ತಾನದಲ್ಲಿ 30 ಅಡಿ ಎತ್ತರದಲ್ಲಿ, 16 ಅಡಿ ಉದ್ದದ ರೆಕ್ಕೆಗಳುಳ್ಳ ಗಾಳಿಗಿರಣಿಗಳನ್ನು ಸ್ಥಾಪಿಸಲಾಗಿತ್ತು. ರೆಕ್ಕೆಗಳ ಆವರ್ತನಗಳು ಕಾಳನ್ನು ಹಿಟ್ಟಾಗಿಸುವ, ಬಟ್ಟೆ, ಪಾತ್ರೆ ತೊಳೆಯಲು ಅಥವಾ ನೀರೆತ್ತಲು, ಹರಿಸಲು ಯಾಂತ್ರಿಕ ಶಕ್ತಿಯಾಗುತ್ತಿದ್ದವು. ನಮ್ಮ ಪರಂಪರೆಯಲ್ಲಿ ಕಾಳಿನಿಂದ ಹೊಟ್ಟು ಬೇರ್ಪಡಿಸಲು ಕೇರುವುದು, ತೂರುವುದು ರೂಢಿಗತವಾಗಿದೆ.

2007ರಲ್ಲಿ 'ಯುರೋಪಿಯನ್ ವಿಂಡ್ ಪವರ್ ಅಸೋಸಿಯೇಷನ್' ಪ್ರತಿವರ್ಷ ಜೂನ್ 15ನ್ನು 'ಜಾಗತಿಕ ವಾಯುಶಕ್ತಿ ದಿನ' ಎಂದು ಸಾರಿತು. ವಾಯುಶಕ್ತಿಯ ಸಾಮರ್ಥ್ಯ ಮಾಪನ ಮತ್ತು ಅದರ ಶಕ್ತಿ ಉತ್ಪಾದಕ ವ್ಯವಸ್ಥೆಯನ್ನು ಪುನರ್ ರೂಪಿಸುವ ಸಾಧ್ಯತೆಗಳ ಮರುಶೋಧ, ಇಂಗಾಲಮುಕ್ತ ಅರ್ಥವ್ಯವಸ್ಥೆ, ಉದ್ಯೋಗಾವಕಾಶಗಳ ಕುರಿತ ಚರ್ಚೆ ಆಚರಣೆಯ ಉದ್ದೇಶ. 1951ರಲ್ಲೇ ಭಾರತದಲ್ಲಿ ಗಾಳಿಗಿರಣಿಗಳ ಸ್ಥಾಪನೆ ಆರಂಭಗೊಂಡಿತು. ಕಳೆದ ಫೆಬ್ರುವರಿ ತಿಂಗಳ ಕೊನೆಗೆ ದಾಖಲಾದ ವಾಯುಶಕ್ತಿ ಉತ್ಪಾದನೆಯ ಪ್ರಮಾಣ 39,000 ಮೆಗಾವಾಟ್. ಜಗತ್ತಿನಲ್ಲೇ ಭಾರತ ನಾಲ್ಕನೇ ಸ್ಥಾನದಲ್ಲಿದೆ. ಕರ್ನಾಟಕದಲ್ಲಿ ಚಿತ್ರದುರ್ಗ, ಗದಗ, ಚಿಕ್ಕಮಗಳೂರು ಜಿಲ್ಲೆಗಳು ಈ ದಿಸೆಯಲ್ಲಿ ಹೆಚ್ಚು ಪ್ರಗತಿ ಸಾಧಿಸಿವೆ.

ಗಾಳಿಗಿರಣಿಗಳ ಯೋಜನೆ ಅಕ್ಷರಶಃ ಪರಿಸರಸ್ನೇಹಿ. ಬೆಟ್ಟ, ಗುಡ್ಡಗಳನ್ನು ನೆಲಸಮ ಮಾಡಬೇಕಿಲ್ಲ, ಮರಗಳನ್ನು ಉರುಳಿಸಬೇಕಿಲ್ಲ, ಸಮುದಾಯಗಳನ್ನು ಗುಳೆಯೆಬ್ಬಿಸುವ ಅಗತ್ಯವಿಲ್ಲ, ಗಾಳಿಗೆ ಕಾಸು ತೆರಬೇಕಿಲ್ಲ. ಪೆಟ್ರೋಲ್, ಡೀಸೆಲ್, ಅನಿಲದ ಏರುಬೆಲೆಗಳನ್ನು ಶಪಿಸುವ ಬದಲು ಸರಳವೂ ಸರಾಗವೂ ಆದ ಮಾರುತ ಶಕ್ತಿಯ ಉತ್ಪಾದನೆಗೆ ಮತ್ತೂ ಹೆಚ್ಚು ಕಾಳಜಿಯಿಂದ ಮುಂದಾಗುವುದು ಜಾಣತನ.

ಗಾಳಿಗಿರಣಿಯ ರೆಕ್ಕೆಗಳು ವಿದ್ಯುತ್ ಉತ್ಪಾದಿಸುವ ಎಂಜಿನ್ನಿನ ತಿರುಬಾನಿಯನ್ನು ಚಾಲೂಗೊಳಿಸುತ್ತವೆ. ವೇಗದಲ್ಲಿ ಬೀಸುವ ಗಾಳಿಯಿಂದ ಒಂದು ಅಶ್ವಶಕ್ತಿಯಷ್ಟು ವಿದ್ಯುಚ್ಛಕ್ತಿ ಉತ್ಪಾದಿಸಬಹುದು. ಇಷ್ಟಾದರೂ ವಾಯುಶಕ್ತಿ ನೆಚ್ಚುವಲ್ಲಿ ಎರಡು ವಿವಾದಾತ್ಮಕ ಸಂಗತಿಗಳಿವೆ. ರೆಕ್ಕೆಗಳಿಗೆ ಪಕ್ಷಿಗಳು, ಬಾವಲಿಗಳು ಆಕಸ್ಮಿಕವಾಗಿ ಸಿಕ್ಕಿ ಮೃತಪಡುವುದು. ಇನ್ನೊಂದು, ತಿರುಬಾನಿಗಳ ಸದ್ದು.

ಅಂದಹಾಗೆ ವಾಯುಶಕ್ತಿಯು ಗಾಳಿಯ ರಭಸವನ್ನು ಅವಲಂಬಿಸುವುದರಿಂದ ಬಿಟ್ಟು ಬಿಟ್ಟು ಅದು ಒದಗುತ್ತದೆ. ಆದ್ದರಿಂದ ನಿರಂತರ ವಿದ್ಯುತ್ ಉತ್ಪಾದನೆಗೆ ಈ ನ್ಯೂನತೆ ತುಂಬಲು ಇನ್ನೊಂದು ಶಕ್ತಿ ಮೂಲದ ಅಗತ್ಯವಿದೆ.

ಗಾಳಿ ಬಿರುಸಾಗಿ ಬೀಸಿ ಕಾಡು ಉರಿಸೀತು, ಮೆಲ್ಲಗೆ ಬೀಸಿ ದೀಪ ಆರಿಸೀತು ಕೂಡ. ಅದನ್ನು ಮಣಿಸುವುದು ನಮ್ಮ ವಿವೇಕಕ್ಕೆ ಬಿಟ್ಟಿದೆ. ಒಂದು ಅರ್ಥದಲ್ಲಿ ವಾಯುಶಕ್ತಿ ಆಚಂದ್ರಾರ್ಕವಾಗಿ ಸಿಗುವಂಥದ್ದು.

ವಾಚಕರ ವಾಣಿ

ಉತ್ತಮ ಶೈಕ್ಷಣಿಕ ವಾತಾವರಣ ಸೃಷ್ಟಿಯಾಗಲಿ

'ಪರಿಷ್ಕೃತ ಪಠ್ಯದ ಕುರಿತು ಸಾರ್ವಜನಿಕರಿಂದ ಆಕ್ಷೇಪ ಆಹ್ವಾನಿಸುವುದು ಜೇನುಗೂಡಿಗೆ ಕಲ್ಲೆಸೆದಂತೆ' ಎಂಬ ಡಾ. ರಾಜಪ್ಪ ದಳವಾಯಿ ಅವರ ಲೇಖನ (ಪ್ರ.ವಾ., ಚರ್ಚೆ, ಜೂನ್ 11) ಓದಿದೆ. ಇವರಿಗೆ ಮಕ್ಕಳ ಬಗ್ಗೆ, ಅವರ ವ್ಯಕ್ತಿತ್ವದ ಬಗ್ಗೆ, ಭವಿಷ್ಯದ ಬಗ್ಗೆ ಇರುವ ಕಾಳಜಿ ಎಷ್ಟೊಂದು ಅಪಾರವಾಗಿದೆ- ಮಕ್ಕಳ ಭವಿಷ್ಯ, ವಿಕಾಸದ ಬಗ್ಗೆ ಹೇಳುತ್ತಲೇ ಸಮಾಜದ ಮನಃಸ್ಥಿತಿಯನ್ನೂ ತಿಳಿಸಿ ಹೇಳುತ್ತಾ, ಜೊತೆಗೆ ಸರ್ಕಾರಕ್ಕೂ ರಾಜಕೀಯ ಪಕ್ಷಗಳಿಗೂ ಬಹಳ ಸೂಕ್ಷ್ಮವಾಗಿ (ತಂದೆ, ತಾಯಿ, ಶಿಕ್ಷಕರು ಮಕ್ಕಳಿಗೆ ಮೆಲ್ಲಗೆ ಕಿವಿ ಹಿಂಡಿ ಬುದ್ಧಿ ಹೇಳುವಂತೆ) ಕಿವಿಮಾತು ಹೇಳಿರುವುದು ಶ್ಲಾಘನೀಯ.

ಎಂಥಾ ಪೆದ್ದನಿಗಾದರೂ ಪಠ್ಯಪುಸ್ತಕ ಹೇಗಿರಬೇಕು ಎಂಬುದು ಈ ಲೇಖನ ಓದುತ್ತಿದ್ದಂತೆ ತಿಳಿಯುತ್ತದೆ. ಇಂಥಾ ಬರಹ ನೀಡಿ ಸಮಾಜವನ್ನು ತಮ್ಮಂತಹ ಪ್ರಾಧ್ಯಾಪಕರು ಓದುಗರ ಜೊತೆಗೆ ಸಮಾಜವನ್ನೂ ತಿದ್ದುತ್ತಿದ್ದರೆ ತಮ್ಮ ತಮ್ಮ ತಪ್ಪು, ಸರಿಗಳನ್ನು ತಿದ್ದಿಕೊಂಡು ಉತ್ತಮ ಪ್ರಜೆ ಆಗಬಲ್ಲರೆಂಬುದರಲ್ಲಿ ಅನುಮಾನವೇ ಇಲ್ಲ. ಈ ಮೂಲಕ ನಾನೂ ತಮ್ಮ ಜೊತೆ ಸರ್ಕಾರವನ್ನು ಬೇಡಿಕೊಳ್ಳುವುದು ಇಷ್ಟೆ. ಉತ್ತಮ ಶೈಕ್ಷಣಿಕ ವಾತಾವರಣವನ್ನು ಕರ್ನಾಟಕದಲ್ಲಿ ನಿರ್ಮಾಣ ಮಾಡಬೇಕಾಗಿದೆ. ಇದು ಸರ್ಕಾರದ ಆದ್ಯತೆಯಾಗಬೇಕಾಗಿದೆ.

ಬಿ.ಜಯಶ್ರೀ, ಬೆಂಗಳೂರು

ಸರ್ಕಾರಿ ಶಾಲೆ: ಅನುಕರಣೀಯ ಕ್ರಮ

ಸರ್ಕಾರಿ ಶಾಲೆಗಳ ಅಭಿವೃದ್ಧಿ 'ಚಳವಳಿ ರೂಪ' ಪಡೆಯಬೇಕು ಎಂದು ಪಿ.ಇ.ಎಸ್. ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್.ದೊರೆಸ್ವಾಮಿ ಅವರು ಹೇಳಿರುವುದು ಮತ್ತು ಸರ್ಕಾರಿ ಶಾಲೆಯಲ್ಲಿ ಓದಿದ, ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಬೆಂಗಳೂರಿನ ಬಂಡೇಪಾಳ್ಯ ಠಾಣೆ ಪೊಲೀಸರು ಪೂರಕ ಪರೀಕ್ಷೆಯ ತರಬೇತಿಗೆ ವ್ಯವಸ್ಥೆ ಮಾಡಿರುವುದು ವರದಿಯಾಗಿದೆ (ಪ್ರ.ವಾ., ಜೂನ್ 13). ಇವೆರಡೂ ಅನುಕರಣಾರ್ಹವಾದ ಕ್ರಮಗಳಾಗಿವೆ.

ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಮಕ್ಕಳ ಬಗ್ಗೆ ಮಾತ್ರ ಗಮನಹರಿಸುವ ಜನರ ಮಧ್ಯೆ, ಅನುತ್ತೀರ್ಣರಾದ ಮಕ್ಕಳ ಬಗ್ಗೆ ಕಾಳಜಿ ತೋರುವುದು ಶ್ಲಾಘನೀಯವಾದುದು. ಕೊಡುಗೈ ದಾನಿಗಳು ಸಮಾಜದಲ್ಲಿ ಬಹಳಷ್ಟು ಮಂದಿ ಇದ್ದಾರೆ. ಅಂಥವರಿಂದ ದಾನ ಪಡೆದು ಶಾಲೆಯನ್ನು ಅಭಿವೃದ್ಧಿಪಡಿಸುವ ಇಚ್ಛಾಶಕ್ತಿ ಶಾಲೆಯ ಮುಖ್ಯೋಪಾಧ್ಯಾಯರಲ್ಲಿ ಇರಬೇಕು. ಸರ್ಕಾರಿ ಶಾಲೆ ಸರ್ಕಾರದ್ದು ಮಾತ್ರವಲ್ಲ, ಅದು ಶಿಕ್ಷಕರದ್ದೂ ಹೌದು, ಸಾರ್ವಜನಿಕರದ್ದೂ ಹೌದು ಎಂಬ ತಿಳಿವಳಿಕೆ ಶಿಕ್ಷಕರು ಮತ್ತು ಜನರಲ್ಲಿ ಮೂಡಿದಾಗ ಸರ್ಕಾರಿ ಶಾಲೆಗಳ ಅಭಿವೃದ್ಧಿ ಸುಲಭವಾಗುತ್ತದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ರೈಲು ನಿಲ್ದಾಣಗಳಲ್ಲಿ ತಾರತಮ್ಯ ಬೇಡ

ನಗರ ರೈಲ್ವೆ ಹಾಗೂ ಮೆಟ್ರೊ ರೈಲು ನಿಲ್ದಾಣಗಳಲ್ಲಿ ಮಾತ್ರ ಎಸ್ಕಲೇಟರ್ ಹಾಗೂ ಲಿಫ್ಟ್ ವ್ಯವಸ್ಥೆ ಇದೆ. ಆದರೆ ನಗರವನ್ನು ದಾಟಿದ ನಂತರ ಬಹುಪಾಲು ರೈಲು ನಿಲ್ದಾಣಗಳಲ್ಲಿ ಈ ವ್ಯವಸ್ಥೆ ಇಲ್ಲ. ಇದರಿಂದ ವೃದ್ಧರು, ಮಕ್ಕಳು ಹಾಗೂ ದೈಹಿಕವಾಗಿ ಆಶಕ್ತ ನಾಗರಿಕರು ಪ್ಲಾಟ್‌ಫಾರ್ಮ್‌ಗಳನ್ನು ದಾಟುವುದು ಪ್ರಯಾಸವಾಗುತ್ತದೆ. ರೈಲ್ವೆ ಇಲಾಖೆಯು ನಿಲ್ದಾಣಗಳಲ್ಲಿ ಮೂಲ ಸೌಕರ್ಯ ಒದಗಿಸುವಾಗ ಚಿಕ್ಕ- ದೊಡ್ಡ ನಿಲ್ದಾಣ ಎಂಬ ತಾರತಮ್ಯ ಧೋರಣೆ ಬದಲಾಗಬೇಕಾಗಿದೆ. ಬೆಂಗಳೂರು- ಮೈಸೂರು ನಡುವೆ ಸಹ ಯಾವುದೇ ರೈಲು ನಿಲ್ದಾಣದಲ್ಲಿ ಎಸ್ಕಲೇಟರ್ ವ್ಯವಸ್ಥೆ ಇಲ್ಲ. ಕೆಂಗೇರಿ ರೈಲು ನಿಲ್ದಾಣದಲ್ಲಿ ಕೆಲವರು ಸ್ಕೈವಾಕ್ ಬಳಸಿದರೆ ಮತ್ತೆ ಕೆಲವರು ನೇರವಾಗಿ ಹಳಿಯನ್ನೇ ದಾಟುತ್ತಾರೆ. ನಿತ್ಯವೂ ಪ್ರಯಾಣಿಸುವವರು ಹಳಿಯ ಪಕ್ಕದಲ್ಲಿಯೇ ಕಲ್ಲುಗಳನ್ನು ಜೋಡಿಸಿಟ್ಟುಕೊಂಡು ಎತ್ತರಿಸಿದ ಜಾಗದಿಂದ ಒಂದು ಪ್ಲಾಟ್‌ಫಾರ್ಮ್‌ನಿಂದ ಮತ್ತೊಂದಕ್ಕೆ ಜಿಗಿಯುವ ಅಭ್ಯಾಸವಿದೆ. ಇದು ಸುರಕ್ಷಿತವಲ್ಲದ ನಡೆ.

ಸುರಕ್ಷತೆಯ ದೃಷ್ಟಿಯಿಂದ ಹಾಗೂ ಜನರು ಸುಲಭವಾಗಿ ಪ್ಲಾಟ್‌ಫಾರ್ಮ್ ಉಪಯೋಗಿಸುವಂತೆ ಆಗಲು ಪ್ರತೀ ನಿಲ್ದಾಣದಲ್ಲೂ ಎಸ್ಕಲೇಟರ್ ಅಥವಾ ಲಿಫ್ಟ್ ವ್ಯವಸ್ಥೆ ಕಲ್ಪಿಸಬೇಕಾಗಿದೆ.

ಡಾ. ಜಿ.ಬೈರೇಗೌಡ, ಬೆಂಗಳೂರು

ರಾಷ್ಟ್ರಪತಿ ಆಯ್ಕೆ: ದೂರದೃಷ್ಟಿಯ ನಿಲುವಿರಲಿ

ಭಾರತದ ರಾಷ್ಟ್ರಪತಿ ಅವರನ್ನು ಪ್ರಥಮ ಪ್ರಜೆ ಎನ್ನುವುದುಂಟು. ಆದರೆ ಅವರ ಆಯ್ಕೆಯಲ್ಲಿ ಸಾಮಾನ್ಯ ಪ್ರಜೆಯ ನೇರ ಪಾತ್ರ ಇಲ್ಲ. ಈಗ ಆ ಸ್ಥಾನದಲ್ಲಿ ಇರುವವರನ್ನು ನೋಡಿದರೆ ನೆನಪಾಗುವವರು ಫಕ್ರುದ್ದೀನ್ ಅಲಿ ಅಹಮದ್. ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದ್ದ, ಅಸ್ಸಾಂನ ಅಡ್ವೊಕೇಟ್ ಜನರಲ್ ಕೂಡ ಆಗಿದ್ದ ಅವರು ತುರ್ತು ಪರಿಸ್ಥಿತಿ ಘೋಷಣೆಗೆ ಸುಲಭವಾಗಿ ಸಹಿ ಹಾಕಿದ್ದರಿಂದ ಕುಪ್ರಸಿದ್ಧರಾದರು. ತುರ್ಕ್‌ಮನ್ ಗೇಟ್ ಹಿಂಸಾಚಾರದಿಂದ ವಿಚಲಿತರಾದರೂ ಅಸಹಾಯಕರಾದರು. ಈಗಿನ ರಾಷ್ಟ್ರಪತಿ ಅವರ ಅರ್ಹತಾ ಹಿನ್ನೆಲೆ ಫಕ್ರುದ್ದೀನರಷ್ಟು ಇರಲಿಲ್ಲ. ಹೆಸರು ಸೂಚಿತವಾದಾಗ 'ಯಾರಪ್ಪ ಇವರು?' ಎಂದು ಜನ ಅನ್ವೇಷಿಸಬೇಕಾಯಿತು. ಇಲ್ಲಿಯವರೆಗೆ ಕೇಂದ್ರ ಸಂಪುಟದ ಯಾವುದೇ ತೀರ್ಮಾನವನ್ನು ಇವರು ಮರುಪರಿಶೀಲಿಸಲು ಹೇಳಿದ ಪ್ರಸಂಗ ಇಲ್ಲ. ಸಿಎಎ, ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ರದ್ದತಿಯಂತಹವು ಅತಿ ಶೀಘ್ರದಲ್ಲಿ ಸ್ವೀಕೃತಿ ಪಡೆದವು. ಉತ್ತರದಾಯಿತ್ವ ಎಂಬುದು ಇದ್ದರೆ ಜನರಿಗೆ ತಮ್ಮ ಸಾಧನೆಗಳ ಬಗೆಗೆ ಈಗಲಾದರೂ ತಿಳಿಸಬಹುದಲ್ಲ?

ಆಳುವ ಹಾಗೂ ಪ್ರತಿಪಕ್ಷಗಳವರು ಅಭ್ಯರ್ಥಿ ಆಯ್ಕೆ ಬಗೆಗಿನ ಕಸರತ್ತು ಆರಂಭಿಸಿದ್ದಾರೆ. ವಿ.ವಿ.ಗಿರಿ, ವೆಂಕಟರಾಮನ್, ಪ್ರಣವ್ ಮುಖರ್ಜಿ ಅಂತಹವರು ಇದ್ದಂತಹ ಈ ಸಾಂವಿಧಾನಿಕ ಪದವಿಗೆ ಯಾರೋ ಒಬ್ಬರನ್ನು ಜಾತಿ, ಅನುಕೂಲಕರ ಸ್ವಭಾವದವರು ಇತ್ಯಾದಿ ಪರಿಗಣನೆಗಳಿಂದ ಸೂಚಿಸಿದರೆ ದೇಶದ ಹಿತ ಕಾಯ್ದಂತೆ ಆಗುವುದಿಲ್ಲ. 'ಪ್ರಧಾನ ಸೇವಕ'ರ ಕಚೇರಿ ಅತ್ಯಂತ ಬಲಿಷ್ಠವಾಗಿರುವ ದಿನಗಳು ಮುಂದುವರಿಯಲಿವೆ. ಸರ್ಕಾರದ ಕ್ರಮಗಳ ಬಗೆಗೆ ನಿಯೋಗದಲ್ಲಿ ಹೋಗಿ ಮನವಿಪತ್ರ ಸಲ್ಲಿಸಿದರೆ ಪರಿಶೀಲಿಸುವ ಸೌಜನ್ಯವನ್ನಾದರೂ ತೋರಬಲ್ಲ ವ್ಯಕ್ತಿ ಆ ಹುದ್ದೆಯಲ್ಲಿ ಇರಬೇಕಾಗುತ್ತದೆ. ಸರ್ವಾನುಮತದ ಅಭ್ಯರ್ಥಿ ಕೂಡ ತಪ್ಪು ನಿರ್ಧಾರ ಕೈಗೊಂಡ ನಿದರ್ಶನವೂ ಇದೆ. ಒಟ್ಟಿನಲ್ಲಿ ರಾಜಕೀಯ ಪಕ್ಷಗಳು ಈ ವಿಷಯದಲ್ಲಿ ದೂರದೃಷ್ಟಿಯ ನಿಲುವು ತಾಳುವುದು ಅತ್ಯಗತ್ಯ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವಾಹನ ಮಾರಾಟ ಆಮೆಗತಿ

ಪ್ರಜಾವಾಣಿ ವಾರ್ತೆ

ಕೋವಿಡ್ ಸಾಂಕ್ರಾಮಿಕವು ತೀವ್ರವಾಗಿದ್ದ ಕಾಲಕ್ಕೆ ಹೋಲಿಸಿದರೆ, ದೇಶದಲ್ಲಿ ಈಗ ವಾಹನಗಳ ಮಾರಾಟ ಹೆಚ್ಚಾಗಿದೆ. ಆದರೆ, ಕೋವಿಡ್‌ಗಿಂತಲೂ ಹಿಂದಿನ ಅವಧಿಗೆ ಹೋಲಿಸಿದರೆ, ದೇಶದಲ್ಲಿ ವಾಹನ ಮಾರಾಟ ಇನ್ನೂ ಚೇತರಿಸಿಕೊಂಡಿಲ್ಲ ಎನ್ನುತ್ತವೆ ವಾಹನ ಚಿಲ್ಲರೆ ಮಾರಾಟ ದತ್ತಾಂಶಗಳು. ಈಚಿನ ತಿಂಗಳಲ್ಲಿ ಈ ಚೇತರಿಕೆಯ ಪ್ರಮಾಣವೂ ಕುಸಿಯುತ್ತಿದೆ. ಇಂಧನ ಬೆಲೆಯಲ್ಲಿನ ಏರಿಕೆ, ಥರ್ಡ್ ಪಾರ್ಟಿ ವಿಮಾ ಕಂತಿನಲ್ಲಿ ಆದ ಏರಿಕೆ ವಾಹನ ಮಾರಾಟದ ಚೇತರಿಕೆಯನ್ನು ಮುಂದೂಡಬಹುದು ಎಂಬ ಆತಂಕ ವ್ಯಕ್ತವಾಗಿದೆ.

‘2022ರಲ್ಲಿ ವಾಹನ ಮಾರಾಟದಲ್ಲಿ ಆಗುತ್ತಿರುವ ಬದಲಾವಣೆಯನ್ನು 2020 ಮತ್ತು 2021ರಲ್ಲಿ ಆದ ವಾಹನ ಮಾರಾಟದೊಂದಿಗೆ ಹೋಲಿಸಿ ನೋಡಬಾರದು. ಆ ಎರಡೂ ವರ್ಷಗಳಲ್ಲಿ ಕೋವಿಡ್ ಇದ್ದ ಕಾರಣ. ವಾಹನಗಳ ಮಾರಾಟ ಕುಸಿದಿತ್ತು. ಆ ಎರಡು ವರ್ಷಗಳಿಗೆ ಹೋಲಿಸಿದರೆ, 2022ರಲ್ಲಿ ವಾಹನ ಮಾರಾಟ ಭಾರಿ ಪ್ರಮಾಣದ ಏರಿಕೆ ಕಂಡಿದೆ. ಆದರೆ, ಈ ಹೋಲಿಕೆ ವೈಜ್ಞಾನಿಕವಲ್ಲ. ಹೀಗಾಗಿ 2019ರಲ್ಲಿ ಇದ್ದ ಸ್ಥಿತಿಗೆ ಈಗಿನ ಮಾರಾಟ ದತ್ತಾಂಶಗಳನ್ನು ಹೋಲಿಸಿ ನೋಡಬೇಕಾಗಿದೆ. 2019ರಲ್ಲಿ ಇದ್ದ ಸ್ಥಿತಿಗೆ 2022ರಲ್ಲಿ ವಾಹನ ಮಾರಾಟ ಇನ್ನೂ ತಲುಪಿಲ್ಲ ಎಂಬುದನ್ನು ಈ ದತ್ತಾಂಶಗಳು ಹೇಳುತ್ತವೆ’ ಎಂದು ಆಟೊಮೊಬೈಲ್ ಮಾರಾಟಗಾರರ ಸಂಘಟನೆಗಳ ಒಕ್ಕೂಟ (ಫಾಡಾ) ಹೇಳಿದೆ.

ದೇಶದ ಆರ್ಥಿಕತೆಯ ಬೇರೆಲ್ಲಾ ವಲಯಗಳು ಕೋವಿಡ್‌ಗಿಂತಲೂ ಹಿಂದೆ ಇದ್ದ ಸ್ಥಿತಿಗೆ ಮರಳಿವೆ. ದೇಶದ ತಲಾ ಆದಾಯ ಏರಿಕೆಯಾಗಿದೆ. ದೇಶದ ತಯಾರಿಕಾ ವಲಯದ ಒಟ್ಟು ಉತ್ಪಾದನೆ ಏರಿಕೆಯಾಗಿದೆ. ಆದರೆ ವಾಹನ ಕ್ಷೇತ್ರ ಮಾತ್ರ ಚೇತರಿಕೆ ಕಂಡಿಲ್ಲ. ಇದರ ಜತೆಯಲ್ಲಿ ಇಂಧನ ಬಳಕೆ ಪ್ರಮಾಣವೂ ಈಚಿನ ತಿಂಗಳಲ್ಲಿ ಕುಸಿದಿದೆ.

ಮಾರಾಟವಾದ ವಾಹನಗಳ ಸಂಖ್ಯೆ (ಲಕ್ಷಗಳಲ್ಲಿ)



● 2019ರ ಏಪ್ರಿಲ್‌ನಲ್ಲಿ ಮಾರಾಟವಾಗಿದ್ದ ವಾಹನಗಳ ಸಂಖ್ಯೆಗೆ ಹೋಲಿಸಿದರೆ, 2022ರ ಏಪ್ರಿಲ್‌ನಲ್ಲಿ ಮಾರಾಟವಾದ ವಾಹನಗಳ ಸಂಖ್ಯೆಯಲ್ಲಿ ಶೇ 6.39ರಷ್ಟು ಇಳಿಕೆಯಾಗಿದೆ. 2022ರ ಏಪ್ರಿಲ್‌ನಲ್ಲಿ ವಾಹನ ಮಾರಾಟವು 2019ರ ಏಪ್ರಿಲ್‌ನಲ್ಲಿನ ಮಾರಾಟದ ಶೇ 93.61ರಷ್ಟರ ಮಟ್ಟವನ್ನು ಮುಟ್ಟಿತ್ತು

● 2019ರ ಮೇನಲ್ಲಿ ಮಾರಾಟವಾಗಿದ್ದ ವಾಹನಗಳ ಸಂಖ್ಯೆಗೆ ಹೋಲಿಸಿದರೆ, 2022ರ ಮೇನಲ್ಲಿ ಮಾರಾಟವಾದ ವಾಹನಗಳ ಪ್ರಮಾಣ ಶೇ 9.66ರಷ್ಟು ಇಳಿಕೆಯಾಗಿದೆ

● 2022ರ ಏಪ್ರಿಲ್‌ನಲ್ಲಿ ವಾಹನ ಮಾರಾಟ ಇಳಿಕೆ ಪ್ರಮಾಣವು ಶೇ 6.39ರಷ್ಟು ಇತ್ತು. ಆದರೆ, 2022ರ ಮೇನಲ್ಲಿ ವಾಹನ ಮಾರಾಟ ಇಳಿಕೆ ಪ್ರಮಾಣವು ಶೇ 9.66ರಷ್ಟಕ್ಕೆ ಏರಿದೆ. ಜನರು ವಾಹನಗಳನ್ನು ಖರೀದಿಸಲು ಹಿಂದೇಟು ಹಾಕುತ್ತಿರುವುದನ್ನು ಇದು ಸೂಚಿಸುತ್ತದೆ

ಇ.ವಿ. ಮಾರಾಟ ಶೇ 19.5ರಷ್ಟು ಇಳಿಕೆ



ಬ್ಯಾಟರಿಚಾಲಿತ ದ್ವಿಚಕ್ರವಾಹನಗಳ (ಇ.ವಿ) ಮಾರುಕಟ್ಟೆಯು ನಿಧಾನವಾಗಿ ವಿಸ್ತರಿಸುವ ಸಾಧ್ಯತೆ ಇತ್ತು. ಆದರೆ, ಬೇಸಿಗೆಯ ಅವಧಿಯಲ್ಲಿ ದೇಶದ ವಿವಿಧ ಕಡೆ ಸುಮಾರು 40ಕ್ಕೂ ಹೆಚ್ಚು ಇ.ವಿ.ಗಳು ಬೆಂಕಿಗಾಹುತಿಯಾದವು. ಇದು ಇ.ವಿಗಳ ಬಗ್ಗೆ ಜನರ ಆಲೋಚನೆ ಬದಲಾಗಲು ಕಾರಣವಾಯಿತು. ಪರಿಣಾಮ, ಇ.ವಿಗಳ ಮಾರಾಟಕ್ಕೆ ಭಾರಿ ಹಿನ್ನಡೆಯಾಯಿತು. ಏಪ್ರಿಲ್ ತಿಂಗಳ ಇ.ವಿ. ಮಾರಾಟಕ್ಕೆ ಹೋಲಿಸಿದರೆ, ಮೇ ತಿಂಗಳಲ್ಲಿ ವಾಹನಗಳ ಮಾರಾಟ ಸುಮಾರು 9 ಸಾವಿರದಷ್ಟು ಕಡಿಮೆಯಾಯಿತು. ಅಂದರೆ ಒಂದೇ ತಿಂಗಳ ಅವಧಿಯಲ್ಲಿ ಇವುಗಳ ಮಾರಾಟದಲ್ಲಿ ಶೇ 19.5ರಷ್ಟು ಕುಸಿತ ಕಂಡುಬಂದಿದೆ ಎಂದು ಫಾಡಾ ದತ್ತಾಂಶಗಳು ಹೇಳುತ್ತವೆ.

ಮಾರುಕಟ್ಟೆ ಪಾಲು ಇಳಿಕೆ: ದ್ವಿಚಕ್ರ ವಾಹನ ಮಾರುಕಟ್ಟೆಯಲ್ಲಿ ಇ.ವಿಗಳ ಪಾಲು ಚಿಕ್ಕದು. ಸಾಕಷ್ಟು ಪ್ರಚಾರ ಹಾಗೂ ಜಾಗೃತಿಯಿಂದಾಗಿ, ಮಾರುಕಟ್ಟೆ ವಿಸ್ತರಣೆಯಾಗುವ ನಿರೀಕ್ಷೆ ಮೂಡಿತ್ತು. ಆದರೆ ಇ.ವಿಗಳಿಗೆ ಬೆಂಕಿ ಹೊತ್ತಿಕೊಳ್ಳುವ ಘಟನೆಗಳು ವರದಿಯಾದ ಬಳಿಕ ಅವುಗಳ ಮಾರಾಟ ಕುಸಿಯಿತು. ಮಾರುಕಟ್ಟೆಯಲ್ಲಿ ಅವುಗಳ ಪಾಲೂ ಕಡಿತಗೊಂಡಿತು. ಮಾರ್ಚ್ ತಿಂಗಳಲ್ಲಿ ಶೇ 4.12ರಷ್ಟಿದ್ದ ಇ.ವಿ. ಪಾಲು ಏಪ್ರಿಲ್ ಹೊತ್ತಿಗೆ ಶೇ 3.77ಕ್ಕೆ ಕುಸಿಯಿತು. ಮೇ ತಿಂಗಳಲ್ಲಿ ಅದು ಶೇ 3.13ಕ್ಕೆ ಬಂದು ನಿಂತಿದೆ.

ಎಲ್ಲಾ ವರ್ಗದ ವಾಹನಗಳ ಮಾರಾಟ ಇಳಿಕೆ

■ 2019 ಮೇ ■ 2022 ಮೇ



ದ್ವಿಚಕ್ರ ವಾಹನ

13.9% ಇಳಿಕೆ ಪ್ರಮಾಣ

2019ರ ಮೇಗೆ ಹೋಲಿಸಿದರೆ, 2022ರ ಮೇ ತಿಂಗಳಿನಲ್ಲಿ ಮಾರಾಟವಾದ ದ್ವಿಚಕ್ರವಾಹನಗಳ ಸಂಖ್ಯೆಯಲ್ಲಿ 1.97 ಲಕ್ಷದಷ್ಟು ಕಡಿಮೆಯಾಗಿದೆ. ದ್ವಿಚಕ್ರ ವಾಹನಗಳ ಥರ್ಡ್ ಪಾರ್ಟಿ ವಿಮಾ ಕಂತಿನ ಏರಿಕೆಯು, ಬೇರೆಲ್ಲಾ ವರ್ಗದ ವಾಹನಗಳ ಥರ್ಡ್ ಪಾರ್ಟಿವಿಮೆಯಲ್ಲಿನ ಏರಿಕೆಗಿಂತ ಅಧಿಕವಾಗಿತ್ತು. ವಾಹನದ ಆನ್‌ರೋಡ್ ಬೆಲೆಯಲ್ಲಿ ಇದರಿಂದ ಏರಿಕೆಯಾಗಿದೆ. ವಾಹನವನ್ನು ಖರೀದಿಸಬೇಕು ಎಂದು ನಿರ್ಧರಿಸುವಲ್ಲಿ, ಗ್ರಾಹಕರು ಹಿಂದೇಟು ಹಾಕಲು ಈ ಅಂಶವೂ ಕಾರಣವಾಗಿದೆ ಎಂದು ಫಾಡಾ ತನ್ನ ವರದಿಯಲ್ಲಿ ಹೇಳಿದೆ.

ಇದರ ಜತೆಯಲ್ಲಿ ಹೆಚ್ಚುತ್ತಿರುವ ಇಂಧನದ ಬೆಲೆಯೂ, ಗ್ರಾಹಕರು ದ್ವಿಚಕ್ರ ವಾಹನಗಳಿಂದ ದೂರ ಇರುವಂತೆ ಮಾಡಿದೆ. ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳ (ಇ.ವಿ) ಮಾರಾಟ ಏರಿಕೆಯಾಗಬೇಕಿತ್ತು. ಆದರೆ, ಇ.ವಿಗಳ ಮಾರಾಟವೂ ಕುಸಿದಿದೆ. ಒಟ್ಟಾರೆಯಾಗಿ, ಗ್ರಾಹಕರು ದ್ವಿಚಕ್ರ ವಾಹನ ಖರೀದಿಗೆ ಹಿಂದೇಟು ಹಾಕುತ್ತಿರುವುದನ್ನು ಈ ದತ್ತಾಂಶಗಳು ಸೂಚಿಸುತ್ತವೆ.

ಆಟೊ

19.3% ಇಳಿಕೆ ಪ್ರಮಾಣ



ಆಟೊಗಳ ಮಾರಾಟವು ಗರಿಷ್ಠ ಪ್ರಮಾಣದ ಕುಸಿತ ಕಂಡಿದೆ. 2019ರ ಮೇಗೆ ಹೋಲಿಸಿದರೆ, 2022ರ ಮೇನಲ್ಲಿ ಮಾರಾಟವಾದ ಆಟೊಗಳ ಸಂಖ್ಯೆಯಲ್ಲಿ ಒಟ್ಟು 9,938ರಷ್ಟು ಇಳಿಕೆಯಾಗಿದೆ. ಪ್ರಮಾಣವಾರು ಇಳಿಕೆಯಲ್ಲಿ ಇದು ಶೇ 19.32ರಷ್ಟಾಗುತ್ತದೆ. ಇದು ಎಲ್ಲಾ ವರ್ಗದ ವಾಹನಗಳಿಗೆ ಹೋಲಿಸಿದರೆ, ಗರಿಷ್ಠ ಪ್ರಮಾಣದ ಇಳಿಕೆಯಾಗಿದೆ. ಆಟೊಗಳಲ್ಲಿ ಬಳಸುವ ಎಲ್‌ಪಿಜಿ ಮತ್ತು ಡೀಸೆಲ್‌ನ ಬೆಲೆಯಲ್ಲಿ ವಿಪರೀತ ಪ್ರಮಾಣದ ಏರಿಕೆಯಾಗಿರುವ ಕಾರಣ, ಆಟೊಗಳ ಖರೀದಿಗೆ ಹೆಚ್ಚು ಒಲವು ವ್ಯಕ್ತವಾಗಿಲ್ಲ. ಇವೆಲ್ಲವೂ ಆಟೊಗಳ ಮಾರಾಟವನ್ನು ಬಾಧಿಸುತ್ತಿವೆ ಎಂದು ವಿಶ್ಲೇಷಿಸಲಾಗಿದೆ.

ವಾಣಿಜ್ಯ ವಾಹನ

11.4% ಇಳಿಕೆ ಪ್ರಮಾಣ



2019ರ ಮೇಗೆ ಹೋಲಿಸಿದರೆ 2022ರ ಮೇನಲ್ಲಿ ಮಾರಾಟವಾದ ಎಲ್ಲಾ ಸ್ವರೂಪದ ವಾಣಿಜ್ಯ ವಾಹನಗಳ ಸಂಖ್ಯೆಯಲ್ಲಿ ಶೇ 11.44ರಷ್ಟು ಇಳಿಕೆಯಾಗಿದೆ. ವಾಣಿಜ್ಯ ವಾಹನಗಳ ಮಾರಾಟವು ದೇಶದ ಆರ್ಥಿಕತೆಯ ಸ್ಥಿತಿಗತಿಯನ್ನು ಬಿಂಬಿಸುತ್ತದೆ. ಈ ವಾಹನಗಳ ಮಾರಾಟದಲ್ಲಿ ಆಗಿರುವ ಇಳಿಕೆಯು, ಆರ್ಥಿಕತೆಯು ಸುಸ್ಥಿತಿಯಲ್ಲಿ ಇಲ್ಲ ಎಂಬುದನ್ನು ಸೂಚಿಸುತ್ತದೆ.

10.7 % ಲಘು ವಾಣಿಜ್ಯ ವಾಹನಗಳ ಮಾರಾಟದಲ್ಲಿನ ಇಳಿಕೆ

22.38 % ಮಧ್ಯಮ ಗಾತ್ರದ ವಾಣಿಜ್ಯ ವಾಹನಗಳ ಮಾರಾಟದಲ್ಲಿನ ಇಳಿಕೆ

12.48 % ಭಾರಿ ಗಾತ್ರದ ವಾಣಿಜ್ಯ ವಾಹನಗಳ ಮಾರಾಟದಲ್ಲಿನ ಇಳಿಕೆ

ಆಧಾರ: ಫಾಡಾ ಮಾಸಿಕ ಮಾರಾಟ ವರದಿಗಳು

ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 146

‘ಉಮಾ’ ಎಂದು ಹೆಸರಿಟ್ಟ ದಕ್ಷ

ಜಗನ್ಮಾತೆಯಾದ ದೇವಿಯು ತನ್ನ ಪತ್ನಿ ಅಸಿಕ್ನಿಯಲ್ಲಿ ಜನಿಸಿದುದನ್ನು ನೋಡಿ ದಕ್ಷಪ್ರಜಾಪತಿ ಹರ್ಷದಿಂದ ಸಂಭ್ರಮಿಸುತ್ತಾನೆ. ಮಗಳಾಗಿ ಜಗನ್ಮಾತೆ ಜನ್ಮ ತಾಳಿದ್ದಾಳೆಂದು ಭಕ್ತಿಯಿಂದ ಸ್ತೋತ್ರ ಮಾಡುತ್ತಾನೆ. ‘ಆದಿ ಅಂತ್ಯವಿಲ್ಲದ ಓ ಪರಮೇಶ್ವರಿ, ನಿನಗೆ ನಮಸ್ಕಾರ. ಸತ್ಯಸ್ವರೂಪಳಾದ ನಿನ್ನನ್ನು ವೇದವಿತ್ತುಗಳು ‘ಶಿವಾ ಶಾಂತಾ ಮಹಾಮಾಯೆ ಜಗದ್ರೂಪಳು’ ಎಂದು ಅನೇಕ ವಿಧವಾಗಿ ಹೇಳುವರು. ನಿನ್ನಿಂದ ಪ್ರೇರಿತನಾಗಿಯೇ ಬ್ರಹ್ಮ ಜಗತ್ತನ್ನು ಸೃಷ್ಟಿಸುವ. ವಿಷ್ಣು ಜಗತ್ತನ್ನು ಪಾಲಿಸುವ, ನಿನ್ನಿಂದ ನಿಯಮಿಸಲ್ಪಟ್ಟ ರುದ್ರ ಜಗತ್ತನ್ನು ಪ್ರಳಯಕಾಲದಲ್ಲಿ ಸಂಹರಿಸುವ. ಬ್ರಹ್ಮ ಸೃಷ್ಟಿಸಿದ, ವಿಷ್ಣು ಪಾಲಿಸುವ, ರುದ್ರ ಮುಕ್ತಿಕೊಡುವ ಜಗತ್ತನ್ನು ಧರಿಸಿರುವ ಪರಮಾತ್ಮ ಸ್ವರೂಪಳಾದ ಪರಮೇಶ್ವರಿಯೇ. ರಜೋಗುಣ ಸತ್ವಗುಣ ಮತ್ತು ತಮೋಗುಣಗಳ ಸ್ವರೂಪಳಾಗಿ, ಈ ಮೂರು ಗುಣಗಳಿಂದ ಸಕಲ ಕಾರ್ಯಗಳನ್ನು ನಿರ್ವಹಿಸುವ ತ್ರಿಮೂರ್ತಿಗಳಿಗೆ ಜನನಿಯಾದಂತಹ ನಿನಗೆ ನಮಸ್ಕಾರ.’

ಹೀಗೆ ಬುದ್ಧಿಶಾಲಿಯಾದ ದಕ್ಷನು ಸ್ತುತಿಸಿದನ್ನು ಕೇಳಿದ ಜಗನ್ಮಾತೆರೂಪದ ಮಗು, ತನ್ನ ತಾಯಿ ವೀರಿಣಿ ಮತ್ತಿತರರಿಗೆ ಕೇಳದಂತೆ ಅವರನ್ನೆಲ್ಲ ಸಂಮೋಹಗೊಳಿಸಿ, ದಕ್ಷನಿಗೆ ಮಾತ್ರ ಕೇಳುವಂತೆ ‘ಎಲೈ ದಕ್ಷನೇ, ನೀನು ಹಿಂದೆ ನನ್ನನ್ನು ಆರಾಧಿಸಿ ನಿನ್ನ ಪುತ್ರಿಯಾಗಿ ನಾನು ಜನಿಸುವಂತೆ ವರವನ್ನು ಪಡೆದಿದ್ದೆ. ಈಗ ನಿನ್ನ ಆ ವರವು ಸಿದ್ಧಿಸಿತೆಂದು ತಿಳಿ, ನಿನಗೆ ಒಳಿತಾಗಲಿ’ ಎಂದು ಹೇಳಿದ ನಂತರ, ತನ್ನ ಮಾಯಾಶಕ್ತಿಯಿಂದ ಮತ್ತೆ ಶಿಶುವಿನ ರೂಪ ತಾಳಿ ತಾಯಿ ಮಡಿಲಲ್ಲಿ ಮಲಗಿ ತುಂಬಾ ರೋದಿಸತೊಡಗಿದಳು. ಮಗು ಅಳುವುದನ್ನು ಕೇಳಿ ಎಚ್ಚೆತ್ತ ಪರಿಚಾರಿಕೆಯರು, ಶಿಶುವು ಜನಿಸಿತೆಂದು ತ್ವರೆಯಿಂದ ಬಂದರು. ವೀರಣಮುನಿಯ ಮಗಳಾಗಿದ್ದರಿಂದ ವೀರಿಣಿ ಎಂದು ಕರೆಯಲ್ಪಡುತ್ತಿದ್ದ ಅಸಿಕ್ನಿಯು ಹಡೆದ ಆ ಬಾಲಿಕಿಯನ್ನು ನೋಡಿ ಸ್ತ್ರೀಯರೆಲ್ಲರೂ ಸಂತೋಷಗೊಂಡರು. ಪಟ್ಟಣದ ಜನರೆಲ್ಲರೂ ಜಯಘೋಷ ಮಾಡಿ ಸಂಭ್ರಮಿಸಿದರು.

ಮಗುವಿನ ಜನನದ ನಂತರ ದಕ್ಷನು ಶ್ರುತ್ಯುಕ್ತವಾದ ಜಾತಕರ್ಮಾದಿಗಳನ್ನು ವಿಧಿವತ್ತಾಗಿ ಮಾಡಿದ. ಬಡಪ್ರಜೆಗಳಿಗೆಲ್ಲ ಯಥೇಚ್ಛವಾಗಿ ಧನವನ್ನು ಕೊಟ್ಟ. ಈ ಸಂದರ್ಭದಲ್ಲಿ ಇಂದ್ರ ಮೊದಲಾದ ದೇವತೆಗಳು, ಮುನಿಗಳು ಪರಿವಾರ ಸಮೇತರಾಗಿ ದಕ್ಷನ ಮನೆಗೆ ಬಂದು ವಿಧಿವತ್ತಾಗಿ ಕನ್ಯಾಜನನದ ಉತ್ಸವದಲ್ಲಿ ಪಾಲ್ಗೊಂಡರು. ದಕ್ಷನ ಪುತ್ರಿಯಾಗಿ ಅವತರಿಸಿದ ಜಗನ್ಮಾತೆಯಾದ ಪರಮೇಶ್ವರಿಯನ್ನು ನೋಡಿ ದೇವತೆಗಳೆಲ್ಲರೂ ವಿನಯದಿಂದ ನಮಸ್ಕರಿಸಿ ಮಂಗಳಸ್ತೋತ್ರಗಳಿಂದ ಸ್ತುತಿಸಿದರು. ಸಕಲ ಗುಣಪರಿಪೂರ್ಣಳು, ಸುಂದರಿಯೂ ಆದ ಶಿಶುವಿಗೆ ದೇವತೆಗಳ ಸಲಹೆಯಂತೆ ದಕ್ಷಬ್ರಹ್ಮ ‘ಉಮಾ’ ಎಂದು ಹೆಸರನ್ನಿಟ್ಟ.

ಆಮೇಲೆ ಆ ದೇವಿಗೆ ಲೋಕದಲ್ಲಿ ಅನೇಕ ಹೆಸರುಗಳು ಬಂದವು. ದಕ್ಷಬ್ರಹ್ಮ ತನ್ನ ಮನೆಗೆ ಬಂದ ಹರಿ ಮತ್ತು ಬ್ರಹ್ಮನಿಗೆ ನಮಸ್ಕರಿಸಿ, ಭಕ್ತಿಯಿಂದ ಅರ್ಚಿಸಿದ. ಪ್ರಸನ್ನರಾದ ವಿಷ್ಣು ಮುಂತಾದ ದೇವತೆಗಳೆಲ್ಲರೂ ದಕ್ಷಬ್ರಹ್ಮನನ್ನು ಆದರದಿಂದ ಹಾರೈಸಿ ಅವನಿಂದ ಬೀಳ್ಕೊಂಡು ತೆರಳಿದರು. ತಾಯಿಯಾದ ವೀರಿಣಿಯು ತನ್ನ ಪುತ್ರಿಗೆ ಯೋಗ್ಯವಾದ ಲಾಲನೆ ಪಾಲನೆಗಳನ್ನು ಮಾಡಿ ಸ್ತನ್ಯಪಾನ ಕೊಡುತ್ತಿದ್ದಳು. ಹೀಗೆ ಉಮಾಕುಮಾರಿಯು ತನ್ನ ಹೆತ್ತವರಾದ ವೀರಿಣಿ ಮತ್ತು ಮಹಾತ್ಮನಾದ ದಕ್ಷಬ್ರಹ್ಮನಿಂದ ಸಲಹಲ್ಪಡುತ್ತಾ ಶುಕ್ಲಪಕ್ಷದ ಚಂದ್ರನಂತೆ ದಿನದಿನವೂ ಬೆಳೆಯುತ್ತಾ ಬಂದಳು. ಬಾಲ್ಯದಲ್ಲಿಯೇ ಸದ್ಗುಣಗಳೆಲ್ಲವೂ ಉಮೆಯಲ್ಲಿ ಸೇರಿದವು. ಉಮೆಯು ಗೆಳತಿಯರೊಡನೆ ಆಟವಾಡುತ್ತಿರುವಾಗ ದಿನವೂ ಪರಮೇಶ್ವರನ ಚಿತ್ರವನ್ನು ಬರೆದು ವಿಹರಿಸುತ್ತಲಿದ್ದಳು. ‘ಸ್ಥಾಣು’, ‘ಹರ’, ‘ರುದ್ರ’, ‘ಸ್ಮರಶಾಸನ’ ಮುಂತಾದ ಶಿವನಾಮಗಳನ್ನೆಲ್ಲ ಸೇರಿಸಿ ಇಂಪಾಗಿ ಹಾಡುತ್ತಿದ್ದಳು. ತಂದೆ–ತಾಯಿಗಳಲ್ಲಿ ತುಂಬಾ ನಯವಿನಯದಿಂದ ನಡೆಯುತ್ತಲಿದ್ದಳು. ದಕ್ಷದಂಪತಿಗಳ ಪ್ರೀತಿಗೆ ಪಾತ್ರಳಾಗಿ ದಿನದಿನವೂ ಅಭಿವೃದ್ಧಿ ಹೊಂದಿದಳು. ಉತ್ತಮ ಗುಣಗಳಿಂದ ಉಮೆ ತನ್ನ ಓರಗೆಯ ಮಕ್ಕಳಿಗೆಲ್ಲ ಮಾದರಿಯಾಗಿದ್ದಳು. ಮಕ್ಕಳೊಂದಿಗೆ ಆಡುವಾಗ ಆ ಜಗಜ್ಜನನಿ ಮಗುವೇ ಆಗಿಬಿಡುತ್ತಿದ್ದಳು. ತನ್ನ ಆಟಗಳಿಂದ ತನ್ನ ತಂದೆ–ತಾಯಿಗಳನ್ನು ನಿತ್ಯವೂ ಸಂತೋಷಗೊಳಿಸುತ್ತಿದ್ದಳು ಎಂಬಲ್ಲಿಗೆ ಸತೀಖಂಡದ ಹದಿನಾಲ್ಕನೆಯ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **ಉತ್ತರ ಪ್ರದೇಶದಲ್ಲಿ** ಇತ್ತೀಚೆಗೆ ನಡೆದಿದ್ದ ಹೂಡಿಕೆದಾರರ ಸಮ್ಮೇಳನದಲ್ಲಿ ಮಾತನಾಡಿದ್ದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು, ತಾವು ಅಧಿಕಾರಕ್ಕೆ ಬಂದಾಗಿನಿಂದ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಗಣನೀಯವಾಗಿ ಕಡಿಮೆ ಆಗಿದೆ ಎಂದಿದ್ದರು. ‘2017ರಲ್ಲಿ ಬಿಜೆಪಿ ಅಧಿಕಾರ ಹಿಡಿಯುವಾಗ ಉತ್ತರ ಪ್ರದೇಶದಲ್ಲಿ ನಿರುದ್ಯೋಗ ಪ್ರಮಾಣ ಶೇ 18ರಷ್ಟು ಇತ್ತು. ಹೂಡಿಕೆದಾರರಿಗೆ ನೆರವಾಗುವಂಥ ವಾತಾವರಣವನ್ನು ನಾವು ನಿರ್ಮಾಣ ಮಾಡಿದೆವು. ಪ್ರಧಾನಿ ಮೋದಿ ಅವರ ಮಾರ್ಗದರ್ಶನದಲ್ಲಿ ‘ಒಂದು ಜಿಲ್ಲೆ, ಒಂದು ಉತ್ಪನ್ನ’ ಎಂಬ ಯೋಜನೆ ಕೈಗೊಂಡೆವು. ಇದರಿಂದ ನಿರುದ್ಯೋಗ ಪ್ರಮಾಣ ಕಡಿಮೆ ಆಯಿತು ಎಂದಿದ್ದರು.

✓ **ಆದಿತ್ಯನಾಥ** ಅವರು ನೀಡಿರುವ ಹೇಳಿಕೆ ದಾರಿ ತಪ್ಪಿಸುವಂತಿದೆ ಎಂದು ‘ದಿ ಕ್ವಿಂಟ್’ ವೇದಿಕೆ ವರದಿ ಮಾಡಿದೆ. ‘ಸೆಂಟರ್ ಫಾರ್ ಮಾನಿಟರಿಂಗ್ ದ ಇಂಡಿಯನ್ ಎಕಾನಮಿ’ (ಸಿಎಂಐಇ) ಸಂಸ್ಥೆಯು ಪ್ರಕಟಿಸಿದ, ದೇಶದಲ್ಲಿ ಉದ್ಯೋಗಕ್ಕೆ ಸಂಬಂಧಿಸಿದ ವರದಿ ಪ್ರಕಾರ, ಉತ್ತರ ಪ್ರದೇಶದಲ್ಲಿ 2017ರ ಮಾರ್ಚ್‌ನಲ್ಲಿ ನಿರುದ್ಯೋಗ ಪ್ರಮಾಣ ಶೇ 2.4ರಷ್ಟಿತ್ತು. ಅದೇ ವೇಳೆ ಆದಿತ್ಯನಾಥ ಅವರು ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿ ಅಧಿಕಾರಕ್ಕೇರಿದರು. 2020ರ ಏಪ್ರಿಲ್‌ನಲ್ಲಿ ನಿರುದ್ಯೋಗ ಪ್ರಮಾಣ ಶೇ 21.5ರಷ್ಟಕ್ಕೆ ತಲುಪಿತ್ತು. 2022ರ ಏಪ್ರಿಲ್‌ನಲ್ಲಿ ನಿರುದ್ಯೋಗ ಪ್ರಮಾಣ ಶೇ 2.9 ರಷ್ಟಿತ್ತು. ಆದಿತ್ಯನಾಥ ಅಧಿಕಾರ ಹಿಡಿಯುವ ಮುನ್ನವೇ ರಾಜ್ಯದಲ್ಲಿ ನಿರುದ್ಯೋಗ ಪ್ರಮಾಣ ಕಡಿಮೆ ಇತ್ತು ಎಂದು ಸಿಎಂಐಇ ವರದಿ ಹೇಳುತ್ತದೆ ದಿ ಕ್ವಿಂಟ್ ವರದಿಯಲ್ಲಿ ವಿವರಿಸಲಾಗಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಮುದ್ದಿಸದ ಜಗತ್ತು

ಜಗವೆನ್ನ ಮುದ್ದಿಸದದೇಕೆಂದು ಕೊರಗದಿರು|
ಮಗುವು ನೀಂ ಪೆತ್ತರ್ಗೆ, ಲೋಕಕೆ ಸ್ಪರ್ಧಿ||
ಹೆಗಲಹೊರೆ ಹುಟ್ಟಿದರ್ಗೆಲ್ಲಮಿರುತಿರೆ, ನಿನ್ನ|
ರಗಳೆಗಾರಿಗೆ ಬಿಡುವೋ – ಮಂಕುತಿಮ್ಮ ||649||

ಪದ-ಅರ್ಥ: ಜಗವೆನ್ನ = ಜಗವು + ಎನ್ನ, ಮುದ್ದಿಸದದೇಕೆಂದು = ಮುದ್ದಿಸದು + ಅದೇಕೆ + ಎಂದು, ಪೆತ್ತರ್ಗೆ = ಹೆತ್ತವರಿಗೆ, ಹುಟ್ಟಿದರ್ಗೆಲ್ಲಮಿರುತಿರೆ = ಹುಟ್ಟದರ್ಗೆ (ಹುಟ್ಟಿದವರಿಗೆ + ಎಲ್ಲ + ಇರುತಿರೆ), ರಗಳೆಗಾರಿಗೆ = ರಗಳೆಗೆ + ಯಾರಿಗೆ.

ವಾಚ್ಯಾರ್ಥ: ಪ್ರಪಂಚ ನನ್ನನ್ನು ಏಕೆ ಹೊಗಳುವುದಿಲ್ಲವೆಂದು ಕೊರಗಬೇಡ. ನಿನ್ನನ್ನು ಹೆತ್ತವರಿಗೆ ನೀನು ಮಗು, ಆದರೆ ಲೋಕಕ್ಕೆ ನೀನೊಬ್ಬ ಸ್ಪರ್ಧಿ. ಹುಟ್ಟಿದ ಎಲ್ಲರಿಗೂ ಅವರವರ ಹೆಗಲಭಾರವಿರುವಾಗ, ನಿನ್ನ ರಗಳೆಯನ್ನು ಕೇಳಲು ಯಾರಿಗೆ ಬಿಡುವಿದೆ?

ವಿವರಣೆ: ಪ್ರಪಂಚದಲ್ಲಿ ಬದುಕಿರುವವರೆಗೆ ಏನಾದರೂ ಕೆಲಸ ನಡೆಯುತ್ತಲೇ ಇರುತ್ತದೆ. ಪ್ರತಿಯೊಬ್ಬರಿಂದಲೂ ಚಿಕ್ಕ, ದೊಡ್ಡ, ಸಾಧನೆಗಳಾಗುತ್ತವೆ. ಆಗ ಬರುತ್ತದೆ ಅಹಂಕಾರ. ನಾನು ಇಷ್ಟೊಂದು ಕಾರ್ಯಗಳನ್ನು ಮಾಡಿದ್ದೇನೆ, ಆದರೆ ಯಾರಿಗೂ ಅದರ ಬೆಲೆ ಅರ್ಥವಾಗುವುದಿಲ್ಲ. ಆ ನನ್ನ ಸ್ನೇಹಿತ, ನನ್ನಷ್ಟು ಕೆಲಸಗಳನ್ನು ಮಾಡದಿದ್ದರೂ ಜನರಿಂದ, ಸರ್ಕಾರದಿಂದ ಅವನಿಗೆ ಏನೆಲ್ಲ ಮರ್ಯಾದೆ ದೊರೆಯುತ್ತದಲ್ಲ ಎಂಬ ಹೊಟ್ಟೆಯುರಿ ಪ್ರಾರಂಭವಾಗುತ್ತದೆ. ಆಗ ಸ್ನೇಹಿತನ ಬಗ್ಗೆ ಅಸೂಯೆ ಪ್ರಾರಂಭ. ಇನ್ನು ತನ್ನ ಬೆಳವಣಿಗೆಯ ಬಗ್ಗೆ ತಲೆಕೆಡಿಸಿಕೊಳ್ಳುವುದರ ಬದಲು ಆ ಸ್ನೇಹಿತನ ವೈಫಲ್ಯಗಳ ಅಪೇಕ್ಷೆ ಹೆಚ್ಚಾಗುತ್ತದೆ.

ಈ ಸ್ವಪ್ರೇಮ ಎಲ್ಲರಲ್ಲಿಯೂ ಇರುತ್ತದೆ. ಜನ ತನ್ನನ್ನು, ತಾನು ಮಾಡಿದ್ದನ್ನು ಮೆಚ್ಚಬೇಕು ಎನ್ನುವ ಅಪೇಕ್ಷೆ ಸಾಮಾನ್ಯವಾದದ್ದು. ಈ ಪ್ರವೃತ್ತಿಯ ಪ್ರಾರಂಭ ಬಾಲ್ಯದಲ್ಲಿಯೇ ಆಗುತ್ತದೆ. ಮಗು ಪುಟ್ಟದಾಗಿದ್ದಾಗ ತಂದೆ ತಾಯಿಯರು ಪ್ರೋತ್ಸಾಹಕ್ಕಾಗಿ ಮೆಚ್ಚುಗೆಯ ಮಾತುಗಳನ್ನು ಆಡುತ್ತಾರೆ. ಈ ಪ್ರೇರಣಾದಾಯಿ ಮಾತುಗಳನ್ನು ಮಗು ಸತ್ಯವೆಂದೇ ಭಾವಿಸತೊಡಗುತ್ತದೆ, ತಾನು ಮಾಡುವುದು ನಿಜವಾಗಿಯೂ ಶ್ರೇಷ್ಠವಾದದ್ದು ಎಂಬ ನಂಬಿಕೆ ಬಲಿಯುತ್ತದೆ. ಹೆತ್ತವರಿಗೆ ಹೆಗ್ಗಣ ಮುದ್ದು ಎನ್ನುವಂತೆ, ಮಗುವಿನ ಚಿಕ್ಕಪುಟ್ಟ ತಪ್ಪುಗಳೂ ಪಾಲಕರಿಗೆ ಆನಂದಾಯಕವಾಗಿರುತ್ತವೆ.

ಇತ್ತೀಚೆಗೆ ಒಂದು ಪ್ರಸಿದ್ಧ ವಿಶ್ವವಿದ್ಯಾಲಯದಲ್ಲಿ ಮನಃಶಾಸ್ತ್ರಜ್ಞರು ಒಂದು ವಿಷಯವನ್ನು ತಿಳಿಯಪಡಿಸಿದ್ದಾರೆ. ಅದರ ಪ್ರಕಾರ ಮಕ್ಕಳ ಸ್ವ-ಪ್ರೇಮಕ್ಕೆ ಕಾರಣ ಪಾಲಕರ ಅತಿಯಾದ ಪ್ರೇಮ. ಈಗ ಒಂದೋ, ಎರಡೋ ಮಕ್ಕಳು. ತಂದೆ-ತಾಯಿಯರು ಅವರನ್ನು ದುರ್ಬೀನಿನ ಕೆಳಗೆ ಇಟ್ಟುಕೊಂಡು ಬೆಳೆಸುತ್ತಾರೆ. ಮಕ್ಕಳು ಕೇಳುವುದಕ್ಕೆ ಮೊದಲೇ ರಾಶಿ ರಾಶಿ ಸಾಮಾನುಗಳನ್ನು ತಂದು ತುಂಬುತ್ತಾರೆ. ಆಗ ಮಗುವಿಗೆ ಎಲ್ಲವೂ ದೊರೆಯುವುದು ಅನಾಯಾಸವಾಗಿ ಮತ್ತು ಯಾವ ಅಪೇಕ್ಷೆಯೂ ಇಲ್ಲದೆ. ಮುಂದೆ ಪ್ರಪಂಚದಲ್ಲಿ ಸ್ಪರ್ಧೆಗೆ ಬಂದಾಗ ಮಗುವಿಗೆ ಆಘಾತ. ಇಲ್ಲಿ ಯಾವುದೂ ಸುಲಭವಾಗಿ ಸಿಗುವುದಿಲ್ಲ. ಅಲ್ಲಿ ಪ್ರತಿಸ್ಪರ್ಧಿಗಳಿದ್ದಾರೆ. ಆಗ ಪ್ರಾರಂಭವಾಗುತ್ತದೆ, ಕೊರಗು, ಗೊಣಗಾಟ.

ಅದಕ್ಕೇ ಕಗ್ಗ ಹೇಳುತ್ತದೆ, ಹುಟ್ಟಿದ ಪ್ರತಿಯೊಬ್ಬ ಮನುಷ್ಯನಿಗೂ ಅವನದೇ ಆದ ಕಷ್ಟಗಳ, ಸಮಸ್ಯೆಗಳ ಹೊರೆ ಇದೆ. ಅದನ್ನು ಪರಿಹರಿಸುವುದರಲ್ಲಿಯೇ ಅವರು ಮಗ್ನರಾಗಿದ್ದಾರೆ. ಅಂಥದ್ದರಲ್ಲಿ ನಿನ್ನ ಗೊಣಗಾಟವನ್ನು ಯಾರು ಕೇಳುತ್ತಾರೆ? ಯಾರಿಗೆ ನಿನ್ನ ತಕರಾರುಗಳನ್ನು ಕೇಳಲು ವ್ಯವಧಾನವಿದೆ? ನಮಗೆ ಹೇಗೆ ಉಳಿದವರ ಕರ್ಮಗಳನ್ನು ಹೊತ್ತುಕೊಳ್ಳುವುದು ಸಾಧ್ಯವಿಲ್ಲವೋ ಹಾಗೆಯೇ ನಮ್ಮ ಕರ್ಮಗಳನ್ನು ನಾವೇ ಹೊರಬೇಕು. ಅದನ್ನು ಬಾಯಿಮುಚ್ಚಿ ಹೊರಬೇಕು-ಗೊಣಗಿ ಪ್ರಯೋಜನವಿಲ್ಲ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಜೂನ್ 14, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ– ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ಪೂರ್ಣಿಮಾ ಗಂ. 17-22 ನಕ್ಷತ್ರ: ಜ್ಯೇಷ್ಠ ಗಂ. 18-32 ಯೋಗ: ಸಾಧ್ಯ ಗಂ. 09-40, ಕರಣ: ವಿಷ್ಠಿ ಗಂ. 07-14, ವೃಷಭ ಮಾಸದ 30 ನೇ ದಿನ.
ರಾಹುಕಾಲ: ಮಧ್ಯಾಹ್ನ 03:00 – 04:30
ಸೂರ್ಯೋದಯ: 06-07 **ಸೂರ್ಯಾಸ್ತ:** 06-54
ಮುಸ್ಲಿಂ ದಿನಾಂಕ: 14 ಜುಲ್ಕಾಯದ್ **ದಿನ ವಿಶೇಷ:** ವಟ ಸಾವಿತ್ರಿ ವ್ರತ (ಪೂರ್ಣಿಮಾ ಪಕ್ಷ), ದೇವ ಸ್ನಾನ ಪೂರ್ಣಿಮಾ **ಅದೃಷ್ಟ ಸಂಖ್ಯೆ:** 5, 9

ಮೇಷ: ದಿನದ ಆರಂಭದಲ್ಲಿ ಕೆಲಸಗಳು ನಿರೀಕ್ಷಿತ ಹಾದಿಯಲ್ಲಿ ಸಾಗುವುದರಿಂದ ನಿಮ್ಮಲ್ಲಿ ನೈತಿಕ ಧೈರ್ಯ ಹೆಚ್ಚುತ್ತದೆ. ಆಸ್ತಿ ಕೊಳ್ಳುವ ನಿರ್ಧಾರವನ್ನು ಪುನಃ ಇನ್ನೊಮ್ಮೆ ಯೋಚಿಸುವುದು ಉತ್ತಮ.

ವೃಷಭ: ನಿಮ್ಮ ಕೆಲಸಗಳ ಬಗ್ಗೆ ಅಧಿಕಾರಿ ವರ್ಗದವರಲ್ಲಿ ಯಾವುದೇ ಚರ್ಚೆಗಳು, ವಾದ ವಿವಾದಗಳು ನಡೆದರೂ, ನಿಮ್ಮ ಕಾರ್ಯ ಸಾಧನೆಗೆ ಅಡ್ಡಿಯಾಗದು. ನೂತನ ಸಂಬಂಧಗಳು ಕಂಡು ಬರಲಿವೆ.

ಮಿಥುನ: ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಸ್ವಲ್ಪ ಮಟ್ಟಿನ ಹಿನ್ನಡೆ ಉಂಟಾಗಬಹುದು. ವಿದ್ಯಾಭ್ಯಾಸದಲ್ಲಿ ಒಳ್ಳೆಯ ಫಲಿತಾಂಶ ಸಿಗಲಿದೆ. ಷೇರು ವ್ಯವಹಾರದಲ್ಲಿ ಹಾಕಿದ ಹಣವು ದುಪ್ಪಟ್ಟಾಗುವ ಸಂಭವವಿದೆ.

ಕರ್ಕಾಟಕ: ಅಧಿಕಾರಿಗಳ ಜೊತೆ ಮುಕ್ತ ಚರ್ಚೆ ನಡೆಸುವುದರಿಂದ ಸಮಸ್ಯೆಗಳ ಪರಿಹಾರವನ್ನು ಶಾಶ್ವತವಾಗಿ ಬಗೆಹರಿಸಿಕೊಳ್ಳುವಿರಿ. ರಾಜಕೀಯ ವ್ಯಕ್ತಿಗಳಿಗೆ ಅಕ್ಕ-ಪಕ್ಕದವರ ಕುತಂತ್ರದಿಂದಾಗಿ ತೊಂದರೆ ಉಂಟಾಗಬಹುದು.

ಸಿಂಹ: ಆಕಸ್ಮಿಕ ಪ್ರಯಾಣದಿಂದ ಆರೋಗ್ಯದಲ್ಲಿ ಏರುಪೇರಾದರು ಆರ್ಥಿಕ ಬೆಳವಣಿಗೆ ಖಂಡಿತ ಸಾಧ್ಯವಿದೆ. ನಿಮ್ಮ ಕೆಲವೊಂದು ನಿಂತುಹೋದ ಕೆಲಸಗಳನ್ನು ಪುನಃ ಆರಂಭ ಮಾಡುವ ಬಗ್ಗೆ ಗಮನಹರಿಸಿ.

ಕನ್ಯಾ: ಹಿರಿಯರೊಡನೆ ವಾಗ್ವಾದ ಬಾರದಂತೆ ಜಾಗ್ರತೆ ವಹಿಸಿರಿ. ಬಂಧು-ಮಿತ್ರರ ಸಹಾಯ ಸಹಕಾರಗಳು ಸಕಾಲಕ್ಕೆ ಒದಗುವುದರಿಂದ ನಿರಾಳ ಭಾವ ಮೂಡುವುದು. ವ್ಯಾಪಾರದಲ್ಲಿ ಉತ್ತಮ ಲಾಭವಿರುವುದು.

ತುಲಾ: ಕಾರ್ಯಕ್ಷೇತ್ರದಲ್ಲಿ ಅಡ್ಡಿ, ಆತಂಕ ಬಂದರೂ ಯೋಜಿತ ಕೆಲಸಗಳು ಫಲ ನೀಡಲಿದೆ. ಪುರುಷ ಪ್ರಯತ್ನದ ಜೊತೆಯಲ್ಲಿ ದೇವರ ಅನುಗ್ರಹ ನಿಮ್ಮ ಯೋಜನೆಗೆ ಪುಷ್ಟಿ ಕೊಡುವುದು ಸಂತಸದ ವಿಚಾರ.

ವೃಶ್ಚಿಕ: ನಿಮ್ಮ ಮನೋಭಾವಕ್ಕೆ ಕುಟುಂಬ ವರ್ಗದವರು ಸಕಾರಾತ್ಮಕ ಸಹಾಯ ಕಲ್ಪಿಸುತ್ತಾರೆ. ರಸ ಪದಾರ್ಥಗಳ ವ್ಯಾಪಾರ ವ್ಯವಹಾರದವರಿಗೆ ಅನುಕೂಲಕರವಾದ ವಾತಾವರಣ ಇರಲಿದೆ.

ಧನು: ಬಂಧುಗಳ ಮಾತು ಮನಸ್ಸನ್ನು ಗಾಯ ಮಾಡಲಿದೆ. ಅದರಿಂದಾಗಿ ಮನಸ್ಸು ನಿರಾಸಕ್ತಿಯ ಭಾವನೆಯಿಂದ ಕೂಡಿರುವಂತಾಗಲಿದೆ. ಖರ್ಚು-ವೆಚ್ಚಗಳ ಬಾಬ್ತು ಜಾಗ್ರತೆ ಇರಲಿ ಮತ್ತು ಆರ್ಥಿಕ ಸ್ಥಿತಿಯು ಕೊಂಚ ಸುಧಾರಿಸಲಿದೆ.

ಮಕರ: ಗೃಹಸೌಖ್ಯ ಉತ್ತಮವಿದ್ದು ಸಾಮಾಜಿಕವಾಗಿ ಸ್ಥಾನಮಾನ ಪ್ರಾಪ್ತಿಯಾಗುವುದು. ಉದ್ಯೋಗದಲ್ಲಿ ಮುಂಬಡ್ತಿ ಅನುಕೂಲ. ಮಂಗಳ ಕಾರ್ಯಗಳ ಸೂಚನೆ ಕಂಡು ಬರಬಹುದು. ಗೃಹ ಸಾಮಗ್ರಿ ಖರೀದಿಯಿಂದ ಸಂತಸ.

ಕುಂಭ: ವಿಚಾರ ಸಂಕಿರಣ ಒಂದರಲ್ಲಿ ಭಾಗವಹಿಸುವ ಸಲುವಾಗಿ ಆಮಂತ್ರಣ ಬರಲಿದೆ. ನೂತನ ವಸ್ತ್ರ ಖರೀದಿಯ ಯೋಗವಿದೆ. ಮಿತ್ರರೊಂದಿಗೆ ಮಾತು ಕತೆಗಳಲ್ಲಿ ಕಾಲ ಕಳೆಯುವಿರಿ.

ಮೀನ: ಕೋರ್ಟ್ ವ್ಯವಹಾರದಲ್ಲಿ ನಿರೀಕ್ಷೆಗೂ ಮೀರಿದ ಜಯ ಸಿಗುವುದು. ಸಂಸ್ಥೆಯೊಂದರ ಸಲಹೆಗಾರರಾಗಿ ನೇಮಕಗೊಂಡಿರುವ ನಿಮ್ಮಿಂದ ಈ ದಿನ ಸಂಸ್ಥೆಗೆ ನಷ್ಟ ಸಂಭವಿಸುವಂತಾಗಬಹುದು ಜಾಗ್ರತರಾಗಿರಿ.

ಪದಬಂಧ 4988 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅರಸುತ್ತಲಿದ್ದಾಗ ರಾಜ ದೊರಕಿದನಲ್ಲಾ! (3)
3.ಹೊನ್ನಿನ ವರ್ಣವಿದು (3)
4.ಈತನಿಗೆ ಸ್ವಲ್ಪವೂ ಬುದ್ಧಿಯಿಲ್ಲ! (4)
6.ಮಂದಿರದಲ್ಲಿ ಕಾಣಿಸಿದ ಜನ (2)
7.ಕೆಲವರಷ್ಟೇ ಮಾಡುವ ಕಾರ್ಯ (3)
9.ಮರೆತೆನೆಂದರೂ ಇದು ಜೈಲೇ! (4)
10.ಮತಿಯಿಟ್ಟುಕೊಂಡೇ ನೀಡಿದ ಒಪ್ಪಿಗೆ (4)
11.ಗುಲಾಮ ತಂದಿಟ್ಟ ಹೂ (3)
13.ತಿಪ್ಪೆಯಲ್ಲಿರುವ ಹಣ್ಣಿನ ತೊಗಟೆ (2)
14.ದೇವರನ್ನು ರಥದಲ್ಲಿಟ್ಟು ಮಾಡುವ ಉತ್ಸವ (4)
16.ಮಡಿ ಮಾಡಿದವಳ ಉಡಿಯಿದು (3)
17.ರಜದಲ್ಲಿ ಖರೀದಿಸಿದ ಬೆಳ್ಳಿ (3)

ಮೇಲಿಂದ ಕೆಳಕ್ಕೆ
1.ಈತ ಹಿರಿಯ ಸಹೋದರ (2)
2.ಸಮಯದಲ್ಲೇ ಸರಿಯಾದುದು ಇದೆ! (2)
3.ಇದು ಹೊಂದಾಣಿಕೆಯೇ (3)
5.ರೀತಿಗೊಂದು ಪರ್ಯಾಯ ಪದ (3)
8.ಒಳ್ಳೆಯ ಮತಿ (3)
9.ಸೀರೆಯ ಹೊದೆಯುವ ಭಾಗ (3)
10.ಆ ಸುರನ ಹತ್ತಿರವಿರುವ ರಾಕ್ಷಸ (3)
12.ಸೂರ್ಯನ ಕಾವು (3)
15.ವಠಾರಕ್ಕೆ ಬಂದಿರುವ ಮದುವೆ ಗಂಡು (2)
16.ಮಡಿವಂತ ಹಾಕಿದ ಓಟು (2)



4987ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಉಗ್ರಗಾಮಿ 4.ಮಧುಕರಿ 6.ಜಟಿಲ 7.ಪಾರಿತೋಷಕ 10.ಉತ್ತರ 11.ಕವಾಡಿಗ 13.ಜನಮತ

ಮೇಲಿಂದ ಕೆಳಕ್ಕೆ: 1.ಉತ್ತಮಣ 2.ಗಾಯಕ 3.ಕಮಲ 5.ರಿಪೇರಿ 6.ಜನಕ 7.ಪಾಮರ 8.ಷಡ್ಡಕ 9.ಅಂಗಜಾತ 10.ಉಯಿಲು 12.ವಾದನ

ಸುಡೊಕು 5374

			5		6		4	7
				4				
7		4	9			5		3
9	1							8
		7		9			1	
5	2							4
8		1					6	
	5		1		4	8		9
4		9		6			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5373 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಕೇಂದ್ರ ಸರ್ಕಾರದಿಂದ ದ್ವೇಷ ರಾಜಕಾರಣ– 'ಕೈ' ನಾಯಕರ ಆರೋಪ

ಇ.ಡಿ ಕಚೇರಿ ಮುತ್ತಿಗೆಗೆ ಕಾಂಗ್ರೆಸ್ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿಗೆ ಜಾರಿ ನಿರ್ದೇಶನಾಲಯ (ಇ.ಡಿ) ನೋಟಿಸ್ ನೀಡಿರುವುದನ್ನು ಖಂಡಿಸಿ ರಾಜ್ಯ ಕಾಂಗ್ರೆಸ್ ನಾಯಕರು, ಕಾರ್ಯಕರ್ತರು ಶಾಂತಿನಗರದಲ್ಲಿರುವ ಇಡಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು. ಲಾಲ್‌ಬಾಗ್ ಗೇಟ್ ಮುಂಭಾಗದಲ್ಲಿ ಪ್ರತಿಭಟನೆ ಆರಂಭಿಸಿ, ಇಡಿ ಕಚೇರಿಯತ್ತ ನಡೆದುಕೊಂಡು ಹೊರಟ ಕಾಂಗ್ರೆಸ್ಸಿಗರನ್ನು ಪೊಲೀಸರು ಅರ್ಧದಲ್ಲಿಯೇ ತಡೆದು ವಶಕ್ಕೆ ಪಡೆದು, ಬಳಿಕ ಬಿಡುಗಡೆ ಮಾಡಿದರು.

> **ರಾಹುಲ್ ಒಬ್ಬಂಟಿಗರಲ್ಲ, ಅವರ ಜೊತೆ ಕಾರ್ಯಕರ್ತರಿದ್ದಾರೆ. ಹೆದರಿಸುವುದನ್ನು ಕೇಂದ್ರ ಬಿಡದಿದ್ದರೆ ಕಾರ್ಯಕರ್ತರು ತಕ್ಕ ಶಾಸ್ತಿ ಮಾಡಲಿದ್ದಾರೆ**
> **ಸಿದ್ದರಾಮಯ್ಯ**, ವಿಧಾನಸಭೆ ವಿರೋಧ ಪಕ್ಷದ ನಾಯಕ

> **ಇನ್ನು ಮುಂದೆ ಇ.ಡಿಯವರು ಪಕ್ಷದ ನಾಯಕರಿಗೆ ತೊಂದರೆ ನೀಡಲಿದ್ದಾರೆ. ಅದನ್ನು ಎದುರಿಸಲು ನಾನು ಸಿದ್ಧನಿದ್ದೇನೆ. ಪಕ್ಷದ ನಾಯಕರ ಜತೆ ಇದ್ದೇವೆ ಎಂದು ಹೇಳಲು ಪ್ರತಿಭಟನೆ ಮಾಡಿದ್ದೇವೆ**
> **ಡಿ.ಕೆ. ಶಿವಕುಮಾರ್**, ಕೆಪಿಸಿಸಿ ಅಧ್ಯಕ್ಷ

'ನರೇಂದ್ರ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಸಂವಿಧಾನದ ಎಲ್ಲ ಸಂಸ್ಥೆಗಳನ್ನು ತಮ್ಮ ಕೈಗೊಂಬೆಯಾಗಿ ಮಾಡಿಕೊಂಡು, ಪ್ರಜಾಪ್ರಭುತ್ವವನ್ನು ಹತ್ತಿಕ್ಕುವ ಕೆಲಸವನ್ನು ಮಾಡುತ್ತಿದ್ದಾರೆ. ಇ.ಡಿ ಮತ್ತು ಆದಾಯ ತೆರಿಗೆ ಇಲಾಖೆಗಳನ್ನು ವಿರೋಧ ಪಕ್ಷದವರ ಮೇಲೆ ಛೂ ಬಿಡುವ ಕೆಲಸ ಮಾಡುತ್ತಿದೆ. ಆ ಮೂಲಕ, ಕೇಂದ್ರದ ಸರ್ಕಾರ ದ್ವೇಷ ರಾಜಕಾರಣ ಮಾಡುತ್ತಿದೆ' ಎಂದು ಕಾಂಗ್ರೆಸ್ ನಾಯಕರು ವಾಗ್ದಾಳಿ ನಡೆಸಿದರು.

ಪೊಲೀಸ್ ವಶಕ್ಕೆ: ಇಡಿ ಕಚೇರಿ ಮುತ್ತಿಗೆಗೆ ಮುಂದಾದ 'ಕೈ' ನಾಯಕರು, ಕಾರ್ಯಕರ್ತರನ್ನು ಶಾಂತಿನಗರ ಬಸ್ ನಿಲ್ದಾಣ ಬಳಿ ಬ್ಯಾರಿಕೇಡ್ ಹಾಕಿ ಪೊಲೀಸರು ತಡೆದರು.

ಈ ವೇಳೆ ಪೊಲೀಸರು ಮತ್ತು ಪ್ರತಿಭಟನಕಾರರ ನಡುವೆ ವಾಗ್ವಾದ ನಡೆಯಿತು. ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮ್ಮದ್, ಶಾಸಕ ಪ್ರಿಯಾಂಕ್ ಖರ್ಗೆ, ಯುವ ಕಾಂಗ್ರೆಸ್ ಅಧ್ಯಕ್ಷ ಮೊಹ್ಮದ್ ನಲಪಾಡ್ ಅವರು ಬ್ಯಾರಿಕೇಡ್ ಹತ್ತಿ ಆಕ್ರೋಶ ಹೊರಹಾಕಿದರು. ಅದೇ ವೇಳೆ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ, ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಸೇರಿದಂತೆ ಹಲವರನ್ನು ಪೊಲೀಸರು ವಶಕ್ಕೆ ಪಡೆದರು.

ಪ್ರತಿಭಟನೆ ಹಿನ್ನೆಲೆಯಲ್ಲಿ ಇ.ಡಿ ಕಚೇರಿ ಸುತ್ತಮುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ತೆಗೆದುಕೊಳ್ಳಲಾಗಿತ್ತು. ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ, ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ, ಶಾಸಕರಾದ ಕೆ.ಜೆ. ಜಾರ್ಜ್, ಆರ್.ವಿ. ದೇಶಪಾಂಡೆ, ಎನ್.ಎ. ಹ್ಯಾರಿಸ್, ರಂಗನಾಥ್, ಯು.ಬಿ. ವೆಂಕಟೇಶ್ ಮತ್ತಿತರ ನಾಯಕರು ಹಾಗೂ ಸಾವಿರಾರು ಕಾರ್ಯಕರ್ತರು ಪ್ರತಿಭಟನೆಯಲ್ಲಿದ್ದರು.

ತಮಿಳುನಾಡು: ಕಸ್ಟಡಿ ಸಾವು

ಚೆನ್ನೈ: ಚಿನ್ನಾಭರಣ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಚೆನ್ನೈ ಪೊಲೀಸರು ಬಂಧಿಸಿದ್ದ ರೌಡಿಶೀಟರ್ ಒಬ್ಬ ಪೊಲೀಸ್ ಕಸ್ಟಡಿಯಲ್ಲಿ ಸಾವಿಗೀಡಾಗಿದ್ದು, ತಮಿಳುನಾಡಿನಲ್ಲಿ ಮತ್ತೊಂದು ಶಂಕಿತ ಕಸ್ಟಡಿ ಸಾವು ಸಂಭವಿಸಿದೆ.

ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ 23 ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿದ್ದ ರಾಜಶೇಖರ್ ಎಂಬುವರನ್ನು ಪೊಲೀಸರು ಭಾನುವಾರ ಸಂಜೆ ಬಂಧಿಸಿದ್ದರು. ವಿಚಾರಣೆ ವೇಳೆ ರಾಜಶೇಖರ್ ಅಸ್ವಸ್ಥಗೊಂಡಿದ್ದು, ತಕ್ಷಣ ಅವರನ್ನು ಸರ್ಕಾರಿ ಆಸ್ಪತ್ರೆಗೆ ಸಾಗಿಸಲಾಯಿತು. ಅಲ್ಲಿ ಅವರು ಸಾವನ್ನಪ್ಪಿದ್ದಾರೆ ಎಂದು ಘೋಷಿಸಲಾಯಿತು.

ಘಟನೆ ಸಂಬಂಧ ಚೆನ್ನೈನ ಕೊಡುಂಗೈಯೂರ್ ಠಾಣೆಯ ಐವರು ಪೊಲೀಸರನ್ನು ಅಮಾನತುಗೊಳಿಸಿದ್ದಾರೆ. ಈ ಹಿಂದೆ ಚೆನ್ನೈನಲ್ಲಿ ವಿಘ್ನೇಶ್ ಎಂಬ ಆರೋಪಿ ಪೊಲೀಸ್ ಕಸ್ಟಡಿಯಲ್ಲಿ ಸಾವಿಗೀಡಾಗಿದ್ದ.

ರಾಷ್ಟ್ರಪತಿ ಸ್ಪರ್ಧೆಯಲ್ಲಿ ನಾನಿಲ್ಲ: ನಿತೀಶ್

ಪಟ್ನಾ (ಪಿಟಿಐ): 'ಜುಲೈನಲ್ಲಿ ನಡೆಯಲಿರುವ ರಾಷ್ಟ್ರಪತಿ ಚುನಾವಣೆಗೆ ನಾನು ಅಭ್ಯರ್ಥಿಯಲ್ಲ' ಎಂದು ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಸೋಮವಾರ ಸ್ಪಷ್ಟಪಡಿಸಿದ್ದು, ಅವರ ಸ್ಪರ್ಧೆಯ ಕುರಿತು ಇದ್ದ ಊಹಾಪೋಹಗಳಿಗೆ ತೆರೆ ಎಳೆದಿದ್ದಾರೆ.

'ನಾನು ದೇಶದ ಮುಂದಿನ ರಾಷ್ಟ್ರಪತಿ ಸ್ಥಾನದ ಸ್ಪರ್ಧೆಯಲ್ಲಿ ಇಲ್ಲ. ನಾನು ಎಲ್ಲಿಗೂ ಹೋಗುತ್ತಿಲ್ಲ. ಅಂತಹ ವರದಿಗಳು ಆಧಾರರಹಿತ ಮತ್ತು ಕೇವಲ ಊಹಾಪೋಹಗಳಾಗಿವೆ' ಎಂದು ಸ್ಪಷ್ಟಪಡಿಸಿದ್ದಾರೆ.

ರಾಹುಲ್ ವಿಚಾರಣೆ: ಕಾಂಗ್ರೆಸ್–ಬಿಜೆಪಿ ಜಟಾಪಟಿ

ಒಂದನೇ ಪುಟದಿಂದ

ವಿಚಾರಣೆಗೂ ಮುನ್ನ ರಾಹುಲ್ ಗಾಂಧಿ ಜತೆಗೆ ಕಾಂಗ್ರೆಸ್‌ನ ಹಿರಿಯ ನಾಯಕರು ಮೆರವಣಿಗೆಯಲ್ಲಿ ಸಾಗಿ 'ರಾಜಕೀಯ ಶಕ್ತಿ' ಪ್ರದರ್ಶಿಸಿದರು.

ರಾಜಸ್ಥಾನದ ಮುಖ್ಯಮಂತ್ರಿ ಅಶೋಕ ಗೆಹಲೋತ್, ಛತ್ತೀಸಗಡದ ಮುಖ್ಯಮಂತ್ರಿ ಭೂಪೇಶ್ ಬಘೆಲ್, ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ,ಪಿ. ಚಿದಂಬರಂ, ದಿಗ್ವಿಜಯ ಸಿಂಗ್, ಜೈರಾಮ್ ರಮೇಶ್, ಕೆ.ಸಿ. ವೇಣುಗೋಪಾಲ್, ರಣದೀಪ್ ಸುರ್ಜೇವಾಲಾ ಸೇರಿದಂತೆ ಪಕ್ಷದ ಸಂಸದರು ಹಾಗೂ ಮುಖಂಡರು ಪ್ರತಿಭಟನೆಯಲ್ಲಿ ಪಾಲ್ಗೊಂಡರು.

ಕಾಂಗ್ರೆಸ್‌ನ ಪ್ರತಿಭಟನೆಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಬಿಜೆಪಿ, 'ಕಾಂಗ್ರೆಸ್ ಹಾಗೂ ಭ್ರಷ್ಟಾಚಾರ ಜೋಡೆತ್ತುಗಳು. ಭ್ರಷ್ಟಾಚಾರ ಪರವಾಗಿ ಕಾಂಗ್ರೆಸ್ ಸತ್ಯಾಗ್ರಹ ನಡೆಸುತ್ತಿದೆ' ಎಂದು ಲೇವಡಿ ಮಾಡಿದೆ.

ಕಾಂಗ್ರೆಸ್‌ನ ಕೇಂದ್ರ ಕಚೇರಿ ಇರುವ ಅಲಿ ಅಕ್ಬರ್ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿತ್ತು. ಹೆಚ್ಚಿನ ಸಂಖ್ಯೆಯ ಕಾರ್ಯಕರ್ತರು ಕಚೇರಿಗೆ ಬರದಂತೆ ತಡೆಯಲು ಬ್ಯಾರಿಕೇಡ್‌ಗಳನ್ನು ಹಾಕಲಾಗಿತ್ತು.

ಕಾಂಗ್ರೆಸ್ ಕಚೇರಿಗೆ ಹೊರಟ ಕಾರ್ಯಕರ್ತರನ್ನು ವಶಕ್ಕೆ ಪಡೆಯಲಾಯಿತು.

ಶಾಂತಿಯುತ ಪ್ರತಿಭಟನೆ ವೇಳೆ ಪೊಲೀಸರು ನಡೆಸಿದ ದೌರ್ಜನ್ಯದಿಂದಾಗಿ ಪಿ. ಚಿದಂಬರಂ, ಕೆ.ಸಿ. ವೇಣುಗೋಪಾಲ್ ಸೇರಿದಂತೆ ಹಲವು ಮುಖಂಡರು ಗಾಯಗೊಂಡರು ಎಂದು ಕಾಂಗ್ರೆಸ್ ಪಕ್ಷ ಹೇಳಿದೆ.

'ನಾನು ಹಾಗೂ ಮೂವರು ಸಂಸದರು ಪಕ್ಷದ ಕಚೇರಿಗೆ ಬೆಳಿಗ್ಗೆ ಹೊರಟಿದ್ದೆವು. ನಮ್ಮನ್ನು ತಡೆದ ಪೊಲೀಸರು, ಪಕ್ಷದ ಕಚೇರಿಗೆ ಬಿಡುವುದಾಗಿ ಹೇಳಿದರು. ಅವರು ನಮ್ಮನ್ನು ಪೊಲೀಸ್ ಠಾಣೆಗೆ ಕರೆದೊಯ್ದು ಸಂಜೆಯ ವರೆಗೂ ಕೂರಿಸಿಕೊಂಡರು. ಇದು ದೆಹಲಿ ಪೊಲೀಸರ ಕಾರ್ಯವೈಖರಿ' ಎಂದು ಪಕ್ಷದ ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ಕಿಡಿಕಾರಿದರು.

ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ನವದೆಹಲಿಯಲ್ಲಿ ಸೋಮವಾರ ಜಾರಿ ನಿರ್ದೇಶನಾಲಯದ ವಿಚಾರಣೆಗೆ ಹಾಜರಾಗಲು ಇ.ಡಿ ಕಚೇರಿಗೆ ಕಾಲ್ನಡಿಗೆಯಲ್ಲೇ ತೆರಳಿದರು —ಎಎಫ್‌ಪಿ ಚಿತ್ರ

- ಗುಜರಾತ್, ಪಂಜಾಬ್, ಹರಿಯಾಣ, ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ರಾಜಸ್ಥಾನ, ಉತ್ತರ ಪ್ರದೇಶ, ಹಿಮಾಚಲ ಪ್ರದೇಶ, ಅರುಣಾಚಲ ಪ್ರದೇಶ, ಅಸ್ಸಾಂ, ತಮಿಳುನಾಡು ಸೇರಿ ಹಲವು ರಾಜ್ಯಗಳಲ್ಲಿ ಪ್ರತಿಭಟನೆ ನಡೆದಿದೆ
- ಮಧ್ಯಪ್ರದೇಶದ ಇ.ಡಿ. ಕಚೇರಿಯ ಮುಂದೆ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಧರಣಿ ನಡೆಸಿದ್ದಾರೆ

'ಭ್ರಷ್ಟಾಚಾರದ ಪರ ಪ್ರತಿಭಟನೆ'

ಒಂದನೇ ಪುಟದಿಂದ

'ನ್ಯಾಷನಲ್ ಹೆರಾಲ್ಡ್ ಪತ್ರಿಕೆ ಪ್ರಕಟಿಸುವ ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್‌ನ ₹ 2 ಸಾವಿರ ಕೋಟಿ ಮೌಲ್ಯದ ಆಸ್ತಿಯನ್ನು ಕಬಳಿಸಲು ಗಾಂಧಿ ಕುಟುಂಬ ಯತ್ನಿಸಿದೆ' ಎಂದು ಆರೋಪಿಸಿರುವ ಇರಾನಿ, 'ಕಂಪನಿಯಲ್ಲಿ 5 ಸಾವಿರಕ್ಕೂ ಹೆಚ್ಚಿನ ಸ್ವಾತಂತ್ರ್ಯ ಯೋಧರು ಷೇರುಗಳನ್ನು ಹೊಂದಿದ್ದರು. ಈಗ ಇಡೀ ಕಂಪನಿ ಗಾಂಧಿ ಕುಟುಂಬದ ಮಾಲೀಕತ್ವಕ್ಕೆ ಬಂದಿದೆ' ಎಂದರು.

ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಆರ್ಥಿಕ ಅಪರಾಧ ಎಸಗಿರುವ ವ್ಯಕ್ತಿಯ ಪರವಾಗಿ ಡಿ.ಕೆ. ಶಿವಕುಮಾರ್, ಕೆ.ಸಿ.ವೇಣುಗೋಪಾಲ್, ಪಿ.ಚಿದಂಬರಂ ಸೇರಿದಂತೆ ಹಲವು ನಾಯಕರು ಧ್ವನಿ ಎತ್ತಿದ್ದಾರೆ. ಸತ್ಯಾಗ್ರಹದ ಪರಿಕಲ್ಪನೆಯನ್ನು ಪುನರ್ ವ್ಯಾಖ್ಯಾನ ಮಾಡಿದ್ದಾರೆ' ಎಂದು ವ್ಯಂಗ್ಯವಾಡಿದರು.

ದೇಶದಲ್ಲಿ ಸರ್ವಾಧಿಕಾರ: 'ಕೈ' ಕಿಡಿ

ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಮೇಲೆ ವಾಗ್ದಾಳಿ ನಡೆಸಿರುವ ಕಾಂಗ್ರೆಸ್, 'ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡು ವಿರೋಧ ಪಕ್ಷದ ನಾಯಕರನ್ನು ಹಣಿಯುವ ಕೆಲಸ ಮಾಡಲಾಗುತ್ತಿದೆ. ದೇಶದಲ್ಲಿ ಸರ್ವಾಧಿಕಾರ ಹಾಗೂ ಅಘೋಷಿತ ತುರ್ತು ಪರಿಸ್ಥಿತಿ ವಾತಾವರಣ ಇದೆ' ಎಂದು ಆರೋಪಿಸಿದೆ.

'ಫ್ಯಾಸಿಸ್ಟ್‌ಗಳು ವಿರೋಧ ಪಕ್ಷಗಳನ್ನು ಇಷ್ಟ ಪಡುವುದಿಲ್ಲ. ಆದರೆ, ವಿರೋಧ ಪಕ್ಷ ಇದ್ದಾಗಲೇ ಪ್ರಜಾಪ್ರಭುತ್ವ ಕೆಲಸ ಮಾಡುತ್ತದೆ' ಎಂದು ರಾಜಸ್ಥಾನದ ಮುಖ್ಯಮಂತ್ರಿ ಅಶೋಕ ಗೆಹಲೋತ್ ಹೇಳಿದರು.

'ಬೆಲೆ ಏರಿಕೆ, ಹಣದುಬ್ಬರ, ಕೋಮುಗಲಭೆಯಂತಹ ಸೂಕ್ಷ್ಮ ವಿಚಾರಗಳನ್ನು ದೇಶವು ಎದುರಿಸುತ್ತಿರುವ ಸಂದರ್ಭದಲ್ಲೇ ಸರ್ಕಾರವು ಸುಳ್ಳು ಪ್ರಕರಣಗಳನ್ನು ದಾಖಲಿಸುವ ಮೂಲಕ ಸಮಯ ವ್ಯರ್ಥ ಮಾಡುತ್ತಿದೆ' ಎಂದರು. ಛತ್ತೀಸಗಡದ ಮುಖ್ಯಮಂತ್ರಿ ಭೂಪೇಶ್ ಬಘೆಲ್ ಮಾತನಾಡಿ, 'ಕಾಂಗ್ರೆಸ್‌ನ ಹಲವು ಕಾರ್ಯಕರ್ತರು ಶಾಂತಿಯುತ ಪ್ರತಿಭಟನೆ ನಡೆಸಲು ಮುಂದಾಗಿದ್ದರು. ಕಾಂಗ್ರೆಸ್ ಕೇಂದ್ರ ಕಚೇರಿಗೆ ಹೋಗಲು ಅವರಿಗೆ ಅವಕಾಶ ನಿರಾಕರಿಸಲಾಯಿತು. ದೇಶದಲ್ಲಿ ಸರ್ವಾಧಿಕಾರಿ ಸರ್ಕಾರ ಇದೆ' ಎಂದು ಕಿಡಿಕಾರಿದರು.

ಪಕ್ಷದ ಮುಖ್ಯ ವಕ್ತಾರ ರಣದೀಪ್ ಸುರ್ಜೇವಾಲಾ , 'ಕಾಂಗ್ರೆಸ್ ನಾಯಕರು ಯಾವುದೇ ತಪ್ಪು ಮಾಡಿಲ್ಲ. ಗೋಡ್ಸೆ ವಂಶಸ್ಥರು ಸತ್ಯವನ್ನು ಹೆದರಿಸುತ್ತಿದ್ದಾರೆ. ಅವರು ಇದರಲ್ಲಿ ಯಶಸ್ಸು ಗಳಿಸುವುದಿಲ್ಲ' ಎಂದರು.

ಸುದ್ದಿ 2 ನಿಮಿಷ

ನಿರುದ್ಯೋಗ ಕುರಿತ ಚರ್ಚೆ: ಒವೈಸಿಗೆ ವರುಣ್ ಗಾಂಧಿ ಧನ್ಯವಾದ

ನವದೆಹಲಿ: 'ನಿರುದ್ಯೋಗವು ದೇಶದ ಅತ್ಯಂತ ಜ್ವಲಂತ ಸಮಸ್ಯೆಯಾಗಿದೆ' ಎಂದಿರುವ ಬಿಜೆಪಿ ಸಂಸದ ವರುಣ್ ಗಾಂಧಿ ಈ ಕುರಿತು ಐಎಂಐಎಂ ಮುಖ್ಯಸ್ಥ ಹಾಗೂ ಸಂಸದ ಅಸಾದುದ್ದೀನ್ ಒವೈಸಿ ಅವರು ತಮ್ಮ ಭಾಷಣವೊಂದರಲ್ಲಿ ನೀಡಿರುವ ಅಂಕಿ–ಅಂಶಗಳ ಕುರಿತು ಟ್ವೀಟ್‌ನಲ್ಲಿ ಶ್ಲಾಘಿಸಿದ್ದಾರೆ.

'ನಿರುದ್ಯೋಗದ ಕುರಿತು ಇಡೀ ದೇಶದ ಮುಖಂಡರು ಸರ್ಕಾರದ ಗಮನ ಸೆಳೆಯಬೇಕು. ನಿರುದ್ಯೋಗಿ ಯುವಕರಿಗೆ ನ್ಯಾಯ ಸಿಗಬೇಕು. ಆಗ ಮಾತ್ರ ದೇಶ ಶಕ್ತಿಯುತವಾಗುತ್ತದೆ' ಎಂದೂ ವರುಣ್ ಹೇಳಿದ್ದಾರೆ.

'ನಿರುದ್ಯೋಗ ಕುರಿತು ನಾನು ಎತ್ತಿರುವ ಪ್ರಶ್ನೆಗಳನ್ನು ಒವೈಸಿ ಅವರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ' ಎಂದು ಟ್ವೀಟ್ ಮಾಡಿರುವ ವರುಣ್, ಈ ಸಂಬಂಧ ಒವೈಸಿ ಅವರ ಭಾಷಣದ ವಿಡಿಯೊವೊಂದನ್ನು ತಮ್ಮ ಪೋಸ್ಟ್‌ನಲ್ಲಿ ಹಂಚಿಕೊಂಡಿದ್ದಾರೆ.

ಆನ್‌ಲೈನ್ ಬೆಟ್ಟಿಂಗ್: ಕೇಂದ್ರದ ಸೂಚನೆ

ನವದೆಹಲಿ: ಆನ್‌ಲೈನ್ ಬೆಟ್ಟಿಂಗ್ ವೇದಿಕೆಗಳ ಕುರಿತು ಜಾಹೀರಾತುಗಳನ್ನು ಪ್ರಕಟಿಸುವುದು ಅಥವಾ ಪ್ರಸಾರ ಮಾಡುವುದನ್ನು ನಿಯಂತ್ರಿಸಲು ಕೇಂದ್ರ ಸರ್ಕಾರ ಮುದ್ರಣ, ಎಲೆಕ್ಟ್ರಾನಿಕ್ ಮತ್ತು ಡಿಜಿಟಲ್ ಮಾಧ್ಯಮಗಳಿಗೆ ಸೋಮವಾರ ಹೊಸ ಸಲಹೆ, ಸೂಚನೆಗಳನ್ನು ನೀಡಿದೆ.

ಈ ವೇದಿಕೆಗಳು ಯುವ ಸಮುದಾಯ ಮತ್ತು ಮಕ್ಕಳನ್ನು ಒಳಗೊಂಡಿರುವ ಗ್ರಾಹಕರಿಗೆ 'ಗಮನಾರ್ಹ'ವಾಗಿ ಹಣಕಾಸಿನ ಮತ್ತು ಸಾಮಾಜಿಕ- ಆರ್ಥಿಕ ಅಪಾಯವನ್ನು ಉಂಟು ಮಾಡುತ್ತವೆ ಎಂದು ಸರ್ಕಾರ ಉಲ್ಲೇಖಿಸಿದೆ.

2020ರ ಡಿಸೆಂಬರ್ 12ರಂದು ಟಿ.ವಿ ಚಾನೆಲ್‌ಗಳಿಗೆ ಆನ್‌ಲೈನ್ ಗೇಮಿಂಗ್ ಕುರಿತು ಮಾರ್ಗಸೂಚಿ ಹೊರಬಿದ್ದಿತ್ತು. ಇದೀಗ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಹೊಸ ಸಲಹೆಗಳನ್ನು ನೀಡಿದ್ದು, ಭಾರತೀಯ ಜಾಹೀರಾತು ಗುಣಮಟ್ಟ ಮಂಡಳಿ ಹೊರಡಿಸಿರುವ ಮಾರ್ಗಸೂಚಿಗಳನ್ನು ಪಾಲಿಸುವಂತೆ ಸೂಚಿಸಿದೆ.

ಆನ್‌ಲೈನ್ ಬೆಟ್ಟಿಂಗ್ ವೆಬ್‌ಸೈಟ್‌ಗಳು ಅಥವಾ ಪ್ಲಾಟ್‌ಫಾರ್ಮ್‌ಗಳ ಹಲವು ಜಾಹೀರಾತುಗಳು ಮುದ್ರಣ, ಎಲೆಕ್ಟ್ರಾನಿಕ್, ಸಾಮಾಜಿಕ ಮಾಧ್ಯಮ ಮತ್ತು ಆನ್‌ಲೈನ್ ಮಾಧ್ಯಮಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಕಾರಣ ಸಚಿವಾಲಯವು ಆನ್‌ಲೈನ್ ಬೆಟ್ಟಿಂಗ್ ಕುರಿತು ಅಗತ್ಯ ಸಲಹೆಗಳನ್ನು ನೀಡಿದೆ.

ಪ್ರಕಾಶ್ ಆಮ್ಟೆ ಆಸ್ಪತ್ರೆಗೆ ದಾಖಲು

ನಾಗಪುರ(ಪಿಟಿಐ): ಮಹಾರಾಷ್ಟ್ರ ಮೂಲದ ಸಾಮಾಜಿಕ ಕಾರ್ಯಕರ್ತ ಹಾಗೂ ಮ್ಯಾಗ್ಸೆಸೆ ಪುರಸ್ಕೃತ ಪ್ರಕಾಶ್ ಆಮ್ಟೆ ಅವರು ಅನಾರೋಗ್ಯದಿಂದಾಗಿ ಪುಣೆಯ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಪುಣೆಯ ಬಿಜೆ ವೈದ್ಯಕೀಯ ಕಾಲೇಜಿನಲ್ಲಿ ನಡೆದ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಅವರಿಗೆ ಕೆಮ್ಮು ಮತ್ತು ಜ್ವರ ಕಾಣಿಸಿಕೊಂಡಿತ್ತು. ಈ ಹಿನ್ನೆಲೆಯಲ್ಲಿ ಅವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಜೊತೆಗೆ ಅವರು ಪೂರ್ತಿ ವಿಶ್ರಾಂತಿ ಪಡೆಯಬೇಕೆಂದು ವೈದ್ಯರು ತಿಳಿಸಿದ್ದಾರೆ ಎಂದು ಅವರ ಕುಟುಂಬ ಸದಸ್ಯರೊಬ್ಬರು ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವಾಹನ
Four Wheelers Selling
TATA

"ಶ್ರೀಭಗವತಿ ಜ್ಯೋತಿಷ್ಯಾಲಯ" ಸ್ತ್ರೀಪುರುಷ ವಶೀಕರಣ, ಗಂಡ ಹೆಂಡತಿ ಕಲಹ, ಉದ್ಯೋಗ, ಪ್ರೇಮವಿಚಾರ, ಇನ್ನಿತರ ಸಮಸ್ಯೆಗಳಿಗೆ 100% ಪರಿಹಾರ. ಪಂಡಿತ್ ಪರಶುರಾಮಶಾಸ್ತ್ರೀ. 8618839027

✓ ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800-68,000. 9538811104, 9538811223

Marketing & Sales

೧೫ ವರ್ಷದ ಹರ್ಬಲ್ ಹೆಲ್ತ್‌ಕೇರ್‌ಗೆ ಸ್ತ್ರೀ-ಪುರುಷರು ಡೈರೆಕ್ಟ್ ಮಾರ್ಕೆಟಿಂಗ್‌ಗೆ ಬೇಕಾಗಿದ್ದಾರೆ. ಬಿ.ಪಿ,ಶುಗರ್, ವಾತ, ಕೀಲುನೋವು, ಹೆಲ್ತ್ ಮತ್ತು ಇಮ್ಯುನಿಟಿ ಡ್ರಿಂಕ್, ಮುಖದ ಶಾಶ್ವತ ಕಲೆ ಹಾಗೂ ಅಂದಕ್ಕೆ, ಲೈಂಗಿಕ ಸಮಸ್ಯೆ ನಿವಾರಕಗಳನ್ನು ಕರ್ನಾಟಕದ ವಿವಿಧ ಪರಿಸರದಲ್ಲಿ ಮಾರ್ಕೆಟ್ ಮಾಡಲು ಸಂಪರ್ಕಿಸಿ: 8618178317

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ನೋಟಿಸ್

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಬೆಂಗಳೂರು–560 049, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಬೈಯಪ್ಪನಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 34/3 (ಮೂವತ್ತ ನಾಲ್ಕು ಸಬ್ ಮೂರು) ರಲ್ಲಿರುವ ವಿಸ್ತೀರ್ಣ 0 ಎಕರೆ 13 (ಸೊನ್ನೆ ಎಕರೆ ಹದಿಮೂರು ಗುಂಟೆ) ಜಮೀನನ್ನು ಬೆಂಗಳೂರು–560049, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಭಟ್ಟರಹಳ್ಳಿ ಗ್ರಾಮ, ಬನಶಂಕರಿ ಬಡಾವಣೆ, 5ನೇ ಅಡ್ಡ ರಸ್ತೆ, ಮನೆ ನಂ. 13ರಲ್ಲಿ ವಾಸವಾಗಿರುವ ನನ್ನ ಕಕ್ಷಿದಾರರಾದ ಶ್ರೀ ಎ. ಲವ ಕುಮಾರ್ ಮತ್ತು ಶ್ರೀಮತಿ ಎಸ್. ಸುನಿತ ಎಂಬುವವರು, ಬೆಂಗಳೂರು–560049, ಬೆಂಗಳೂರು ಪೂರ್ವ ತಾಲ್ಲೂಕು, ವಿರ್ಗೋನಗರ ಅಂಚೆ, ಬಿದರಹಳ್ಳಿ ಹೋಬಳಿ, ಬೈಯಪ್ಪನಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಲೇಟ್: ಕೃಷ್ಣಪ್ಪನವರ ಧರ್ಮಪತ್ನಿಯಾದ ಸುಮಾರು 73 ವರ್ಷ ವಯಸ್ಸುಳ್ಳ ಶ್ರೀಮತಿ ಪುಟ್ಟಮ್ಮ ಮತ್ತು ಇವರ ಮಕ್ಕಳಾದ ಬಿ.ಕೆ. ಪಿಳ್ಳಪ್ಪ, ಸುಬ್ರಮಣಿ ಕೆ, ರವಿಕುಮಾರ್ ಕೆ. ಮತ್ತು ಶ್ರೀಮತಿ ಹೇಮ ಎಂಬುವರಿಂದ ಖರೀದಿಸಲು ಇಚ್ಛಿಸಿದ್ದಾರೆ. ಈ ಜಮೀನಿನ ಬಗ್ಗೆ ಸಾರ್ವಜನಿಕರ ತಕರಾರಿದ್ದರೆ ಅಥವಾ ತಮಗೂ ಹಕ್ಕು ಇದೆ ಎಂಬುದಾಗಿದ್ದರೆ ಸೂಕ್ತ ದಾಖಲೆಗಳೊಂದಿಗೆ ಖುದ್ದಾಗಿ ಅಥವಾ ಬರವಣಿಗೆಯ ಮುಖಾಂತರವಾಗಿ ಕೆಳಕಂಡ ವಿಳಾಸದಲ್ಲಿ 7 ದಿನಗಳೊಳಗೆ ಸಂಪರ್ಕಿಸುವುದು.

ದಿ: 11.06.2022
ಸಹಿ/- ಎನ್.ಬಾಬು, ವಕೀಲರು, ನಂ.1, ಆವಲಹಳ್ಳಿ, ಹಳೇ ಮದ್ರಾಸು ರಸ್ತೆ, ವಿರ್ಗೋನಗರ ಅಂಚೆ, ಬೆಂಗಳೂರು – 49. ಮೊ: 9341860947, 9845642777 (ಎ.ಲವಕುಮಾರ್)

ಪ್ರವಾಸ
Travel

9.7.2022 ಗುಜರಾತ್, ಮಧ್ಯಪ್ರದೇಶ್4.9.2022, 3.10.2022ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್4.9.2022, 4.10.2022ದೆಹಲಿ, ಅಮೃತ್‌ಸರ್, ವೈಷ್ಣೋದೇವಿ,ಕಾಶಿ, ಪ್ರಯಾಗ್‌ರಾಜ್, ಗಯಾ,ನೇಪಾಳ, ಮುಕ್ತಿನಾಥ್, ಕರ್ನಾಟಕ ಹೆರಿಟೇಜ್ ಟೂರ್ಸ್(ಹನುಮಂತನಗರ) 9845035349, 9482435755

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಉದ್ಯೋಗಾವಕಾಶ
General

✓ ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

✓ ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

PUBLIC NOTICE
To Place your Classified Ads Contact: 9880856233

ಭವಿಷ್ಯ
Astrology

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ ವಶೀಕರಣ ಸ್ಪೆಷಲಿಸ್ಟ್ ಪಂಡಿತ್.ರಾಘವೇಂದ್ರ ಗುರೂಜಿ ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಫೋನಿನ ಮೂಲಕ ಪರಿಹಾರ. ದೇವಸ್ಥಾನ ಪಕ್ಕ, ಮಂತ್ರಾಲಯ: 9880788899

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ
Classifieds EDUCATION SPECIAL
SPECIAL RATES FOR • Admission Notice, • Education Success • Congratulation Ads
For More Details Contact:
Santhosh Kumar : 9880856233
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

ಅಣುಶಕ್ತಿ ಶಸ್ತ್ರಾಸ್ತ್ರ ಬಲವೃದ್ಧಿಗೆ ಭಾರತ, ಪಾಕ್ ಕ್ರಮ –ಸಿಪ್ರಿ

ನವದೆಹಲಿ (ಪಿಟಿಐ): ಭಾರತವು ತನ್ನ ಅಣುಶಕ್ತಿ ಶಸ್ತ್ರಾಸ್ತ್ರಗಳ ಕೋಠಿಯನ್ನು ಇನ್ನಷ್ಟು ಬಲಪಡಿಸುತ್ತಿರುವಂತೆ ತೋರುತ್ತಿದೆ. ಈ ವರ್ಷದ ಜನವರಿಯಲ್ಲಿ ಇದ್ದಂತೆ 160 ಅಣ್ವಸ್ತ್ರ ಸಿಡಿತಲೆಗಳನ್ನು ಹೊಂದಿದೆ ಎಂದು ಸ್ಟಾಕ್‌ಹೋಂನ ಸಂಸ್ಥೆಯೊಂದು ತಿಳಿಸಿದೆ.

ಸ್ಟಾಕ್‌ಹೋಂ ಅಂತರರಾಷ್ಟ್ರೀಯ ಶಾಂತಿ ಸಂಶೋಧನಾ ಸಂಸ್ಥೆ (ಸಿಪ್ರಿ) ಈ ಕುರಿತು ಹೇಳಿಕೆ ನೀಡಿದ್ದು, ನೆರೆಯ ರಾಷ್ಟ್ರ ಪಾಕಿಸ್ತಾನ ಕೂಡಾ ತನ್ನ ಅಣುಶಕ್ತಿ ಶಸ್ತ್ರಾಸ್ತ್ರ ಕೋಠಿಯನ್ನು ಬಲಪಡಿಸಲು ಆದ್ಯತೆ ನೀಡಿದೆ ಎಂದು ತಿಳಿಸಿದೆ.

ಇನ್ನೊಂದೆಡೆ, ಚೀನಾ 300ಕ್ಕೂ ಅಧಿಕ ಕ್ಷಿಪಣಿ ಉಡಾವಣಾ ತಾಣಗಳನ್ನು ಅಭಿವೃದ್ಧಿಪಡಿಸುತ್ತಿದ್ದು, ದೊಡ್ಡ ಪ್ರಮಾಣದಲ್ಲೇ ಸಾಮರ್ಥ್ಯ ವೃದ್ಧಿಸುತ್ತಿದೆ. ಈ ವರ್ಷದ ಜನವರಿವರೆಗೆ ಚೀನಾದ ಬಳಿ 350 ಅಣ್ವಸ್ತ್ರ ಸಿಡಿತಲೆಗಳಿವೆ ಎಂದು ಸಿಪ್ರಿ ತಿಳಿಸಿದೆ.

ಚೀನಾದ ಬಳಿ ಇರುವ ಸಿಡಿತಲೆಗಳ ಸಂಖ್ಯೆ 2021ರಲ್ಲಿಯೂ 350 ಆಗಿತ್ತು ಎಂದು ಸಿಪ್ರಿ ಅಂದಾಜು ಮಾಡಿದ್ದರೂ, ನೂತನ ಉಡಾವಣಾ ತಾಣಗಳು 2021ರಲ್ಲಿ ಕಾರ್ಯಾರಂಭ ಮಾಡಿರುವ ಕಾರಣ ಬಳಕೆಗೆ ಹೆಚ್ಚಿನ ಸಂಖ್ಯೆ ಸಿಡಿತಲೆಗಳು ಹೆಚ್ಚಿರಬಹುದು ಎಂದು ಹೇಳಲಾಗಿದೆ.

ಸಿಪ್ರಿ ತನ್ನ ವರದಿಯಲ್ಲಿ ದಾಖಲಿಸಿರುವಂತೆ, ಭಾರತದ ಬಳಿ ಜನವರಿ 2021ರಲ್ಲಿ 156 ಅಣ್ವಸ್ತ್ರ ಸಿಡಿತಲೆಗಳಿದ್ದು, 2022ರಲ್ಲಿ 160ಕ್ಕೆ ಏರಿದೆ. ಪಾಕಿಸ್ತಾನದ ಬಳಿ ಜನವರಿ 2021ರಲ್ಲಿ 165 ಅಣ್ವಸ್ತ್ರ ಸಿಡಿತಲೆಗಳಿದ್ದವು. 2022ರಲ್ಲಿಯೇ ಅಷ್ಟೇ ಸಂಖ್ಯೆಯಲ್ಲಿ ಉಳಿದಿವೆ. ಉಭಯ ದೇಶಗಳು ತನ್ನ ಅಣುಶಕ್ತಿ ಸಾಮರ್ಥ್ಯ ವೃದ್ಧಿಗೆ ಒತ್ತು ನೀಡಿವೆ. ನವೀನ ಪ್ರಯೋಗ ವ್ಯವಸ್ಥೆ ಅಭಿವೃದ್ಧಿಗೆ ಆದ್ಯತೆ ನೀಡಿವೆ ಎಂದು ತಿಳಿಸಿದೆ.

ಪಶ್ಚಿಮ ಬಂಗಾಳ ವಿವಿ ಕಾನೂನು ತಿದ್ದುಪಡಿ ಮಸೂದೆ ಅಂಗೀಕಾರ

ಕೋಲ್ಕತ್ತ (ಪಿಟಿಐ): ರಾಜ್ಯಪಾಲ ಜಗದೀಪ್ ಧನಖರ್ ಅವರ ಬದಲಾಗಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನೇ ಪಶ್ಚಿಮ ಬಂಗಾಳದ ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಯನ್ನಾಗಿಸುವ ಮಸೂದೆಯನ್ನು ರಾಜ್ಯ ವಿಧಾನಸಭೆಯಲ್ಲಿ ಅಂಗೀಕರಿಸಲಾಯಿತು. ಬಿಜೆಪಿ ಶಾಸಕರು ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದರು.

ರಾಜ್ಯ ಶಿಕ್ಷಣ ಸಚಿವ ಬ್ರತ್ಯಾ ಬಸು ಅವರು, ಪಶ್ಚಿಮ ಬಂಗಾಳ ವಿಶ್ವವಿದ್ಯಾನಿಲಯ ಕಾನೂನುಗಳ (ತಿದ್ದುಪಡಿ) ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಿದರು. 'ಮುಖ್ಯಮಂತ್ರಿ ರಾಜ್ಯದ ವಿಶ್ವವಿದ್ಯಾಲಯಗಳ ಕುಲಪತಿಯಾದರೆ ತಪ್ಪೇನು ಇಲ್ಲ . ರಾಜ್ಯಪಾಲರು ಹಾಗೂ ಹಾಲಿ ಕುಲಪತಿ ಸಾಕಷ್ಟು ಬಾರಿ ಶಿಷ್ಟಾಚಾರವನ್ನು ಉಲ್ಲಂಘಿಸಿದ್ದಾರೆ' ಎಂದು ಹೇಳಿದರು.

ವಿಧಾನಸಭೆಯ 294 ಸದಸ್ಯರ ಪೈಕಿ 182 ಮಂದಿ ಮಸೂದೆ ಪರ ಮತ ಚಲಾಯಿಸಿದೆ, 40 ಮಂದಿ ಮಸೂದೆ ವಿರುದ್ಧ ಮತ ಚಲಾಯಿಸಿದರು.

ವಿಮಾನದಲ್ಲಿ ಕೇರಳ ಸಿ.ಎಂ ವಿರುದ್ಧ ಪ್ರತಿಭಟನೆ

ತಿರುವನಂತಪುರ: ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಪ್ರಯಾಣಿಸುತ್ತಿದ್ದ ವಿಮಾನದಲ್ಲಿ ಕೆಲವರು ಅವರ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟಿಸಿರುವ ಘಟನೆ ನಡೆದಿದೆ.

ಪಿಣರಾಯಿ ವಿಜಯನ್

ಈ ಕುರಿತು ಕೆಲ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ವಿಜಯನ್ ಅವರು ಸೋಮವಾರ ಅವರ ತವರು ಕ್ಷೇತ್ರ ಕಣ್ಣೂರಿನಿಂದ ತಿರುವನಂತಪುರಕ್ಕೆ ಮರಳುವಾಗ ವಿಮಾನದಲ್ಲಿ ಈ ಘಟನೆ ನಡೆದಿದೆ. ಚಿನ್ನ ಅಕ್ರಮ ಸಾಗಣೆ ಪ್ರಕರಣದಲ್ಲಿ ವಿಜಯನ್ ಅವರು ರಾಜೀನಾಮೆ ನೀಡಬೇಕು ಎಂದು ವಿಮಾನದೊಳಗೆ ಬಂದು ಇಬ್ಬರು ಪ್ರತಿಭಟಿಸಿದ್ದಾರೆ. ಕೂಡಲೇ ಅಲ್ಲಿದ್ದ ಭದ್ರತಾ ಸಿಬ್ಬಂದಿ ಅವರನ್ನು ಕೆಳಗೆ ತಳ್ಳಿದ್ದಾರೆ.

ಚಿನ್ನ ಅಕ್ರಮ ಸಾಗಣೆ ಪ್ರಕರಣದಲ್ಲಿ ಪ್ರಮುಖ ಆರೋಪಿ ಸ್ವಪ್ನಾ ಸುರೇಶ್ ಜೊತೆ ಸಿಎಂ ವಿಜಯನ್ ಅವರ ಹೆಸರು ಕೇಳಿ ಬಂದಿದೆ. ಸಿಎಂ ರಾಜೀನಾಮೆ ನೀಡಬೇಕು ಎಂದು ಕೇರಳದ ಹಲವೆಡೆ ಕಳೆದ ಮೂರು ದಿನಗಳಿಂದ ವಿರೋಧ ಪಕ್ಷಗಳು ಪ್ರತಿಭಟನೆ ನಡೆಸುತ್ತಿವೆ.



ಮನೆ ನೆಲಸಮ: ಹೈಕೋರ್ಟ್‌ಗೆ ಅರ್ಜಿ

ಪ್ರಯಾಗರಾಜ್ (ಪಿಟಿಐ): ಜೂನ್ 10 ರಂದು ನಡೆದ ಹಿಂಸಾಚಾರದ ಸೂತ್ರಧಾರನ ₹ 5 ಕೋಟಿ ವೆಚ್ಚದ ಮನೆಯನ್ನು ಪ್ರಯಾಗರಾಜ್ ಅಭಿವೃದ್ಧಿ ಪ್ರಾಧಿಕಾರ (ಪಿಡಿಎ) ನೆಲಸಮಗೊಳಿಸಿರುವುದನ್ನು ವಿರೋಧಿಸಿ ಪ್ರಯಾಗರಾಜ್‌ನ ವಕೀಲರ ಸಂಘ ಅಲಹಾಬಾದ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗೆ ಇ-ಮೇಲ್ ಮೂಲಕ ಅರ್ಜಿ ಸಲ್ಲಿಸಿದೆ.

ಜಾವೇದ್ ಅಹ್ಮದ್ ಪತ್ನಿ ಪರ್ವೀನ್ ಫಾತಿಮಾ ಮನೆ ಮಾಲೀಕರು. ಈ ಮನೆಯನ್ನು ಫಾತಿಮಾ ಅವರಿಗೆ ಪೋಷಕರು ಮದುವೆಗೆ ಮೊದಲು ನೀಡಿದ್ದರು. ಜಾವೇದ್ ಅವರಿಗೆ ಮನೆ ಮತ್ತು ಪ್ಲಾಟ್‌ನ ಮೇಲೆ ಯಾವುದೇ ಮಾಲೀಕತ್ವ ಇರಲಿಲ್ಲ. ನೆಲ ಸಮ ಮಾಡಿರುವುದು ಕಾನೂನಿಗೆ ವಿರುದ್ಧವಾಗಿದೆ. ಇದನ್ನು ಸಮರ್ಥಿಸಲು ಪಿಡಿಎ ಜೂನ್ 11 ರಂದು ಮನೆ ಮೇಲೆ ನೋಟಿಸ್ ಅಂಟಿಸಿದ್ದು, ಹಿಂದಿನ ದಿನಾಂಕದ ಶೋಕಾಸ್ ನೋಟಿಸ್ ಬಗ್ಗೆ ಉಲ್ಲೇಖಿಸಿದೆ ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.

'ಪಿಡಿಎಯಿಂದ ನಕ್ಷೆ ಮಂಜೂರಾತಿ ಪಡೆಯದೆ ಮನೆ ನಿರ್ಮಿಸಲಾಗಿದೆ. ಇದಕ್ಕಾಗಿ ಮೇ 10 ರಂದು ಅವರಿಗೆ ನೋಟಿಸ್ ನೀಡಲಾಗಿತ್ತು. ಮೇ 24 ರಂದು ಅವರ ಕಡೆಯಿಂದ ದಾಖಲೆ ಹಾಜರುಪಡಿಸಲು ತಿಳಿಸಲಾಯಿತು. ಆದರೆ ಆ ದಿನಾಂಕದಂದು ಜಾವೇದ್ ಅಥವಾ ಅವರ ವಕೀಲರು ಹಾಜರಾಗಲಿಲ್ಲ. ಮೇ 25ರಂದು ಕೆಡವಲು ಆದೇಶ ಹೊರಡಿಸಲಾಗಿದೆ' ಎಂದು ಪಿಡಿಎ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜೆಎನ್‌ಯು, ಜೆಎಂಐನಲ್ಲಿ ಪ್ರತಿಭಟನೆ: ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದ ವಿದ್ಯಾರ್ಥಿನಿ ಅಫ್ರೀನ್ ಫಾತಿಮಾ ಅವರ ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿನ ಮನೆಯನ್ನು ಸ್ಥಳೀಯಾಡಳಿತವು ನೆಲಸಮಗೊಳಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಜೆಎನ್‌ಯು ಮತ್ತು ಜಾಮಿಯಾ ಮಿಲಿಯಾ ಇಸ್ಲಾಮಿಯಾದಲ್ಲಿ (ಜೆಎಂಐ) ವಿವಿಧ ವಿದ್ಯಾರ್ಥಿ ಸಂಘಟನೆಗಳು ಸೋಮವಾರ ಪ್ರತಿಭಟನೆ ನಡೆಸಿವೆ. ಆಲ್ ಇಂಡಿಯಾ ಸ್ಟೂಡೆಂಟ್ಸ್ ಅಸೋಸಿಯೇಷನ್ (ಎಐಎಸ್‌ಎ) ನೇತೃತ್ವದಲ್ಲಿ ಜಂತರ್–ಮಂತರ್‌ನಲ್ಲೂ ಪ್ರತಿಭಟನೆ ನಡೆಯಿತು.

ಜೂನ್ 10ರಂದು ಪ್ರಯಾಗರಾಜ್‌ನಲ್ಲಿ ನಡೆದಿದ್ದ ಪ್ರತಿಭಟನೆಯ ರೂವಾರಿ ಎನ್ನಲಾದ ಜಾವೇದ್ ಮಹಮ್ಮದ್ ಅವರ ಮನೆಯನ್ನು ಭಾನುವಾರ ನೆಲಸಮಗೊಳಿಸಲಾಗಿತ್ತು. ಜಾವೇದ್ ಅವರ ಮಗಳು.

ದ್ವೇಷ ಭಾಷಣಕ್ಕೆ ಕಡಿವಾಣ: ಎಲ್ಲ ಹಂತದಲ್ಲಿ ಪರಿಣಾಮಕಾರಿ ವ್ಯವಸ್ಥೆ ಅಗತ್ಯ –ಕೋರ್ಟ್

ನವದೆಹಲಿ: ದ್ವೇಷ ಭಾಷಣಕ್ಕೆ ಕಡಿವಾಣ ಹಾಕಲು ಎಲ್ಲ ಹಂತದಲ್ಲಿಯೂ ಪರಿಣಾಮಕಾರಿ ವ್ಯವಸ್ಥೆ ಜಾರಿಗೆ ಬರಬೇಕಾಗಿದೆ ಎಂದು ದೆಹಲಿ ಹೈಕೋರ್ಟ್ ಸೋಮವಾರ ಅಭಿಪ್ರಾಯಪಟ್ಟಿತು.

ನಿರ್ದಿಷ್ಟ ಸಮುದಾಯವನ್ನು ಉದ್ದೇಶಿಸಿ ದ್ವೇಷ ಕಾರುವವರದು ತಾರತಮ್ಯ ಮನಸ್ಥಿತಿಯಷ್ಟೇ ಅಲ್ಲ. ಬಹಿಷ್ಕಾರ, ಹತ್ಯಾಕಾಂಡದ ಮನಸ್ಥಿತಿಗೆ ಸಮಾನವಾದುದು. ಹಾಲಿ ಇರುವ ಶಾಸನಬದ್ಧ ನಿಯಮಗಳು ಹಾಗೂ ದಂಡ ಸಂಹಿತೆಯಲ್ಲಿರುವ ಅಂಶಗಳು ಈ ಪಿಡುಗು ಹತ್ತಿಕ್ಕಲು ಹಾಗೂ ನಾಗರಿಕ ಸಮಾಜಕ್ಕೆ ಅನುಗುಣವಾಗಿ ಕಾರ್ಯನಿರ್ವಹಿಸಲು ಸಾಧ್ಯವಿದೆ ಎಂದು ಕೋರ್ಟ್ ಅಭಿಪ್ರಾಯಪಟ್ಟಿತು.

ದ್ವೇಷ ಭಾಷಣ ಕುರಿತಂತೆ ಕೇಂದ್ರ ಸಚಿವ ಅನುರಾಗ್ ಠಾಕೂರ್ ಮತ್ತು ಸಂಸದ ಪ್ರವೇಶ್ ವರ್ಮಾ ವಿರುದ್ಧ ಪ್ರಕರಣ ದಾಖಲಿಸಲು ನಿರ್ದೇಶನ ಕೋರಿ ಸಿಪಿಐ (ಎಂ) ಮುಖಂಡರು ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ಇದೇ ಸಂದರ್ಭದಲ್ಲಿ ವಜಾ ಮಾಡಿತು.

ಈ ಸಂಬಂಧ ನಿರ್ದೇಶನ ನೀಡಲು ನಿರಾಕರಿಸಿದ್ದ ಕೆಳಹಂತದ ಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ ಸಿಪಿಐ (ಎಂ) ಮುಖಂಡರಾದ ಬೃಂದಾ ಕಾರಟ್ ಮತ್ತು ಕೆ.ಎಂ.ತಿವಾರಿ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಅರ್ಜಿ ವಜಾ ಮಾಡಿದ ನ್ಯಾಯಮೂರ್ತಿ ಚಂದ್ರಧರಿ ಸಿಂಗ್ ಅವರು, 'ಕೆಳಹಂತದ ಆದೇಶ ಕುರಿತಂತೆ ಮಧ್ಯಪ್ರವೇಶಿಸಲು ಬಯಸುವುದಿಲ್ಲ. ವಾಸ್ತವಾಂಶ ಆಧರಿಸಿ ಮೊಕದ್ದಮೆ ದಾಖಲಿಸಲು ಅನುಮತಿಯನ್ನು ಸಕ್ಷಮ ಪ್ರಾಧಿಕಾರದಿಂದಲೇ ಪಡೆಯಬೇಕು' ಎಂದು ಸ್ಪಷ್ಟಪಡಿಸಿದರು.

ಮಾರ್ಚ್ 25ರಂದು ಈ ಪ್ರಕರಣದ ತೀರ್ಪು ಕಾಯ್ದಿರಿಸಲಾಗಿತ್ತು. ದೆಹಲಿ ಪೊಲೀಸರು ಈ ಕುರಿತು ಪ್ರಾಥಮಿಕ ತನಿಖೆ ನಡೆಸಿ, ಮೇಲ್ನೋಟಕ್ಕೆ ಅಂತಹ ಲೋಪವಾಗಿಲ್ಲ ಎಂದು ಗೊತ್ತಾಗಿದೆ ಎಂದು ಕೆಳಹಂತದ ನ್ಯಾಯಾಲಯಕ್ಕೆ ವರದಿ ನೀಡಿದ್ದಾರೆ ಎಂದೂ ಉಲ್ಲೇಖಿಸಿದರು.

ದ್ವೇಷ ಭಾಷಣವು ನಿರ್ದಿಷ್ಟ ಸಮುದಾಯದ ವಿರುದ್ಧ ಹಿಂಸೆಗೆ ಪ್ರಚೋದನೆ ನೀಡುತ್ತದೆ. ಇನ್ನೊಂದೆಡೆ ಆ ಸಮುದಾಯದ ಸದಸ್ಯರಲ್ಲಿ ಅಭದ್ರತೆಯ ಭಾವನೆಯನ್ನು ಮೂಡಿಸುತ್ತವೆ. ಮಾನಸಿಕವಾಗಿ ಪರಿಣಾಮ ಬೀರಲಿದ್ದು, ಭಯದ ಭಾವನೆಯನ್ನು ಮೂಡಿಸಲಿವೆ ಎಂದು ನ್ಯಾಯಮೂರ್ತಿಗಳು ಅಭಿಪ್ರಾಯಪಟ್ಟರು.

ಷೇರುಪೇಟೆ ವಹಿವಾಟು 1457



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,202
ಇಂದಿನ ಅಂತ್ಯ	15,774
▼	428
ದಿನದ ಕನಿಷ್ಠ	15,684

ವಿನಿಮಯ ದರ

$ ಡಾಲರ್	78.03
£ ಪೌಂಡ್	95.43
€ ಯುರೊ	81.79
¥ ಯೆನ್ (100ಕ್ಕೆ)	58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹520
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹522

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1615 (1615)
ಸೋಯಾ (ರಿಫೈಂಡ್)	₹1495 (1500)
ಸೂರ್ಯಕಾಂತಿ (ರಿಫೈಂಡ್)	₹1770 (1765)
ಪಾಮೋಲಿನ್	₹1442(1452)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹345-609
ದ್ವಿತಳಿ (ಬಿ.ವಿ) ₹266-827

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹175
ಆರ್‌ಎಸ್‌ಎಸ್-5 ₹167
ಗುಡ್ ಲಾಟ್ ₹159

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹18000-20000
2ನೇ ದರ್ಜೆ ₹12000-15000

ಎಲ್‌ಐಸಿ ಷೇರು: ನೀಡಿಕೆ ಬೆಲೆಗಿಂತ ಶೇ 29ರಷ್ಟು ಕುಸಿತ

LIC

ಮುಂಬೈ (ಪಿಟಿಐ): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಷೇರು ಮೌಲ್ಯವು ಸೋಮವಾರ ಶೇಕಡ 6ರವರೆಗೂ ಇಳಿಕೆ ಆಗಿದೆ. ಒಟ್ಟಾರೆ 10 ದಿನಗಳಲ್ಲಿ ಕಂಪನಿಯ ಷೇರಿನ ಮೌಲ್ಯವು ಶೇ 20.17ರಷ್ಟು ಇಳಿಕೆ ಕಂಡಿದೆ.

ನೀಡಿಕೆ ಬೆಲೆ ₹ 949ಕ್ಕೆ ಹೋಲಿಸಿದರೆ ಷೇರಿನ ಮೌಲ್ಯವು ಶೇ 29.58ರಷ್ಟು ಕುಸಿತ ಕಂಡಿದೆ.

ಮುಂಬೈ ಷೇರುಪೇಟೆಯಲ್ಲಿ ಕಂಪನಿಯ ಷೇರಿನ ಬೆಲೆಯು ಶೇ 5.85ರಷ್ಟು ಇಳಿಕೆ ಆಗಿ ಪ್ರತಿ ಷೇರಿನ ಬೆಲೆ ₹ 668.20ಕ್ಕೆ ತಲುಪಿತು. ರಾಷ್ಟ್ರೀಯ ಷೇರುಪೇಟೆಯಲ್ಲಿ ಶೇ 6ರಷ್ಟು ಕಡಿಮೆ ಆಗಿ ಪ್ರತಿ ಷೇರಿನ ಬೆಲೆ ₹ 666.90ಕ್ಕೆ ತಲುಪಿತು.

ಷೇರುಪೇಟೆಯ ಪ್ರಮುಖ 10 ಮೌಲ್ಯಯುತ ಕಂಪನಿಗಳ ಸಾಲಿನಲ್ಲಿ ಎಲ್‌ಐಸಿ ಏಳನೇ ಸ್ಥಾನದಲ್ಲಿದೆ. ಇದರ ಮಾರುಕಟ್ಟೆ ಬಂಡವಾಳ ಮೌಲ್ಯವು ₹ 4.22 ಲಕ್ಷ ಕೋಟಿ.

ಡೆಟ್ ಫಂಡ್: ₹ 32,722 ಕೋಟಿ ಹಿಂತೆಗೆತ

ನವದೆಹಲಿ (ಪಿಟಿಐ): ಸಾಲಪತ್ರ ಆಧಾರಿತ ಡೆಟ್ ಮ್ಯೂಚುವಲ್ ಫಂಡ್‌ಗಳಿಂದ ಮೇ ತಿಂಗಳಿನಲ್ಲಿ ₹ 32,722 ಕೋಟಿ ಬಂಡವಾಳ ಹಿಂತೆಗೆತ ಆಗಿದೆ.

ಹಣದುಬ್ಬರವನ್ನು ನಿಯಂತ್ರಿಸಲು ಆರ್‌ಬಿಐ ಹಣಕಾಸು ನೀತಿ ಬಿಗಿಗೊಳಿಸಿದೆ. ಈ ಹಿನ್ನೆಲೆಯಲ್ಲಿ ಬಂಡವಾಳ ಹೊರಹರಿವು ಕಂಡುಬಂದಿದೆ.

ಏಪ್ರಿಲ್‌ನಲ್ಲಿ ಡೆಟ್ ಮ್ಯೂಚುವಲ್ ಫಂಡ್‌ಗಳು ₹ 54,656 ಕೋಟಿ ಬಂಡವಾಳ ಆಕರ್ಷಿಸಿದ್ದವು ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಮಾಹಿತಿ ನೀಡಿದೆ.

ಡೆಟ್ ಮ್ಯೂಚುವಲ್ ಫಂಡ್ ಖಾತೆಗಳ ಸಂಖ್ಯೆಯು 73.43 ಲಕ್ಷದಿಂದ 72.87 ಲಕ್ಷಕ್ಕೆ ಇಳಿಕೆ ಆಗಿದೆ. 16 ಡೆಟ್ ಫಂಡ್ ವಿಭಾಗಗಳ ಪೈಕಿ 12 ಫಂಡ್‌ಗಳಿಂದ ಮೇ ತಿಂಗಳಲ್ಲಿ ಬಂಡವಾಳ ಹೊರಹರಿವು ಆಗಿದೆ.

ಮಾರುಕಟ್ಟೆಯು ಏರಿಳಿತ ಕಾಣುತ್ತಿರುವ ಸಂದರ್ಭದಲ್ಲಿ ಡೆಟ್ ಫಂಡ್‌ಗಳು ಹೂಡಿಕೆಯ ಸುರಕ್ಷಿತ ಆಯ್ಕೆ ಎಂದು ಪರಿಗಣಿಸಲಾಗುತ್ತದೆ. ಆದರೆ, ಬಡ್ಡಿದರ ಏರಿಕೆ ಆಗುತ್ತಿರುವುದು, ಆರ್ಥಿಕತೆಯಲ್ಲಿನ ಅನಿಶ್ಚಿತ ಸ್ಥಿತಿ ಹಾಗೂ ಗರಿಷ್ಠ ಗಳಿಕೆಯು ಹೂಡಿಕೆದಾರರ ಮೇಲೆ ಪರಿಣಾಮ ಉಂಟುಮಾಡಿರುವ ಸಾಧ್ಯತೆ ಇದೆ ಎಂದು ಮಾರ್ನಿಂಗ್‌ಸ್ಟಾರ್ ಇಂಡಿಯಾದ ಹಿರಿಯ ವಿಶ್ಲೇಷಕಿ ಕವಿತಾ ಕೃಷ್ಣನ್ ಹೇಳಿದ್ದಾರೆ.

ರೆಪೊ ದರ ಹೆಚ್ಚಳ ಮತ್ತು ಹಣದುಬ್ಬರ ಏರಿಕೆಯ ಸಂದರ್ಭದಲ್ಲಿ ಹೂಡಿಕೆದಾರರು ಅಲ್ಪಾವಧಿಯ ಹಣದ ಅಗತ್ಯಗಳನ್ನು ಪೂರೈಸಿಕೊಳ್ಳಲು ಹಿಂತೆಗೆತಕ್ಕೆ ಮುಂದಾಗಿದ್ದಾರೆ ಎಂದೂ ಹೇಳಿದ್ದಾರೆ.

ಜೊಮ್ಯಾಟೊ, ಸ್ವಿಗ್ಗಿಗೆ ಕೇಂದ್ರ ಸೂಚನೆ

ನವದೆಹಲಿ (ಪಿಟಿಐ): ಗ್ರಾಹಕರಿಂದ ಬರುವ ದೂರುಗಳನ್ನು ಇತ್ಯರ್ಥ ಪಡಿಸುವ ವ್ಯವಸ್ಥೆಯನ್ನು ಹೇಗೆ ಉತ್ತಮಪಡಿಸಲಾಗುವುದು ಎಂಬ ಬಗ್ಗೆ 15 ದಿನಗಳಲ್ಲಿ ಪ್ರಸ್ತಾವ ಸಲ್ಲಿಸುವಂತೆ ಆಹಾರ ವಸ್ತುಗಳನ್ನು ಮನೆಬಾಗಿಲಿಗೆ ತಲುಪಿಸುವ ಸ್ವಿಗ್ಗಿ, ಜೊಮ್ಯಾಟೊದಂತಹ ಕಂಪನಿಗಳಿಗೆ ಕೇಂದ್ರ ಸರ್ಕಾರ ತಾಕೀತು ಮಾಡಿದೆ.

‘ಡೆಲಿವರಿ ಶುಲ್ಕ, ಪ್ಯಾಕೇಜಿಂಗ್ ಶುಲ್ಕ, ತೆರಿಗೆ ಸೇರಿದಂತೆ ಎಲ್ಲ ಬಗೆಯ ಶುಲ್ಕಗಳ ವಿವರವನ್ನು ಗ್ರಾಹಕರಿಗೆ ಸ್ಪಷ್ಟವಾಗಿ ತೋರಿಸಬೇಕು’ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆಯು ಸೂಚನೆ ನೀಡಿದೆ ಎಂದು ಪ್ರಕಟಣೆ ತಿಳಿಸಿದೆ.

ಒಂದು ವರ್ಷದ ಅವಧಿಯಲ್ಲಿ ರಾಷ್ಟ್ರೀಯ ಗ್ರಾಹಕರ ಸಹಾಯವಾಣಿಯಲ್ಲಿ ಸ್ವಿಗ್ಗಿ ವಿರುದ್ಧ 3,631 ಹಾಗೂ ಜೊಮ್ಯಾಟೊ ವಿರುದ್ಧ 2,828 ದೂರುಗಳು ಬಂದಿವೆ ಎಂದು ಇಲಾಖೆಯು ಕಂಪನಿಗಳ ಪ್ರತಿನಿಧಿಗಳ ಜೊತೆ ನಡೆಸಿದ ಸಭೆಯಲ್ಲಿ ತಿಳಿಸಿದೆ.

ಗ್ರಾಹಕರು ಒಪ್ಪಿಗೆ ನೀಡಿದಲ್ಲಿ ಅವರ ದೂರವಾಣಿ ಸಂಖ್ಯೆಯನ್ನು ರೆಸ್ಟೋರೆಂಟ್‌ಗಳ ಜೊತೆ ಹಂಚಿಕೊಳ್ಳಬೇಕು ಎಂದು ಕಂಪನಿಗಳಿಗೆ ಸಲಹೆ ನೀಡಲಾಗಿದೆ ಎಂದು ಕೂಡ ಪ್ರಕಟಣೆ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

13-6-2022

ಜಾವಾ 70/80(ಹೊಸ)	10650-10700
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	10350-10400
ದಪ್ಪ ಗುಜರಾತ್(ಹೊಸ)	11150-11200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1625 (1625)
ಒಂದು ವಾರದ ಡೆಲಿವರಿ	1620 (1620)
ಸೋಯಾ ಕಚ್ಚಾ	1440 (1450)
ಪಾಮ್ ವಾರದ ಡೆಲಿವರಿ	1440 (1450)
ಸೂರ್ಯಕಾಂತಿ ಎಣ್ಣೆ ಕಚ್ಚಾ	1740 (1740)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,100 (51,650)
ಬೆಳ್ಳಿ ಕೆ.ಜಿ 60,800 (61,800)

ಆವರಣದಲ್ಲಿ ಶನಿವಾರದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	470
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಚಿತ್ರದುರ್ಗ	
ಆಪಿ	48100-48509
ಬೆಟ್ಟೆ	38039-38489
ಕೆಂಪುಗೋಟು	27819-28259
ರಾಶಿ	47629-48069
ಕುಮಟ	
ಚಿಪ್ಪು	25589-29019
ಕೋಕ	16889-28119
ಹಳೆಚಾಲಿ	45089-46499
ಹೊಸಚಾಲಿ	35189-37509
ಸಾಗರ	
ಬಿಳಿಗೋಟು	19569-32001
ಕೋಕ	15009-33699
ಚಾಲಿ	31899-36799
ಕೆಂಪುಗೋಟು	23129-36599
ರಾಶಿ	30199-49199
ಸಿಪ್ಪೆಗೋಟು	5200-19470
ಶಿವಮೊಗ್ಗ	
ಬೆಟ್ಟೆ	48889-53009
ಗೊರಬಲು	19169-37399
ರಾಶಿ	45329-49199
ಸರಕು	54100-67500
ಸಿದ್ದಾಪುರ	
ಬಿಳಿಗೋಟು	23399-29112
ಕೋಕ	23112-30800
ಚಾಲಿ	33619-38139
ಕೆಂಪುಗೋಟು	26699-32119
ರಾಶಿ	44509-48799
ತಟ್ಟಿಬೆಟ್ಟೆ	36711-47099
ಶಿರಸಿ	
ಬೆಟ್ಟೆ	37131-43699
ಬಿಳಿಗೋಟು	18099-31699
ಚಾಲಿ	33699-38727
ರಾಶಿ	42699-48888
ಯಲ್ಲಾಪುರ	
ಬಿಳಿಗೋಟು	26899-31718
ಚಾಲಿ	34449-38169
ಕೋಕ	18899-30400
ಕೆಂಪುಗೋಟು	28612-33499
ರಾಶಿ	44665-50849
ತಟ್ಟಿಬೆಟ್ಟೆ	37828-43639

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16100	16200	16400	228.90 ಸೆಂಟ್ಸ್
ಎಸಿ	8960	9000	9025	
ಆರ್‌ಪಿ	9750	10050	10075	ಲಂಡನ್
ಆರ್‌ಸಿ	4800	4600	4625	2077 ಡಾಲರ್ಸ್

ಚಿನ್ನದ ದರ ₹ 321, ಬೆಳ್ಳಿ ₹ 874 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ಚಿನ್ನದ ದರ ₹ 321ರಷ್ಟು ಇಳಿಕೆ ಆಗಿ ₹ 51,270ಕ್ಕೆ ತಲುಪಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹ 874ರಷ್ಟು ಕಡಿಮೆ ಆಗಿ ₹ 60,745ರಂತೆ ಮಾರಾಟ ಆಯಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಆಗಿರುವುದೇ ಇದಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಇರಾಕ್‌ನಿಂದ ಅತಿ ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ತೈಲ ಪೂರೈಕೆ

ಭಾರತಕ್ಕೆ ತೈಲ: 2ನೇ ಸ್ಥಾನಕ್ಕೆ ರಷ್ಯಾ

ನವದೆಹಲಿ (ಪಿಟಿಐ): ಭಾರತಕ್ಕೆ ಕಚ್ಚಾ ತೈಲ ಪೂರೈಕೆ ಮಾಡುವ ದೇಶಗಳ ಸಾಲಿನಲ್ಲಿ ಮೇ ತಿಂಗಳಲ್ಲಿ ರಷ್ಯಾ ಎರಡನೇ ಸ್ಥಾನಕ್ಕೆ ಏರಿದೆ, ಸೌದಿ ಅರೇಬಿಯಾ ಮೂರನೇ ಸ್ಥಾನಕ್ಕೆ ಕುಸಿದಿದೆ. ಇರಾಕ್ ಮೊದಲ ಸ್ಥಾನದಲ್ಲಿದೆ.

ಉಕ್ರೇನ್ ಬಿಕ್ಕಟ್ಟು ಆರಂಭವಾದ ಬಳಿಕ ರಷ್ಯಾ ದೇಶವು ರಿಯಾಯಿತಿ ದರದಲ್ಲಿ ಭಾರತಕ್ಕೆ ಕಚ್ಚಾ ತೈಲ ಪೂರೈಸಲು ಆರಂಭಿಸಿದೆ. ಭಾರತದ ಕಂಪನಿಗಳು ಇದರ ಪ್ರಯೋಜನ ಪಡೆದುಕೊಳ್ಳುತ್ತಿವೆ. ಹೀಗಾಗಿ ರಷ್ಯಾ ಎರಡನೇ ಸ್ಥಾನಕ್ಕೆ ಬಂದಿದೆ ಎನ್ನುವುದನ್ನು ಅಂಕಿ–ಅಂಶಗಳು ಸೂಚಿಸುತ್ತಿವೆ.

ಭಾರತದ ತೈಲ ಕಂಪನಿಗಳು ಮೇ ತಿಂಗಳಿನಲ್ಲಿ ರಷ್ಯಾದಿಂದ 2.5 ಲಕ್ಷ ಬ್ಯಾರಲ್ ತೈಲ ಆಮದು ಮಾಡಿಕೊಂಡಿವೆ. ಮೇನಲ್ಲಿ ಭಾರತವು ಆಮದು ಮಾಡಿಕೊಂಡಿರುವ ಒಟ್ಟಾರೆ ತೈಲದಲ್ಲಿ ಇದರ ಪಾಲು ಶೇಕಡ 16ರಷ್ಟು ಆಗಿದೆ.

ಮುಖ್ಯಾಂಶಗಳು

- ರಿಯಾಯಿತಿ ದರದಿಂದಾಗಿ ಆಮದು ಹೆಚ್ಚಳ
- ದೇಶಿ ಬಳಕೆಯ ಶೇ 85ರಷ್ಟು ಆಮದು
- ಉಕ್ರೇನ್ ಬಿಕ್ಕಟ್ಟಿನ ಬಳಿಕ ರಷ್ಯಾದಿಂದ ತೈಲ ಆಮದು ಹೆಚ್ಚಳ

ಭಾರತವು ಸಮುದ್ರ ಮಾರ್ಗವಾಗಿ ಏಪ್ರಿಲ್‌ನಲ್ಲಿ ಆಮದು ಮಾಡಿಕೊಂಡಿರುವ ತೈಲದಲ್ಲಿ ರಷ್ಯಾದ ಪಾಲು ಶೇ 5ರಷ್ಟು ಆಗಿದೆ. 2021 ಮತ್ತು 2022ರ ಮೊದಲ ತ್ರೈಮಾಸಿಕದಲ್ಲಿ ರಷ್ಯಾದ ಪಾಲು ಶೇ 1ಕ್ಕಿಂತಲೂ ಕಡಿಮೆ ಇತ್ತು.

ಭಾರತದ ಒಟ್ಟಾರೆ ತೈಲ ಬಳಕೆಗೆ ಹೋಲಿಸಿದರೆ ರಷ್ಯಾದಿಂದ ಆಮದು ಮಾಡಿಕೊಳ್ಳುತ್ತಿರುವುದು ಅತ್ಯಂತ ಕಡಿಮೆ ಪ್ರಮಾಣದ್ದಾಗಿದೆ ಎಂದು ಪೆಟ್ರೋಲಿಯಂ ಸಚಿವಾಲಯ ಕಳೆದ ತಿಂಗಳು ಹೇಳಿದೆ.

ಅಮೆರಿಕ ಮತ್ತು ಚೀನಾ ಬಳಿಕ ಭಾರತವು ಅತಿ ಹೆಚ್ಚು ತೈಲ ಬಳಕೆ ಮಾಡುವ ದೇಶವಾಗಿದ್ದು, ದೇಶಿ ಬಳಕೆಯ ಶೇ 85ಕ್ಕೂ ಹೆಚ್ಚಿನ ಪ್ರಮಾಣವನ್ನು ಆಮದು ಮಾಡಿಕೊಳ್ಳುತ್ತಿದೆ.

ರಷ್ಯಾವು ಉಕ್ರೇನ್ ಮೇಲೆ ಸಮರ ಸಾರಿದ ನಂತರ ರಷ್ಯಾದ ಯೂರಲ್ಸ್ ಕಚ್ಚಾ ತೈಲ ಖರೀದಿಸುವವರ ಸಂಖ್ಯೆ ಕಡಿಮೆ ಆಗುತ್ತಿದೆ. ಕೆಲವು ದೇಶಗಳು ಮತ್ತು ಕಂಪನಿಗಳು ರಷ್ಯಾದಿಂದ ತೈಲ ಖರೀದಿಸದಿರಲು ನಿರ್ಧರಿಸಿವೆ. ಇದರಿಂದಾಗಿ ರಷ್ಯಾದ ತೈಲ ರಫ್ತು ಕಡಿಮೆ ಆಗಿದ್ದು, ತೈಲದ ಬೆಲೆಯೂ ಇಳಿಕೆ ಕಂಡಿದೆ. ಭಾರತದ ಕಂಪನಿಗಳು ಇದರ ಪ್ರಯೋಜನ ಪಡೆದುಕೊಂಡಿದ್ದು, ಪ್ರತಿ ಬ್ಯಾರಲ್‌ಗೆ 30 ಡಾಲರ್‌ಗಳವರೆಗೂ ರಿಯಾಯಿತಿ ದರದಲ್ಲಿ ರಷ್ಯಾದ ಕಚ್ಚಾ ತೈಲ ಖರೀದಿ ಮಾಡಿವೆ.

ಚಿಲ್ಲರೆ ಹಣದುಬ್ಬರ ಶೇ 7.04

ಒಂದನೇ ಪುಟದಿಂದ

ಚಿಲ್ಲರೆ ಹಣದುಬ್ಬರ ದರವು ಶೇ 4ರ ಮಟ್ಟದಲ್ಲಿ ಇರುವಂತೆ ನೋಡಿಕೊಳ್ಳುವ ಹೊಣೆಯು ಆರ್‌ಬಿಐ ಮೇಲಿದೆ.

ಕೇಂದ್ರ ಸರ್ಕಾರವು ಸೋಯಾ ಹಾಗೂ ಸೂರ್ಯಕಾಂತಿ ಎಣ್ಣೆ ಮೇಲಿನ ಆಮದು ಸುಂಕವನ್ನು ಕೂಡ ತಗ್ಗಿಸಿದೆ.

ಚಿಲ್ಲರೆ ಹಣದುಬ್ಬರ ದರವು ಗ್ರಾಮೀಣ ಪ್ರದೇಶಗಳಲ್ಲಿ ತುಸು ಕಡಿಮೆ (ಶೇ 7.01) ಇದೆ. ನಗರ ಪ್ರದೇಶಗಳಲ್ಲಿ ಇದು ಶೇ 7.08 ಆಗಿದೆ.

‘ದೇಶದ ಹಣದುಬ್ಬರ ಪ್ರಮಾಣವು ತಕ್ಷಣಕ್ಕೆ ಕಡಿಮೆ ಆಗಲಿಕ್ಕಿಲ್ಲ. ಹೀಗಿರುವಾಗಿ, ದೇಶಿ ಮಾರುಕಟ್ಟೆಯಲ್ಲಿ ಬೇಡಿಕೆ ಕುಗ್ಗದಂತೆ ನೋಡಿಕೊಳ್ಳುವುದು ಬಹಳ ಮಹತ್ವದ್ದಾಗಿರಲಿದೆ’ ಎಂದು ನೈಟ್ ಫ್ರ್ಯಾಂಕ್ ಇಂಡಿಯಾ ಸಂಸ್ಥೆಯ ಸಂಶೋಧನಾ ನಿರ್ದೇಶಕ ವಿವೇಕ್ ರಾಠಿ ಹೇಳಿದ್ದಾರೆ.



ಕರಡಿ ಕುಣಿತ, ಸೆನ್ಸೆಕ್ಸ್ ಕುಸಿತ

ಒಂದನೇ ಪುಟದಿಂದ

₹ 6.65 ಲಕ್ಷ ಕೋಟಿ ನಷ್ಟ: ಮುಂಬೈ ಷೇರುಪೇಟೆಯಲ್ಲಿ ನಡೆದ ನಕಾರಾತ್ಮಕ ವಹಿವಾಟಿನಿಂದಾಗಿ ಹೂಡಿಕೆದಾರರ ಸಂಪತ್ತು ಮೌಲ್ಯವು ₹ 6.65 ಲಕ್ಷ ಕೋಟಿಗಳಷ್ಟು ಕರಗಿತು. ಇದರಿಂದ ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯವು ₹ 245.19 ಲಕ್ಷ ಕೋಟಿಗೆ ಇಳಿಕೆ ಆಯಿತು. ಎರಡು ದಿನಗಳ ವಹಿವಾಟಿನಲ್ಲಿ ಹೂಡಿಕೆದಾರರಿಗೆ ಒಟ್ಟಾರೆ ₹ 9.75 ಲಕ್ಷ ಕೋಟಿ ನಷ್ಟ ಆಗಿದೆ.



ಅಂಗವಿಕಲರ ರಾಷ್ಟ್ರೀಯ ಕರಡು ನೀತಿ: ಆಕ್ಷೇಪಣೆ ಆಹ್ವಾನ

ನವದೆಹಲಿ (ಪಿಟಿಐ): ಅಂಗವಿಕಲರ ಕ್ಷೇತ್ರದಲ್ಲಿ ಸ್ವಾವಲಂಬನೆಗೆ ಪ್ರೋತ್ಸಾಹ ನೀಡುವುದು, ತತ್‌ಕ್ಷಣದ ಮಾಹಿತಿ ನೀಡುವ ದತ್ತಾಂಶ ವ್ಯವಸ್ಥೆಯನ್ನು ರೂಪಿಸುವುದು, ಪ್ರಮಾಣಪತ್ರಗಳನ್ನು ತ್ವರಿತವಾಗಿ ನೀಡುವುದು –ಇವು ಅಂಗವಿಕಲರ ರಾಷ್ಟ್ರೀಯ ಕರಡು ನೀತಿಯ ಕೆಲವು ಪ್ರಮುಖ ಅಂಶಗಳಾಗಿವೆ.

ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಸಚಿವಾಲಯದ ಅಧೀನದಲ್ಲಿರುವ, ಅಂಗವಿಕಲ ವ್ಯಕ್ತಿಗಳ ಸಬಲೀಕರಣ ಇಲಾಖೆಯು ಕರಡು ನೀತಿ ರೂಪಿಸಿದ್ದು, ಸಂಬಂಧಪಟ್ಟವರಿಂದ ಪ್ರತಿಕ್ರಿಯೆ ಆಹ್ವಾನಿಸಿದೆ. ಪ್ರತಿಕ್ರಿಯೆಗೆ ಜುಲೈ 9ರವರೆಗೆ ಸಮಯ ನೀಡಿದೆ.

ಅಂಗವೈಕಲ್ಯ ನಿವಾರಣೆಗೆ ಅಗತ್ಯವಾದ ಶಸ್ತ್ರಚಿಕಿತ್ಸೆಯಲ್ಲಿ ಸಂಪೂರ್ಣ ದೇಶೀ ತಂತ್ರಜ್ಞಾನ ಅಳವಡಿಸಿಕೊಳ್ಳುವ ಯೋಜನೆ ರೂಪಿಸಲಾಗಿದೆ. ಸಾಮಗ್ರಿಗಳನ್ನು ಸ್ಥಳೀಯವಾಗಿ ಖರೀದಿಸಲು ಉದ್ದೇಶಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಸ್ನೂಕರ್ ಟೂರ್ನಿ: ಕೊಠಾರಿಗೆ ಪ್ರಶಸ್ತಿ

ಮೆಲ್ಬರ್ನ್ (ಪಿಟಿಐ): ಭಾರತದ ಸೌರವ್ ಕೊಠಾರಿ ಅವರು ಇಲ್ಲಿ ನಡೆದ ಟ್ರ್ಯಾನ್ಸ್ ಪಸಿಲ್ ಪೆಸಿಫಿಕ್ ಇಂಟರ್‌ನ್ಯಾಷನಲ್ ಸ್ನೂಕರ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿದರು.

ಸೋಮವಾರ ನಡೆದ ಫೈನಲ್‌ನಲ್ಲಿ ಅವರು 4–0 ಫ್ರೇಮ್‌ಗಳಿಂದ ಆಸ್ಟ್ರೇಲಿಯದ ಜೊಹ್ಲ್ ಯಂಗರ್ ಅವರನ್ನು ಮಣಿಸಿದರು. ಲೀಗ್‌ನಲ್ಲಿ ಅಗ್ರಸ್ಥಾನ ಪಡೆದ ಕೊಠಾರಿ ಕ್ವಾರ್ಟರ್ ಫೈನಲ್‌ನಲ್ಲಿ 3–1 ರಲ್ಲಿ ಆಸ್ಟ್ರೇಲಿಯದ ಕೇಲ್ ಬರೆಟ್ ವಿರುದ್ಧ; ಸೆಮಿಫೈನಲ್‌ನಲ್ಲಿ ಚಾರ್ಲಿ ಚಫೆ ವಿರುದ್ಧ ಗೆಲುವು ಪಡೆದಿದ್ದರು.2019 ರಲ್ಲೂ ಅವರು ಇಲ್ಲಿ ಪ್ರಶಸ್ತಿ ಜಯಿಸಿದ್ದರು. ಮಂಗಳವಾರ ಆರಂಭವಾಗುವ ಪೆಸಿಫಿಕ್ ಇಂಟರ್‌ನ್ಯಾಷನಲ್ ಬಿಲಿಯರ್ಡ್ಸ್ ಟೂರ್ನಿಯಲ್ಲಿ ಅವರು ಪಾಲ್ಗೊಳ್ಳಲಿದ್ದಾರೆ.

ವೇಟ್‌ಲಿಫ್ಟಿಂಗ್: ಗುರುನಾಯ್ಡುಗೆ ಚಿನ್ನ

ನವದೆಹಲಿ (ಪಿಟಿಐ): ವೇಟ್‌ಲಿಫ್ಟರ್ ಗುರುನಾಯ್ಡು ಸನಪತಿ ಅವರು ಮೆಕ್ಸಿಕೊದ ಲಿಯೊನ್‌ನಲ್ಲಿ ನಡೆಯುತ್ತಿರುವ ಐಡಬ್ಲ್ಯುಎಫ್ ವಿಶ್ವ ಯೂತ್ ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಮೊದಲ ಚಿನ್ನ ತಂದಿತ್ತ ಸಾಧನೆ ಮಾಡಿದರು.

ಭಾನುವಾರ ರಾತ್ರಿ ನಡೆದ ಬಾಲಕರ 55 ಕೆ.ಜಿ ವಿಭಾಗದ ಸ್ಪರ್ಧೆಯಲ್ಲಿ ಅವರು ಒಟ್ಟು 230 ಕೆ.ಜಿ (104 ಕೆ.ಜಿ + 126 ಕೆ.ಜಿ) ಎತ್ತುವ ಮೂಲಕ ಅಗ್ರಸ್ಥಾನ ಪಡೆದುಕೊಂಡರು. ಸೌದಿ ಅರೇಬಿಯಾದ ಅಲಿ ಮಜೀದ್ (229 ಕೆ.ಜಿ) ಬೆಳ್ಳಿ ಗೆದ್ದರೆ, ಕಜಕಸ್ತಾನದ ಯೆರೆಸಿಲ್ ಉಮ್ರೊವ್ (224 ಕೆ.ಜಿ.) ಕಂಚು ತಮ್ಮದಾಗಿಸಿಕೊಂಡರು.

16 ವರ್ಷದ ಗುರುನಾಯ್ಡು ಅವರು 2020ರ ಏಷ್ಯನ್ ಯೂತ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆದ್ದುಕೊಂಡಿದ್ದರು.

ಸೌಮ್ಯಾ ಎಸ್. ದಳವಿ ಅವರು ಬಾಲಕಿಯರ 45 ಕೆ.ಜಿ ವಿಭಾಗದಲ್ಲಿ ಒಟ್ಟು 148 ಕೆ.ಜಿ. ಎತ್ತಿ ಕಂಚು ಜಯಿಸಿದರು. ಫಿಲಿಪ್ಪೀನ್ಸ್‌ನ ರೋಸ್ ಕೆ ರಮೊಸ್ (155 ಕೆ.ಜಿ) ಮತ್ತು ವೆನಿಜುವೆಲದ ಕೆರ್ಲಿಸ್ ಎಂ.ಮಾಂಟಿಲ್ಲಾ (153 ಕೆ.ಜಿ. ಕ್ರಮವಾಗಿ ಮೊದಲ ಎರಡು ಸ್ಥಾನ ಗಳಿಸಿದರು.ಈ ಚಾಂಪಿಯನ್‌ಷಿಪ್‌ನಲ್ಲಿ ಭಾರತ ತಂಡ ಇದುವರೆಗೆ ಒಟ್ಟು ನಾಲ್ಕು ಪದಕಗಳನ್ನು ಗೆದ್ದುಕೊಂಡಿದೆ.

ಪ್ರಶಸ್ತಿ ಜಯದ ತವಕದಲ್ಲಿ ಲಕ್ಷ್ಯ, ಸಿಂಧು

ಇಂಡೊನೇಷ್ಯಾ ಓಪನ್ ಸೂಪರ್ 1000 ಟೂರ್ನಿ ಇಂದಿನಿಂದ

ಜಕಾರ್ತ (ಪಿಟಿಐ): ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ, ಭಾರತದ ಪಿ.ವಿ.ಸಿಂಧು ಮತ್ತು ಉದಯೋನ್ಮುಖ ಆಟಗಾರ ಲಕ್ಷ್ಯ ಸೇನ್ ಅವರು ಮಂಗಳವಾರ ಇಲ್ಲಿ ಆರಂಭವಾಗುವ ಇಂಡೊನೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಜಯದ ನಿರೀಕ್ಷೆಯಲ್ಲಿದ್ದಾರೆ.

ಮುಂದಿನ ತಿಂಗಳು ಆರಂಭವಾಗಲಿರುವ ಕಾಮನ್‌ವೆಲ್ತ್ ಗೇಮ್ಸ್‌ಗೆ ಸಜ್ಜುಗೊಳ್ಳಲು ಇಲ್ಲಿ ಉತ್ತಮ ಸಾಮರ್ಥ್ಯ ತೋರುವ ಹಂಬಲದಲ್ಲಿರುವ ಸಿಂಧು, ಮಹಿಳಾ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಚೀನಾದ ಬಿಂಗ್ ಜಿಯಾವೊ ಅವರನ್ನು ಎದುರಿಸಲಿದ್ದಾರೆ.

ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಲಕ್ಷ್ಯ ಅವರಿಗೆ ಭಾರತದವರೇ ಆದ ಎಚ್.ಎಸ್. ಪ್ರಣಯ್ ಸವಾಲು ಎದುರಾಗಿದೆ.

ಲಕ್ಷ್ಯ ಸೇನ್– ಪಿಟಿಐ ಚಿತ್ರ

ಕಿದಂಬಿ ಶ್ರೀಕಾಂತ್ ಅವರು ಚೀನಾ ತೈಪೆಯ ವಾಂಗ್ ಜು ವೇ ಅವರನ್ನು ಎದುರಿಸುವರು.

ಬಿ.ಸಾಯಿ ಪ್ರಣೀತ್ ಕಣದಲ್ಲಿರುವ ಇನ್ನೊಬ್ಬ ಪ್ರಮುಖ ಆಟಗಾರ. ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ– ಚಿರಾಗ್ ಶೆಟ್ಟಿ, ಮನು ಅತ್ರಿ–ಸುಮಿತ್ ರೆಡ್ಡಿ, ಎಂ.ಆರ್. ಅರ್ಜುನ್– ಧ್ರುವ ಕಪಿಲ, ಕೃಷ್ಣಪ್ರಸಾದ್ ಗರಗ– ವಿಷ್ಣುವರ್ಧನ್ ಗೌಡ್ ಪಂಜಾಲ ಅಂಗಣಕ್ಕಿಳಿಯಲಿದ್ದಾರೆ.

ಮಹಿಳಾ ಡಬಲ್ಸ್‌ನಲ್ಲಿ ಅಶ್ವಿನಿ ಪೊನ್ನಪ್ಪ– ಎನ್.ಸಿಕ್ಕಿ ರೆಡ್ಡಿ, ತ್ರೀಶಾ ಜೋಲಿ– ಗಾಯತ್ರಿ ಗೋಪಿಚಂದ್, ಅಶ್ವಿನ ಭಟ್– ಶಿಖಾ ಗೌತಮ್ ಕಣದಲ್ಲಿದ್ದಾರೆ.ಅಶ್ವಿನಿ–ಸುಮಿತ್ ರೆಡ್ಡಿ, ಇಶಾನ್ ಭಟ್ನಾಗರ್–ತನಿಶಾ ಕ್ರಾಸ್ಟೊ ಮಿಶ್ರ ಡಬಲ್ಸ್‌ನಲ್ಲಿ ಅದೃಷ್ಟಪರೀಕ್ಷಿಸಲಿದ್ದಾರೆ.

ಸೈನಾ ನೆಹ್ವಾಲ್ ಅವರು ಫಿಟ್‌ನೆಸ್ ಸಂಬಂಧಿತ ಸಮಸ್ಯೆಗಳಿಂದ ಇಲ್ಲಿ ಸ್ಪರ್ಧಿಸುತ್ತಿಲ್ಲ. ಮುಂದಿನ ವಾರ ನಡೆಯಲಿರುವ ಮಲೇಷ್ಯಾ ಓಪನ್‌ಗೆ ಅವರು ಸಜ್ಜಾಗುತ್ತಿದ್ದಾರೆ. ಪರುಪಳ್ಳಿ ಕಶ್ಯಪ್ ಕೂಡ ಗಾಯದ ಕಾರಣದಿಂದ ಕಣಕ್ಕಿಳಿಯುತ್ತಿಲ್ಲ.

ಕಂಚು ವಿಜೇತ ಕರ್ನಾಟಕ ಬಾಲಕಿಯರ ಬ್ಯಾಸ್ಕೆಟ್‌ಬಾಲ್ ತಂಡ: ನಿಂತವರು (ಎಡದಿಂದ)– ಮೇಕಲಾ ಗೌಡ, ಪಾವನಿ ಎಸ್. ಅದಿತಿ ನಾಗರಾಜನ್, ಮೋಹನ್ ಕುಮಾರ್ (ಮ್ಯಾನೇಜರ್), ಜಯವಂತಿ ಶ್ಯಾಮ್ (ಕೋಚ್), ನಿಹಾರಿಕಾ ರೆಡ್ಡಿ, ಹನ್ನಾ ಜೇಕಬ್, ಸಂಜನಾ ಕುಮಾರ್. ಮಂಡಿಯೂರಿ ಕುಳಿತವರು– ಬಿಂದುಶ್ರೀ ಗೌಡ, ತ್ರೀಶಾ ದೀತಾ, ಜೇಷ್ಣವಿ, ಪ್ರೀತಿ ಮಲ್ಲಪ್ಪ, ಐಶ್ವರ್ಯ ಎಚ್. ಮತ್ತು ಯಶಸ್ವಿನಿ.

ಖೇಲೊ ಇಂಡಿಯಾ: ಪದಕಪಟ್ಟಿಯಲ್ಲಿ ಮೂರನೇ ಸ್ಥಾನ

ರಾಜ್ಯ ಬ್ಯಾಸ್ಕೆಟ್‌ಬಾಲ್ ತಂಡಗಳಿಗೆ ಕಂಚು

ಬೆಂಗಳೂರು: ಕರ್ನಾಟಕದ ಬಾಲಕ ಮತ್ತು ಬಾಲಕಿಯರ ಬ್ಯಾಸ್ಕೆಟ್‌ಬಾಲ್ ತಂಡಗಳು ಮತ್ತು ಬಾಲಕರ ಫುಟ್‌ಬಾಲ್ ತಂಡವು ಖೇಲೊ ಇಂಡಿಯಾ ಯೂತ್ ಕ್ರೀಡಾಕೂಟದಲ್ಲಿ ಕಂಚಿನ ಪದಕಗಳನ್ನು ಗೆದ್ದುಕೊಂಡವು.

ಹರಿಯಾಣದ ಪಂಚಕುಲಾದಲ್ಲಿ ನಡೆದ ಕೂಟದ ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಕರ್ನಾಟಕ ಬಾಲಕರ ಬ್ಯಾಸ್ಕೆಟ್‌ಬಾಲ್ ತಂಡವು 72–68ರಿಂದ ತಮಿಳುನಾಡು ತಂಡಕ್ಕೆ ಸೋಲುಣಿಸಿತು. ವಿಜೇತ ತಂಡದ ಮನೋಜ್ ಬಿ.ಎಂ. 26 ಪಾಯಿಂಟ್ಸ್ ದಾಖಲಿಸಿದರು.

ಬಾಲಕಿಯರ ವಿಭಾಗದಲ್ಲಿ ರಾಜ್ಯ ತಂಡವು 67–62ರಿಂದ ರಾಜಸ್ಥಾನ ತಂಡವನ್ನು ಸೋಲಿಸಿತು. ಕರ್ನಾಟಕದ ಪರ ಪಾವನಾ ಎಸ್. 16 ಮತ್ತು ಮೇಕಲಾ ಗೌಡ 13 ಪಾಯಿಂಟ್ಸ್ ಗಳಿಸಿದರು.

ಕರ್ನಾಟಕದ ಬಾಲಕರ ಫುಟ್‌ಬಾಲ್ ತಂಡವು ಮೇಘಾಲಯದೊಂದಿಗೆ ಜಂಟಿ ಮೂರನೇ ಸ್ಥಾನ ಗಳಿಸಿತು. ಈ ವಿಭಾಗದಲ್ಲಿ ಮಿಜೋರಾಂ ಚಿನ್ನ ಮತ್ತು ಕೇರಳ ಬೆಳ್ಳಿ ಗೆದ್ದವು.

ಕರ್ನಾಟಕಕ್ಕೆ ಮೂರನೇ ಸ್ಥಾನ: ಕ್ರೀಡಾಕೂಟದಲ್ಲಿ ಕರ್ನಾಟಕ ತಂಡವು 22 ಚಿನ್ನ, 17 ಬೆಳ್ಳಿ ಮತ್ತು 28 ಕಂಚುಗಳೊಂದಿಗೆ ಒಟ್ಟು 67 ಪದಕ ಗೆದ್ದು ಮೂರನೇ ಸ್ಥಾನ ಗಳಿಸಿತು. ಈಜು ಸ್ಪರ್ಧೆಯಲ್ಲೇ 19 ಚಿನ್ನದ ಪದಕಗಳು ರಾಜ್ಯದ ಮಡಿಲು ಸೇರಿದವು. ಹರಿಯಾಣ (52 ಚಿನ್ನ, 39 ಬೆಳ್ಳಿ, 46 ಕಂಚು; ಒಟ್ಟು 137) ಮೊದಲ ಸ್ಥಾನ ಮತ್ತು ಮಹಾರಾಷ್ಟ್ರ (45 ಚಿನ್ನ, 40 ಬೆಳ್ಳಿ, 40 ಕಂಚು; ಒಟ್ಟು 125) ಮೂರನೇ ಸ್ಥಾನ ಗಳಿಸಿದವು.

ಫುಟ್‌ಬಾಲ್: ಐದು ಬದಲಿ ಆಟಗಾರರಿಗೆ ಅವಕಾಶ

ದೋಹಾ (ಎಎಫ್‌ಪಿ): ಪಂದ್ಯದಲ್ಲಿ ಐವರು ಬದಲಿ ಆಟಗಾರರನ್ನು (ಸಬ್‌ಸ್ಟಿಟ್ಯೂಟ್) ಕಣಕ್ಕಿಳಿಸುವ ನಿಯಮವನ್ನು ಶಾಶ್ವತವಾಗಿ ಜಾರಿಗೊಳಿಸಲು, ಫುಟ್‌ಬಾಲ್ ಕ್ರೀಡೆಯ ನಿಯಮಗಳನ್ನು ರೂಪಿಸುವ ಇಂಟರ್‌ನ್ಯಾಷನಲ್ ಫುಟ್‌ಬಾಲ್ ಅಸೋಸಿಯೇಷನ್ ಬೋರ್ಡ್ (ಐಎಫ್‌ಎಬಿ) ಒಪ್ಪಿಗೆ ಸೂಚಿಸಿದೆ.

ಕೋವಿಡ್ ಬಳಿಕ ಫುಟ್‌ಬಾಲ್ ಟೂರ್ನಿಗಳು ಆರಂಭವಾದಾಗ ಐವರು ಬದಲಿ ಆಟಗಾರರನ್ನು ಕಣಕ್ಕಿಳಿಸುವ ನಿಯಮವನ್ನು ಅಂತರರಾಷ್ಟ್ರೀಯ ಫುಟ್‌ಬಾಲ್ ಫೆಡರೇಷನ್‌ನ (ಫಿಫಾ) ಪ್ರಾಯೋಗಿಕವಾಗಿ ಜಾರಿಗೊಳಿಸಿತ್ತು. ಹಾಲಿ ಇದ್ದ ನಿಯಮದ ಪ್ರಕಾರ ಒಂದು ಪಂದ್ಯದಲ್ಲಿ ಮೂವರು ಬದಲಿ ಆಟಗಾರರಿಗೆ ಮಾತ್ರ ಆಡಲು ಅವಕಾಶವಿತ್ತು.

’ಕೋವಿಡ್ ಬಳಿಕ ಫುಟ್‌ಬಾಲ್ ಟೂರ್ನಿ ಪುನರಾರಂಭವಾದಾಗ ಐವರು ಬದಲಿ ಆಟಗಾರರನ್ನು ಕಣಕ್ಕಿಳಿಸಲು ಅವಕಾಶ ನೀಡಿದ್ದೆವು. ಈ ನಿಯಮಕ್ಕೆ ಫುಟ್‌ಬಾಲ್ ಜಗತ್ತಿನ ಪೂರ್ಣ ಬೆಂಬಲ ದೊರೆತಿದೆ. ಆದ್ದರಿಂದ ಶಾಶ್ವತವಾಗಿ ಜಾರಿಯಾಗಲಿದೆ‘ ಎಂದು ಫಿಫಾ ಅಧ್ಯಕ್ಷ ಗಿಯಾನಿ ಇನ್ಫೆಂಟಿನೊ ಸೋಮವಾರ ತಿಳಿಸಿದರು.

ಆಫ್‌ಸೈಡ್ ನಿರ್ಧರಿಸಲು ತಂತ್ರಜ್ಞಾನ: ಆಫ್‌ಸೈಡ್ ನಿಯಮವನ್ನು ನಿಖರವಾಗಿ ಜಾರಿಗೊಳಿಸಲು ’3ಡಿ ಆಫ್‌ಸೈಡ್ ಡಿಟೆಕ್ಟರ್‘ ತಂತ್ರಜ್ಞಾನವನ್ನು ಈ ಬಾರಿಯ ವಿಶ್ವಕಪ್ ಟೂರ್ನಿಯಲ್ಲಿ ಬಳಸಲು ಫಿಫಾ ನಿರ್ಧರಿಸಿದೆ.

ಆತಂಕ ಬೇಡ: ಆರೋಗ್ಯ ಸಚಿವ ಡಾ.ಕೆ.ಸುಧಾಕರ್

‘ಕೋವಿಡ್ ತೀವ್ರತೆ ಹೆಚ್ಚಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯಾಗಿದ್ದರೂ, ಅದರ ತೀವ್ರತೆ ಮತ್ತು ಮರಣ ಪ್ರಮಾಣ ಹೆಚ್ಚಳವಾಗಿಲ್ಲ. ಆದ್ದರಿಂದ ಜನರು ಆತಂಕಪಡಬೇಕಾದ ಪರಿಸ್ಥಿತಿ ಇಲ್ಲ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಕೆಲವು ದಿನಗಳಿಂದ ಕೋವಿಡ್ ಸೋಂಕಿನ ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿರುವ ಕುರಿತು ರಾಜ್ಯ ಮಟ್ಟದ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯರು ಹಾಗೂ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳ ಜತೆ ಸೋಮವಾರ ಸಭೆ ನಡೆಸಿ, ಪರಿಸ್ಥಿತಿ ಅವಲೋಕಿಸಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಕೆಲವು ದಿನಗಳಿಂದ ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಕೋವಿಡ್ ಸೋಂಕು ಪ್ರಕರಣಗಳ ದೃಢಪ್ರಮಾಣ ದರ ಏರಿಕೆಯಾಗುತ್ತಿದೆ. ಆದರೆ, ರೋಗದ ತೀವ್ರತೆ ಮತ್ತು ಕೋವಿಡ್‌ನಿಂದ ಸಂಭವಿಸುವ ಸಾವಿನ ಸಂಖ್ಯೆಯಲ್ಲಿ ಏರಿಕೆಯಾಗಿಲ್ಲ. ಪರೀಕ್ಷೆಯ ಸಂಖ್ಯೆಯನ್ನು ಹೆಚ್ಚಿಸಿರುವುದೂ ಹೆಚ್ಚಿನ ಪ್ರಕರಣಗಳು ವರದಿಯಾಗಲು ಕಾರಣ ಇರಬಹುದು. ಪರಿಸ್ಥಿತಿ ಸಂಪೂರ್ಣವಾಗಿ ನಿಯಂತ್ರಣದಲ್ಲಿದೆ. ಕೋವಿಡ್‌ನ ನಾಲ್ಕನೇ ಆರಂಭವಾಗಿದೆ ಎಂದು ತೀರ್ಮಾನಿಸಲು ಸಾಧ್ಯವಿಲ್ಲ ಎಂದರು.

ರಾಜ್ಯದ ಇತರ ಪ್ರದೇಶಗಳಿಗೆ ಹೋಲಿಸಿದರೆ ಬೆಂಗಳೂರು ನಗರದಲ್ಲೇ ಹೆಚ್ಚಿನ ಪ್ರಕರಣಗಳು ವರದಿಯಾಗುತ್ತಿವೆ. ಪರಿಸ್ಥಿತಿ ನಿಯಂತ್ರಣ ಕುರಿತು ಬಿಬಿಎಂಪಿ ಅಧಿಕಾರಿಗಳ ಜತೆ ಪ್ರತ್ಯೇಕವಾಗಿ ಸಭೆ ನಡೆಸಲಾಗುವುದು. ಕೋವಿಡ್ ವೈರಾಣುವಿನ ವಂಶವಾಹಿ ಕುರಿತು ಅಧ್ಯಯನ ನಡೆಸಲು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ‘ಜೆನೋಮಿಕ್ ಸೀಕ್ವೆನ್ಸಿಂಗ್ ಪ್ರಯೋಗಾಲಯ’ವನ್ನು ತಕ್ಷಣವೇ ಆರಂಭಿಸಲು ಸೂಚಿಸಲಾಗಿದೆ ಎಂದು ತಿಳಿಸಿದರು.

ಅನ್ಯ ರೋಗಗಳಿಂದ ಬಳಲುತ್ತಿರುವವರು ಕೋವಿಡ್ ಲಸಿಕೆಯ ಮುನ್ನೆಚ್ಚರಿಕೆ ಡೋಸ್ ಅನ್ನು ತಡಮಾಡದೇ ಪಡೆಯಬೇಕು. ದೈಹಿಕ ಅಂತರ ಕಾಯ್ದುಕೊಳ್ಳುವುದು, ಮಾಸ್ಕ್ ಧರಿಸುವುದು ಸೇರಿದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸುವ ಮೂಲಕ ಜನರು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಹೆಚ್ಚಿದ ಸೋಂಕು, ಸೌಮ್ಯ ಲಕ್ಷಣ

ಮುಂಬೈ: ಮುಂಬೈ ಸೇರಿದಂತೆ ಹಲವು ಭಾಗಗಳಲ್ಲಿ ಕೋವಿಡ್ ಪ್ರಕರಣ ಹೆಚ್ಚುತ್ತಿದ್ದು, ತಜ್ಞ ವೈದ್ಯರ ಪ್ರಕಾರ ಹೆಚ್ಚಿನ ರೋಗಿಗಳು ಸೌಮ್ಯ ರೋಗ ಲಕ್ಷಣ ಹೊಂದಿದ್ದಾರೆ. ಸಾವಿನ ಪ್ರಮಾಣ ಕಡಿಮೆಯಾಗಿದ್ದು, ಹೊಸ ರೂಪಾಂತರಿ ತಳಿ ಪತ್ತೆಯಾಗಿಲ್ಲ.

ರೋಗಿಗಳಿಗೆ ಪ್ಯಾರಸಿಟಮಾಲ್ ನೀಡಲಾಗುತ್ತಿದೆ. ಆರೋಗ್ಯ ಇಲಾಖೆ ಪ್ರಕಾರ, ಮೇ ತಿಂಗಳಲ್ಲಿ ದಾಖಲಾದ 9,354 ಪ್ರಕರಣ ಪೈಕಿ 5,980 ಕೇಸ್ ಮುಂಬೈನಲ್ಲಿ ಪತ್ತೆಯಾಗಿದೆ. ಕಳೆದ ತಿಂಗಳು 17 ಮಂದಿ ಮೃತಪಟ್ಟಿದ್ದಾರೆ. ಜೂನ್ 1ರಿಂದ 12ರ ವರೆಗೆ 23,941 ಪ್ರಕರಣ ಪತ್ತೆಯಾಗಿದೆ.

‘ಹಲವು ರಾಜ್ಯಗಳಲ್ಲಿ ಕೋವಿಡ್ ಹೆಚ್ಚಳ: ಮುಂಜಾಗ್ರತೆ ಅಗತ್ಯ’

ನವದೆಹಲಿ (ಪಿಟಿಐ): ಹಲವು ರಾಜ್ಯಗಳಲ್ಲಿ ಕೋವಿಡ್ 19 ಪ್ರಕರಣ ಹೆಚ್ಚುತ್ತಿರುವುದರಿಂದ ಮುಂಜಾಗ್ರತೆ ಅಗತ್ಯ. ಸಾಂಕ್ರಾಮಿಕ ರೋಗ ಸಂಪೂರ್ಣ ನಿರ್ಮೂಲನೆ ಆಗಿಲ್ಲ ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವಿಯಾ ಎಚ್ಚರಿಸಿದರು.

ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಹಿರಿಯ ಅಧಿಕಾರಿಗಳೊಂದಿಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿದ ಅವರು, ಕೆಲವು ಜಿಲ್ಲೆಗಳು ಮತ್ತು ರಾಜ್ಯಗಳಲ್ಲಿ ಪಾಸಿಟಿವಿಟಿ ದರ ಹೆಚ್ಚಿದೆ. ಸಮಯೋಚಿತ ಪರೀಕ್ಷೆಯು ಸಮುದಾಯದಲ್ಲಿ ಸೋಂಕು ಹರಡುವಿಕೆ ತಡೆಯಲು ಸಹಾಯ ಮಾಡುತ್ತದೆ. ಕೋವಿಡ್ ಪರೀಕ್ಷೆ, ಚಿಕಿತ್ಸೆ, ಲಸಿಕೆ ಸೇರಿದಂತೆ ಐದು ಅಂಶಗಳನ್ನು ಪಾಲಿಸಬೇಕು ಎಂದು ಮಾಂಡವಿಯಾ ಹೇಳಿದರು.

ದೇಶದಲ್ಲಿ ಹೊಸ ರೂಪಾಂತರ ಗುರುತಿಸಲು ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆ ಕೇಂದ್ರೀಕರಿಸುವಂತೆ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸಚಿವರು ಸೂಚಿಸಿದರು.

ಬೀಜಿಂಗ್‌ನಲ್ಲಿ ಬಿಗಿ ನಿರ್ಬಂಧ

ಬೀಜಿಂಗ್ (ಎಪಿ): ಚೀನಾ ರಾಜಧಾನಿ ಬೀಜಿಂಗ್‌ನ ಗಾಂಗ್ಝಿ ಜಿಲ್ಲೆಯಲ್ಲಿ ಕೋವಿಡ್ ಸೋಂಕು ಸ್ಫೋಟಗೊಂಡ ಹಿನ್ನೆಲೆಯಲ್ಲಿ ಇಲ್ಲಿನ ಶಾಲೆಗಳ ಭೌತಿಕ ತರಗತಿಗಳನ್ನು ಸ್ಥಗಿತಗೊಳಿಸಿ ಆನ್‌ಲೈನ್ ತರಗತಿ ಆರಂಭಿಸಲಾಗಿದೆ.

ಇಲ್ಲಿನ ಹೆವೆನ್ ಸೂಪರ್‌ಮಾರ್ಕೆಟ್ ಕ್ಲಬ್‌ನಲ್ಲಿ ಒಟ್ಟು 166 ಕೊರೊನಾ ಪ್ರಕರಣಗಳು ಪತ್ತೆಯಾಗಿವೆ. ಈ ಬೆನ್ನಲ್ಲೇ ಎಚ್ಚೆತ್ತುಕೊಂಡಿರುವ ಸ್ಥಳೀಯ ಆಡಳಿತ, ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿಸಿದೆ.

ಕೊರೊನಾ ಬಗ್ಗೆ ಶೂನ್ಯಸಹಿಷ್ಣುತೆ ಅಳವಡಿಸಕೊಂಡಿರುವ ಚೀನಾ ಸಾಮೂಹಿಕ ಪರೀಕ್ಷೆ, ಕ್ವಾರಂಟೈನ್‌ಗೆ ಆದ್ಯತೆಯನ್ನು ಮುಂದುವರಿಸಿದೆ. ಈ ಮಧ್ಯೆ, ಶಾಂಘೈನಲ್ಲಿ ಲಾಕ್‌ಡೌನ್ ನಿರ್ಬಂಧಗಳು ಕೊನೆಗೊಂಡಿದ್ದರೂ, 2.20 ಲಕ್ಷ ಜನರು ಈಗಲೂ ನಿರ್ಬಂಧದ ಅಡಿಯಲ್ಲೇ ಬದುಕು ಸಾಗಿಸಿದ್ದಾರೆ.

‘ರಷ್ಯಾಕ್ಕೆ ಡಾನ್‌ಬಾಸ್ ನಿರ್ಣಾಯಕ’

ಕೀವ್ (ಎಪಿ): ಉಕ್ರೇನ್‌ನ ಪ್ರಮುಖ ಕೈಗಾರಿಕಾ ನಗರವಾಗಿರುವ ಡಾನ್‌ಬಾಸ್ ಮೇಲೆ ನಿರಂತರ ದಾಳಿ ನಡೆಸುತ್ತಿರುವ ರಷ್ಯಾ ನಿಧಾನವಾಗಿ ಅದನ್ನು ತನ್ನ ವಶಕ್ಕೆ ಪಡೆಯುವ ಸನಿಹದಲ್ಲಿದೆ. ನಾಲ್ಕನೇ ತಿಂಗಳಿಗೆ ವಿಸ್ತರಣೆಗೊಂಡಿರುವ ಯುದ್ಧದಲ್ಲಿ ರಷ್ಯಾಕ್ಕೆ ಲಭಿಸಿದ ಮಹತ್ವದ ಹಿಡಿತ ಇದು ಎಂದು ರಷ್ಯಾ ಸೇನೆಯ ಬಗ್ಗೆ ತಿಳಿದುಕೊಂಡಿರುವ ತಜ್ಞರು ಹೇಳಿದ್ದಾರೆ.

ಡಾನ್‌ಬಸ್ ನಗರ ಉಕ್ರೇನ್ ಕೈಬಿಟ್ಟು ಹೋದರೆ ರಷ್ಯಾಕ್ಕೆ ದೊರೆತ ಬಹುದೊಡ್ಡ ವಿಜಯ ಮಾತ್ರವಲ್ಲ, ಉಕ್ರೇನ್‌ನ ಸೇನಾ ಶಕ್ತಿಯೇ ಕುಸಿಯುವಂತಹ ಬೆಳವಣಿಗೆಯಾಗಲಿದೆ. ಕೀವ್ ನಗರವನ್ನು ಸಹ ತನ್ನ ವಶಕ್ಕೆ ಪಡೆಯುವುದಕ್ಕೆ ರಷ್ಯಾಕ್ಕೆ ಇದು ದಾರಿ ಮಾಡಿಕೊಡಲಿದೆ ಎಂದು ಲಂಡನ್‌ನ ಚತಂ ಹೌಸ್‌ನ ರಷ್ಯಾ ಸೇನಾ ತಜ್ಞ ಕೈರ್ ಗಿಲ್ಸ್ ಹೇಳಿದ್ದಾರೆ.

ಯುದ್ಧದ ಆರಂಭದಲ್ಲಿ ಸೂಕ್ತ ಯೋಜನೆಯಿಲ್ಲದೆ ಕೀವ್ ಮತ್ತು ಹಾರ್ಕಿವ್‌ನಲ್ಲಿ ರಷ್ಯಾ ಹಿನ್ನಡೆ ಅನುಭವಿಸಿತು. ಬಳಿಕ ಡಾನ್‌ಬಾಸ್‌ನತ್ತ ಗಮನ ಕೇಂದ್ರೀಕರಿಸಿತು. ಮೊದಲ ತಪ್ಪುಗಳಿಂದ ಪಾಠ ಕಲಿತ ರಷ್ಯಾ ಎಚ್ಚರಿಕೆಯಿಂದ ಹೆಜ್ಜೆ ಇಟ್ಟಿತು. ಹೀಗಾಗಿ ಡಾನ್‌ಬಾಸ್ ಪ್ರದೇಶದಲ್ಲಿ ಉಕ್ರೇನ್ ಪಡೆಯನ್ನು ಮಣಿಸುತ್ತ ರಷ್ಯಾ ಮೇಲುಗೈ ಸಾಧಿಸುತ್ತಿದೆ ಎಂದರು.

ಸಂಕ್ಷಿಪ್ತ ಸುದ್ದಿ

ಮಾಜಿ ಆಟಗಾರರ ಪಿಂಚಣಿ ಹೆಚ್ಚಳ

ನವದೆಹಲಿ (ಪಿಟಿಐ): ಐಪಿಎಲ್ ಪ್ರಸಾರ ಹಕ್ಕುಗಳ ಮಾರಾಟದಲ್ಲಿ ಭರ್ಜರಿ ಹಣ ಗಳಿಸಿದ ದಿನದಂದೇ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ), ಮಾಜಿ ಕ್ರಿಕೆಟಿಗರು ಮತ್ತು ಅಂಪೈರ್‌ಗಳಿಗೆ ಶುಭಸುದ್ದಿ ನೀಡಿದೆ.

ಮಾಜಿ ಆಟಗಾರರ ತಿಂಗಳ ಪಿಂಚಣಿಯನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಿದೆ. ಪ್ರಥಮ ದರ್ಜೆ ಪಂದ್ಯವನ್ನಾಡಿದ ಮಾಜಿ ಆಟಗಾರರಿಗೆ ನೀಡುತ್ತಿದ್ದ ಪಿಂಚಣಿಯನ್ನು ₹ 15 ಸಾವಿರದಿಂದ ₹ 30 ಸಾವಿರಕ್ಕೆ ಏರಿಕೆ ಮಾಡಿದೆ.

ಪ್ರತಿ ತಿಂಗಳು ₹ 37,500 ಪಿಂಚಣಿ ಪಡೆಯುತ್ತಿದ್ದ ಟೆಸ್ಟ್ ತಂಡದ ಮಾಜಿ ಆಟಗಾರರು ಇನ್ನು ₹ 60 ಸಾವಿರ ಹಾಗೂ ₹ 50 ಸಾವಿರ ಪಡೆಯುತ್ತಿದ್ದವರು ₹ 70 ಸಾವಿರ ಪಡೆಯಲಿದ್ದಾರೆ.

ರಾಷ್ಟ್ರೀಯ ಮಹಿಳಾ ತಂಡವನ್ನು ಪ್ರತಿನಿಧಿಸಿದ್ದ ಆಟಗಾರ್ತಿಯರು ₹ 30 ಸಾವಿರದ ಬದಲು ₹ 52,500 ಪಡೆಯಲಿದ್ದಾರೆ. 2003ಕ್ಕೂ ಮುನ್ನ ನಿವೃತ್ತಿಯಾಗಿದ್ದ ಪ್ರಥಮ ದರ್ಜೆ ಕ್ರಿಕೆಟ್ ಆಟಗಾರರು ₹ 22,500 ರ ಬದಲು ₹ 45 ಸಾವಿರ ಗಳಿಸಲಿದ್ದಾರೆ.

ಅಥ್ಲೀಟ್ ಹರಿಚಂದ್ ನಿಧನ

ನವದೆಹಲಿ (ಪಿಟಿಐ): ಎರಡು ಬಾರಿಯ ಒಲಿಂಪಿಯನ್ ಅಥ್ಲೀಟ್, ದೂರ ಅಂತರದ ಓಟಗಾರ ಹರಿಚಂದ್ (69) ಭಾನುವಾರ ಸಂಜೆ ನಿಧನರಾದರು.

ಹರಿಚಂದ್ 1976ರ ಮಾಂಟ್ರಿಯಲ್ ಮತ್ತು 1980ರ ಮಾಸ್ಕೊ ಒಲಿಂಪಿಕ್ಸ್‌ಗಳಲ್ಲಿ ದೇಶವನ್ನು ಪ್ರತಿನಿಧಿಸಿದ್ದರು. 1978ರ ಏಷ್ಯನ್ ಗೇಮ್ಸ್‌ನ 5 ಸಾವಿರ ಮತ್ತು 10 ಸಾವಿರ ಮೀ. ವಿಭಾಗಗಳಲ್ಲಿ ಚಿನ್ನದ ಪದಕ ಜಯಿಸಿದ್ದರು. 1978ರ ಏಷ್ಯಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲೂ ಅವರಿಗೆ ಚಿನ್ನ ಒಲಿದಿತ್ತು.

ದಕ್ಷಿಣ ಆಫ್ರಿಕಾ ವಿರುದ್ಧ 3ನೇ ಟಿ20 ಇಂದು • 'ಮಾಡು ಇಲ್ಲವೇ ಮಡಿ' ಪಂದ್ಯ

ಗೆಲುವಿನ ಒತ್ತಡದಲ್ಲಿ ಭಾರತ

ವಿಶಾಖಪಟ್ಟಣ (ಪಿಟಿಐ): ಸತತ ಎರಡು ಸೋಲುಗಳಿಂದ ಕಂಗೆಟ್ಟಿರುವ ಭಾರತ ತಂಡ, ದಕ್ಷಿಣ ಆಫ್ರಿಕಾ ವಿರುದ್ಧದ ಟಿ20 ಸರಣಿಯ ಮೂರನೇ ಪಂದ್ಯದಲ್ಲಿ ಗೆಲ್ಲಲೇಬೇಕಾದ ಒತ್ತಡದಲ್ಲಿದೆ.

ವಿಶಾಖಪಟ್ಟಣದಲ್ಲಿ ಮಂಗಳವಾರ ನಡೆಯಲಿರುವ ಪಂದ್ಯದಲ್ಲೂ ಮುಗ್ಗರಿಸಿದರೆ ಭಾರತಕ್ಕೆ ತವರಿನಲ್ಲಿ ಸರಣಿ ಸೋಲಿನ ಮುಖಭಂಗ ಎದುರಾಗಲಿದೆ. ಅದರಿಂದ ಪಾರಾಗಲು ಜಯದ ಹಾದಿಗೆ ಮರಳುವುದು ಅನಿವಾರ್ಯ.

ರಿಷಭ್ ಪಂತ್ ಅವರಿಗೆ ಆಕಸ್ಮಿಕವಾಗಿ ನಾಯಕತ್ವದ ಹೊಣೆ ದೊರೆತಿದೆಯಾದರೂ, ಅದನ್ನು ಸದುಪಯೋಗಪಡಿಸಿಕೊಳ್ಳಲು ವಿಫಲರಾಗಿದ್ದಾರೆ. ಭಾರತ ತಂಡದ ಭವಿಷ್ಯದ ನಾಯಕನೆಂದೇ ಹೇಳಲಾಗುತ್ತಿರುವ ಈ ವಿಕೆಟ್‌ಕೀಪರ್ –ಬ್ಯಾಟರ್ ಅತಿಯಾದ ಒತ್ತಡದಲ್ಲಿದ್ದಾರೆ. ತಾವು ಫಾರ್ಮ್‌ಗೆ ಮರಳುವ ಜತೆಯಲ್ಲೇ, ತಂಡವನ್ನು ಗೆಲುವಿನತ್ತ ಮುನ್ನಡೆಸುವ ಹೊಣೆ ಅವರ ಮೇಲಿದೆ.

ಮೊದಲ ಪಂದ್ಯದಲ್ಲಿ ಭಾರತ ಬೌಲಿಂಗ್‌ನಲ್ಲಿ ಎಡವಿದ್ದರೆ, ಎರಡನೇ ಪಂದ್ಯದಲ್ಲಿ ಬ್ಯಾಟಿಂಗ್‌ನಲ್ಲಿ ವೈಫಲ್ಯ ಅನುಭವಿಸಿತ್ತು. ಆದ್ದರಿಂದ ಜಯ ಪಡೆಯಬೇಕಾದರೆ ಎರಡೂ ವಿಭಾಗಗಳಲ್ಲಿ ಸಾಕಷ್ಟು ಸುಧಾರಣೆ ಅಗತ್ಯ.

ಇಶಾನ್ ಕಿಶನ್ ಉತ್ತಮವಾಗಿ ಆಡುತ್ತಿದ್ದರೂ, ಇನ್ನೊಬ್ಬ ಆರಂಭಿಕ ಬ್ಯಾಟರ್ ಋತುರಾಜ್ ಗಾಯಕವಾಡ್ (23 ಮತ್ತು 1) ನಿರಾಸೆ ಉಂಟುಮಾಡಿದ್ದಾರೆ. ದಕ್ಷಿಣ ಆಫ್ರಿಕಾದ ವೇಗದ ಬೌಲಿಂಗ್ ದಾಳಿಯನ್ನು ಎದುರಿಸುವ ಕೆಚ್ಚು ಅವರು ತೋರಿಸಿಲ್ಲ. ಶ್ರೇಯಸ್ ಅಯ್ಯರ್, ಹಾರ್ದಿಕ್ ಪಾಂಡ್ಯ ಅವರಿಂದಲೂ ನಿರೀಕ್ಷಿತ ಆಟ ಮೂಡಿಬಂದಿಲ್ಲ.

ಕೈಕೊಟ್ಟ ಸ್ಪಿನ್ನರ್‌ಗಳು: ಭಾರತ ತಂಡದ ಸ್ಪಿನ್ನರ್‌ಗಳು ಪ್ರಭಾವಿ ಎನಿಸಿಲ್ಲ. ಯಜುವೇಂದ್ರ ಚಾಹಲ್ ಮತ್ತು ಅಕ್ಷರ್ ಪಟೇಲ್ ಮೊದಲ ಎರಡು ಪಂದ್ಯಗಳಲ್ಲಿ ಕ್ರಮವಾಗಿ 75 (6 ಓವರ್‌ಗಳಲ್ಲಿ) ಹಾಗೂ 59 (5 ಓವರ್) ರನ್‌ಗಳನ್ನು ಬಿಟ್ಟುಕೊಟ್ಟಿದ್ದಾರೆ. ಇವರಲ್ಲಿ ಒಬ್ಬರನ್ನು ಕೈಬಿಟ್ಟು, ಲೆಗ್ ಸ್ಪಿನ್ನರ್ ರವಿ ಬಿಷ್ಣೋಯಿ ಅಥವಾ ಆಲ್‌ರೌಂಡರ್ ವೆಂಕಟೇಶ್ ಅಯ್ಯರ್‌ಗೆ ಅವಕಾಶ ನೀಡಲಾಗುವುದೇ ಎಂಬುದನ್ನು ಕಾದುನೋಡಬೇಕು.

ಆತ್ಮವಿಶ್ವಾಸದಲ್ಲಿ ಪ್ರವಾಸಿ ತಂಡ: ಭಾರತ ತನ್ನ ತಪ್ಪುಗಳನ್ನು ತಿದ್ದಿಕೊಳ್ಳುವ ಪ್ರಯತ್ನದಲ್ಲಿದ್ದರೆ, ಮತ್ತೊಂದೆಡೆ ಪ್ರವಾಸಿ ತಂಡ ಯಾವುದೇ ಒತ್ತಡವಿಲ್ಲದೆ ಕಣಕ್ಕಿಳಿಯಲಿದೆ.

ಈಗಾಗಲೇ ತಮ್ಮ ತಾಕತ್ತು ತೋರಿಸಿರುವ ಡೇವಿಡ್ ಮಿಲ್ಲರ್, ರಸಿ ವ್ಯಾನ್ ಡರ್ ಡಸೆ ಮತ್ತು ಹೆನ್ರಿಚ್ ಕ್ಲಾಸೆನ್ ಉತ್ತಮ ಫಾರ್ಮ್ ಮುಂದುವರಿಸುವ ವಿಶ್ವಾಸದಲ್ಲಿದ್ದಾರೆ. ಭಾನುವಾರ ನಡೆದ ಪಂದ್ಯದಲ್ಲಿ ಕ್ಲಾಸೆನ್ 81 ರನ್ ಗಳಿಸಿ, ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದರು. ನವದೆಹಲಿಯಲ್ಲಿ 200 ರನ್‌ಗಳಿಗೂ ಅಧಿಕ ಗುರಿ ಬೆನ್ನಟ್ಟಿ ಗೆದ್ದಿದ್ದ ಪ್ರವಾಸಿ ತಂಡ, ಎರಡನೇ ಪಂದ್ಯದಲ್ಲೂ ಚೇಸಿಂಗ್‌ನಲ್ಲಿ ಯಶ ಕಂಡಿತ್ತು.

ಮುಖ್ಯಾಂಶಗಳು
- 2–0 ಮುನ್ನಡೆಯಲ್ಲಿ ದಕ್ಷಿಣ ಆಫ್ರಿಕಾ
- ಪ್ರವಾಸಿ ತಂಡಕ್ಕೆ ಸರಣಿ ಗೆಲ್ಲುವ ತವಕ
- ಭಾರತ ತಂಡದಲ್ಲಿ ಬದಲಾವಣೆ ಸಾಧ್ಯತೆ

ಭಾರತ ತಂಡದ ಕೋಚ್ ರಾಹುಲ್ ದ್ರಾವಿಡ್ ಹಾಗೂ ನಾಯಕ ರಿಷಭ್ ಪಂತ್

ತಂಡಗಳು

ಭಾರತ: ರಿಷಭ್ ಪಂತ್ (ನಾಯಕ–ವಿಕೆಟ್‌ಕೀಪರ್), ಋತುರಾಜ್ ಗಾಯಕವಾಡ್, ಇಶಾನ್ ಕಿಶನ್, ದೀಪಕ್ ಹೂಡಾ, ಶ್ರೇಯಸ್ ಅಯ್ಯರ್, ದಿನೇಶ್ ಕಾರ್ತಿಕ್ ಹಾರ್ದಿಕ್ ಪಾಂಡ್ಯ, ವೆಂಕಟೇಶ್ ಅಯ್ಯರ್, ಯಜುವೇಂದ್ರ ಚಾಹಲ್, ಅಕ್ಷರ್ ಪಟೇಲ್, ರವಿ ಬಿಷ್ಣೋಯಿ, ಭುವನೇಶ್ವರ್ ಕುಮಾರ್, ಹರ್ಷಲ್ ಪಟೇಲ್, ಆವೇಶ್ ಖಾನ್, ಅರ್ಷದೀಪ್ ಸಿಂಗ್, ಉಮ್ರಾನ್ ಮಲಿಕ್

ದಕ್ಷಿಣ ಆಫ್ರಿಕಾ: ತೆಂಬಾ ಬವುಮಾ (ನಾಯಕ), ಕ್ವಿಂಟನ್ ಡಿ ಕಾಕ್ (ವಿಕೆಟ್‌ಕೀಪರ್), ರೀಜಾ ಹೆನ್ರಿಕ್ಸ್, ಹೆನ್ರಿಚ್ ಕ್ಲಾಸೆನ್, ಕೇಶವ್ ಮಹಾರಾಜ್, ಡೇವಿಡ್ ಮಿಲ್ಲರ್, ಲುಂಗಿ ಗಿಡಿ, ಎನ್ರಿಚ್ ನಾರ್ಕಿಯಾ, ವೇಯ್ನ್ ಪಾರ್ನೆಲ್, ಡ್ವೇನ್ ಪ್ರಿಟೋರಿಯಸ್, ಕಗಿಸೊ ರಬಾಡ, ತಬ್ರೇಜ್ ಶಮ್ಸಿ, ಟ್ರಿಸ್ಟನ್ ಸ್ಟಬ್ಸ್, ರಸಿ ವ್ಯಾನ್ ಡರ್ ಡಸೆ, ಮಾರ್ಕೊ ಜಾನ್ಸೆನ್.

ಪಂದ್ಯ ಆರಂಭ: ರಾತ್ರಿ 7

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್

₹46 ಸಾವಿರ ಕೋಟಿ ಗಳಿಕೆ

ಐಪಿಎಲ್ ಪ್ರಸಾರ ಹಕ್ಕು ಹರಾಜು; ಬಿಸಿಸಿಐಗೆ ಬಂಪರ್

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಟಿ.ವಿ. ಮತ್ತು ಡಿಜಿಟಲ್ ಪ್ರಸಾರ ಹಕ್ಕುಗಳ ಹರಾಜು ಪ್ರಕ್ರಿಯೆ ಮೂರನೇ ದಿನಕ್ಕೆ ಮುಂದುವರಿದಿದೆ. ಮೊದಲ ಎರಡು ದಿನಗಳಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ₹ 46 ಸಾವಿರ ಕೋಟಿ ಗಳಿಕೆ ಮಾಡಿದೆ.

ಎರಡನೇ ದಿನವಾದ ಸೋಮವಾರ ಟಿ.ವಿ ಪ್ರಸಾರ ಹಕ್ಕು (ಪ್ಯಾಕೇಜ್ ಎ) ಮತ್ತು ಡಿಜಿಟಲ್ ಹಕ್ಕು (ಪ್ಯಾಕೇಜ್ ಬಿ) ಹರಾಜು ಪ್ರಕ್ರಿಯೆ ಪೂರ್ಣಗೊಂಡಿದೆ. ಈ ಎರಡು ಪ್ಯಾಕೇಜ್‌ಗಳು ಒಟ್ಟು ₹ 44,075 ಕೋಟಿಗೆ ಹರಾಜಾದವು.

ತುರುಸಿನ ಪೈಪೋಟಿ ಬಳಿಕ ಟಿವಿ ಹಕ್ಕನ್ನು ವಾಲ್ಟ್ ಡಿಸ್ನಿ (ಸ್ಟಾರ್) ತನ್ನದಾಗಿಸಿಕೊಂಡಿತು. ಡಿಜಿಟಲ್ ಹಕ್ಕು ವಯಾಕಾಮ್ 18 ಪಾಲಾಯಿತು.

ಪ್ಯಾಕೇಜ್ ಸಿ (ಪ್ರತಿ ಋತುವಿನಲ್ಲಿ ಆಯ್ದ 18 ಪಂದ್ಯಗಳ ಹಕ್ಕು) ಹರಾಜು ಪ್ರಕ್ರಿಯೆ ಮಂಗಳವಾರ ಮುಂದುವರಿಯಲಿದೆ. ಸೋಮವಾರದ ಅಂತ್ಯಕ್ಕೆ ಈ ಪ್ಯಾಕೇಜ್‌ಗೆ ₹ 2 ಸಾವಿರ ಕೋಟಿ ಬಿಡ್ ವ್ಯಕ್ತವಾಗಿದೆ. ಆದ್ದರಿಂದ ಒಟ್ಟಾರೆಯಾಗಿ ಬಿಸಿಸಿಐ ಗಳಿಕೆ ₹ 46 ಸಾವಿರ ಕೋಟಿ ತಲುಪಿದೆ.

ಡಿಜಿಟಲ್; ಪಂದ್ಯಕ್ಕೆ ₹ 50 ಕೋಟಿ

ಟಿ.ವಿ ಹಕ್ಕು ಪ್ರತಿ ಪಂದ್ಯಕ್ಕೆ ₹ 57.5 ಕೋಟಿ ತಂದುಕೊಟ್ಟರೆ, ಡಿಜಿಟಲ್ ಹಕ್ಕು ₹ 50 ಕೋಟಿಗೆ ಮಾರಾಟ ಆಗಿದೆ. ಡಿಜಿಟಲ್‌ನಲ್ಲಿ ನಿರೀಕ್ಷೆಗೂ ಮೀರಿದ ಮೌಲ್ಯ ದೊರೆತಿದೆ.

'ಡಿಜಿಟಲ್‌ನಲ್ಲಿ ಪ್ರತಿ ಪಂದ್ಯಕ್ಕೆ ₹ 33 ಕೋಟಿ ಮೂಲಬೆಲೆ ನಿಗದಿಪಡಿಸಲಾಗಿತ್ತು. ಇದು ಅಚ್ಚರಿಯ ರೀತಿಯಲ್ಲಿ ₹ 50 ಕೋಟಿಗೆ ಹೆಚ್ಚಿತು. ಅಂದರೆ ನಮ್ಮ ನಿರೀಕ್ಷೆಗಿಂತ ಶೇ 51 ರಷ್ಟು ಅಧಿಕ ಮೊತ್ತಕ್ಕೆ ಮಾರಾಟವಾಗಿದೆ' ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದರು.

ಮುಖ್ಯಾಂಶಗಳು
- ಒಟ್ಟು ಮೌಲ್ಯ ₹ 50 ಸಾವಿರ ಕೋಟಿ ದಾಟುವ ನಿರೀಕ್ಷೆ
- ಹರಾಜು ಪ್ರಕ್ರಿಯೆ ಮೂರನೇ ದಿನಕ್ಕೆ ಮುಂದುವರಿಕೆ

2018 ರಲ್ಲಿ ನಡೆಸಿದ್ದ ಹರಾಜು ಪ್ರಕ್ರಿಯೆ ಮಂಡಳಿಗೆ ₹ 16,347 ಕೋಟಿ ತಂದುಕೊಟ್ಟಿತ್ತು. ಅದಕ್ಕೆ ಹೋಲಿಸಿದರೆ, ಈ ಬಾರಿ ಮೂರು ಪಟ್ಟು ಅಧಿಕ ಹಣ ದೊರೆತಿದೆ.

'ಎರಡನೇ ದಿನದ ಇ–ಹರಾಜು ಪ್ರಕ್ರಿಯೆಯನ್ನು ಸೋಮವಾರ ಸಂಜೆ 6ಕ್ಕೆ ನಿಲ್ಲಿಸಲಾಯಿತು. ಈ ವೇಳೆ ಪ್ಯಾಕೇಜ್ ಸಿ ಹರಾಜು ಪ್ರಕ್ರಿಯೆ ಚಾಲ್ತಿಯಲ್ಲಿತ್ತು. ಪ್ಲೇ ಆಫ್, ಫೈನಲ್ ಒಳಗೊಂಡಂತೆ ಆಯ್ದ 98 ಪಂದ್ಯಗಳ ಹಕ್ಕುಗಳು ಇದರಲ್ಲಿ ಸೇರಿವೆ. ಸಿ ಪ್ಯಾಕೇಜ್ ಪೂರ್ಣಗೊಂಡ ಬಳಿಕ, ಡಿ ಪ್ಯಾಕೇಜ್ ಹರಾಜು ನಡೆಯಲಿದೆ. ಆ ಬಳಿಕ ಸ್ಪಷ್ಟ ಚಿತ್ರಣ ಹೊರಬೀಳಲಿದೆ' ಎಂದು ಬಿಸಿಸಿಐ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಟಿ.ವಿ ಪ್ರಸಾರ ಹಕ್ಕು ಪಡೆಯಲು ಸೋನಿ ಮತ್ತು ವಾಲ್ಟ್ ಡಿಸ್ನಿ (ಸ್ಟಾರ್) ನಡುವೆ ಜಿದ್ದಾಜಿದ್ದಿನ ಪೈಪೋಟಿ ನಡೆಯಿತು. ಡಿಜಿಟಲ್ ಹಕ್ಕು ತನ್ನದಾಗಿಸಿಕೊಳ್ಳಲು ವಯಾಕಾಮ್ 18, ಇತರ ನಾಲ್ಕು ಸಂಸ್ಥೆಗಳೊಡನೆ ಪೈಪೋಟಿ ನಡೆಸಿತ್ತು.

ಬಹುತುಳೆ, ಕೋಟಕ್ ಸಹಾಯಕ ಸಿಬ್ಬಂದಿ

ನವದೆಹಲಿ (ಪಿಟಿಐ): ಸೀತಾಂಶು ಕೋಟಕ್, ಸಾಯಿರಾಜ್ ಬಹುತುಳೆ ಮತ್ತು ಮುನೀಷ್ ಬಾಲಿ ಅವರನ್ನು ಐರ್ಲೆಂಡ್ ಪ್ರವಾಸಕ್ಕೆ ತೆರಳಲಿರುವ ಭಾರತ ತಂಡಕ್ಕೆ ಕ್ರಮವಾಗಿ ಬ್ಯಾಟಿಂಗ್, ಬೌಲಿಂಗ್ ಮತ್ತು ಫೀಲ್ಡಿಂಗ್ ಕೋಚ್ ಆಗಿ ನೇಮಿಸಲಾಗಿದೆ.

ಈ ತಿಂಗಳ ಕೊನೆಯಲ್ಲಿ ಐರ್ಲೆಂಡ್ ಪ್ರವಾಸಕ್ಕೆ ತೆರಳಲಿರುವ ಭಾರತ ಕ್ರಿಕೆಟ್ ತಂಡದ ಕೋಚ್ ಹುದ್ದೆಯನ್ನು ಎನ್‌ಸಿಎ ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್ ಅವರಿಗೆ ಈಗಾಗಲೇ ವಹಿಸಲಾಗಿದೆ.

ಭಾರತ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಮತ್ತು ಇತರ ಸಹಾಯಕ ಸಿಬ್ಬಂದಿ, ಟೆಸ್ಟ್ ತಂಡದ ಜತೆ ಇಂಗ್ಲೆಂಡ್ ಪ್ರವಾಸಕ್ಕೆ ತೆರಳಲಿದ್ದಾರೆ. ಇದೇ ಅವಧಿಯಲ್ಲಿ ಐರ್ಲೆಂಡ್ ಪ್ರವಾಸ ಕೂಡಾ ಆಯೋಜನೆಯಾಗಿರುವುದರಿಂದ ಬಿಸಿಸಿಐ ಈ ತೀರ್ಮಾನ ತೆಗೆದುಕೊಂಡಿದೆ.

ಐರ್ಲೆಂಡ್ ಪ್ರವಾಸದಲ್ಲಿ ಭಾರತ ತಂಡ ಜೂನ್ 26 ಮತ್ತು 28 ರಂದು ಎರಡು ಟಿ20 ಪಂದ್ಯಗಳನ್ನು ಆಡಲಿದೆ.

ಭಾರತ (ನೀಲಿ ಪೋಷಾಕು) ಮತ್ತು ಬಹರೇನ್ ಆಟಗಾರರ ನಡುವಣ ಪೈಪೋಟಿ

ಬ್ಯಾಸ್ಕೆಟ್‌ಬಾಲ್: ಭಾರತ ಯುವ ತಂಡಕ್ಕೆ ಜಯ

ಬೆಂಗಳೂರು: ಕುಶಾಲ್ ಸಿಂಗ್ ಗಳಿಸಿದ 22 ಪಾಯಿಂಟ್ಸ್ ಬಲದಿಂದ ಭಾರತ 16 ವರ್ಷದೊಳಗಿನವರ ಬ್ಯಾಸ್ಕೆಟ್‌ಬಾಲ್ ತಂಡವು ಫಿಬಾ 16 ವರ್ಷದೊಳಗಿನವರ ಏಷ್ಯಾ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿತು.

ಕತಾರ್‌ನ ದೋಹಾದಲ್ಲಿ ನಡೆಯುತ್ತಿರುವ ಟೂರ್ನಿಯ ಗುಂಪು ಹಂತದ ಮೊದಲ ಪಂದ್ಯದಲ್ಲಿ ಭಾರತ 80–41ರಿಂದ ಬಹರೇನ್ ತಂಡವನ್ನು ಪರಾಭವಗೊಳಿಸಿತು. ಕುಶಾಲ್ ಸಿಂಗ್ ಅವರೊಂದಿಗೆ ನಾಯಕ ಲೋಕೇಂದ್ರ ಸಿಂಗ್ ಮತ್ತು ಜೈದೀಪ್ ರಾಥೋಡ್ (ತಲಾ 18 ಪಾಯಿಂಟ್ಸ್) ವಿಜೇತ ತಂಡದ ಪರ ಮಿಂಚಿದರು.

ಬಹರೇನ್‌ನ ಹಸನ್ ಫರೀಬ್ 15 ಪಾಯಿಂಟ್ಸ್ ಕಲೆಹಾಕಿದರು.

ಭಾನುವಾರ ನಡೆದ ಪಂದ್ಯದಲ್ಲಿ ಭಾರತ 47–95ರಿಂದ ಆಸ್ಟ್ರೇಲಿಯಾ ಎದುರು ಸೋತಿತ್ತು.

ಟ್ರಿಪಲ್ ಜಂಪ್: ಐಶ್ವರ್ಯಾ ದಾಖಲೆ

ಚೆನ್ನೈ (ಪಿಟಿಐ): ಕರ್ನಾಟಕದ ಐಶ್ವರ್ಯಾ ಬಾಬು ಅವರು ಇಲ್ಲಿ ನಡೆಯುತ್ತಿರುವ ಅಂತರ ರಾಜ್ಯ ಅಥ್ಲೆಟಿಕ್ ಕೂಟದ ಟ್ರಿಪಲ್ ಜಂಪ್‌ನಲ್ಲಿ ನೂತನ ರಾಷ್ಟ್ರೀಯ ದಾಖಲೆ ಸ್ಥಾಪಿಸಿದರು.

ಐಶ್ವರ್ಯ ಬಾಬು

ಸೋಮವಾರ ನಡೆದ ಸ್ಪರ್ಧೆಯಲ್ಲಿ ಅವರು 14.14 ಮೀ. ಸಾಧನೆ ಮಾಡಿ ಚಿನ್ನ ಜಯಿಸಿದರು. ಅಲ್ಲದೆ ಕಾಮನ್‌ವೆಲ್ತ್ ಗೇಮ್ಸ್‌ಗೆ ಅರ್ಹತೆ ಗಳಿಸಿದರು. ಮಯೂಖಾ ಜಾನಿ 2011ರಲ್ಲಿ ಸ್ಥಾಪಿಸಿದ್ದ ದಾಖಲೆಯನ್ನು (14.11 ಮೀ.) ಮುರಿದರು.

ಐಶ್ವರ್ಯಾ ಅವರು ಭಾನುವಾರ ಲಾಂಗ್‌ಜಂಪ್‌ನಲ್ಲಿ 6.73 ಮೀ. ಜಿಗಿದು ಭಾರತದ ಎರಡನೇ ಅತ್ಯುತ್ತಮ ಸಾಧನೆ ಮಾಡಿದ್ದರು. ಲಾಂಗ್‌ಜಂಪ್ ದಾಖಲೆ ಅಂಜು ಬಾಬಿ ಜಾರ್ಜ್ (6.83) ಹೆಸರಿನಲ್ಲಿದೆ.

ಕರ್ನಾಟಕ ರಿಲೇ ತಂಡಕ್ಕೆ ಬೆಳ್ಳಿ: ರಾಜ್ಯದ 4X400 ಮೀಟರ್ ಮಿಶ್ರ ರಿಲೇ ತಂಡವು ಬೆಳ್ಳಿ ಪದಕಕ್ಕೆ ಮುತ್ತಿಟ್ಟಿತು. ಎಂ.ಸಿ. ಕುರಿಯನ್, ನಿಹಾಲ್ ಜೋಯೆಲ್, ಲಿಖಿತಾ ಎಂ. ಮತ್ತು ಇಂಚರ ಎನ್.ಎಸ್ ಅವರಿದ್ದ ತಂಡವು 3 ನಿ.22.45 ಸೆಕೆಂಡು ಗುರಿ ಮುಟ್ಟಿತು. ಇಂಡಿಯಾ 'ಬಿ' ತಂಡವು ಈ ವಿಭಾಗದಲ್ಲಿ ಚಿನ್ನ (3 ನಿ.18.84 ಸೆ.) ಚಿನ್ನ ತನ್ನದಾಗಿಸಿಕೊಂಡಿತು.

ರಣಜಿ ಸೆಮಿಫೈನಲ್ಸ್: ಬಂಗಾಳ– ಮಧ್ಯಪ್ರದೇಶ ಹಣಾಹಣಿ

ಮುಂಬೈಗೆ ಉತ್ತರ ಪ್ರದೇಶ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: 41 ಬಾರಿಯ ಚಾಂಪಿಯನ್ ಮುಂಬೈ ತಂಡವು ರಣಜಿ ಟ್ರೋಫಿ ಟೂರ್ನಿಯ ಸೆಮಿಫೈನಲ್‌ನಲ್ಲಿ ಮಂಗಳವಾರ ಇಲ್ಲಿ ಉತ್ತರ ಪ್ರದೇಶ ತಂಡಕ್ಕೆ ಮುಖಾಮುಖಿಯಾಗಲಿದೆ.

ಉತ್ತಮ ಲಯದಲ್ಲಿರುವ ಪೃಥ್ವಿ ಶಾ ನಾಯಕತ್ವದ ಮುಂಬೈ ತಂಡದ ಬ್ಯಾಟರ್‌ಗಳು, ಉತ್ತರ ಪ್ರದೇಶ ಬೌಲರ್‌ಗಳಿಗೆ ಸವಾಲಾಗಲಿದ್ದಾರೆ.

ಮುಂಬೈ ತಂಡವು ಎಂಟರಘಟ್ಟದಲ್ಲಿ ವಿಶ್ವದಾಖಲೆಯ 725 ರನ್‌ಗಳ ಅಂತರದಿಂದ ಉತ್ತರಾಖಂಡ ತಂಡವನ್ನು ಮಣಿಸಿತ್ತು. ಉತ್ತರ ಪ್ರದೇಶ ತಂಡವು ಕರ್ನಾಟಕಕ್ಕೆ ಐದು ವಿಕೆಟ್‌ಗಳಿಂದ ಸೋಲುಣಿಸಿತ್ತು.

ಮುಂಬೈ ತಂಡಕ್ಕೆ ಸುವೇದ್ ಪಾರ್ಕರ್ ಮತ್ತು ಪೃಥ್ವಿ ಶಾ ಬ್ಯಾಟಿಂಗ್‌ನ ಬಲವಾಗಿದ್ದಾರೆ.

ಬೆಂಗಳೂರಿನಲ್ಲೇ ನಡೆಯುವ ನಾಲ್ಕರ ಘಟ್ಟದ ಇನ್ನೊಂದು ಪಂದ್ಯದಲ್ಲಿ ಬಂಗಾಳ ತಂಡವು ಮಧ್ಯಪ್ರದೇಶ ತಂಡವನ್ನು ಎದುರಿಸಲಿದೆ.

ಸೆಮಿಫೈನಲ್ ಪಂದ್ಯಗಳು

ಮುಂಬೈ– ಉತ್ತರಪ್ರದೇಶ
ಸ್ಥಳ: ಜಸ್ಟ್ ಕ್ರಿಕೆಟ್ ಮೈದಾನ, ಬೆಂಗಳೂರು

ಬಂಗಾಳ– ಮಧ್ಯಪ್ರದೇಶ
ಸ್ಥಳ: ಕೆಎಸ್‌ಸಿಎ ಕ್ರೀಡಾಂಗಣ ಆಲೂರು (3), ಬೆಂಗಳೂರು

ಪಂದ್ಯಗಳ ಆರಂಭ: ಬೆಳಿಗ್ಗೆ 9.30

ಆ್ಯಂಡರ್ಸನ್ 650 ವಿಕೆಟ್ ಸಾಧನೆ

ನಾಟಿಂಗ್‌ಹ್ಯಾಂ (ಎಎಫ್‌ಪಿ): ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿಹೆಚ್ಚು ವಿಕೆಟ್ ಪಡೆದ ವೇಗದ ಬೌಲರ್ ಎನಿಸಿಕೊಂಡಿರುವ ಇಂಗ್ಲೆಂಡ್‌ನ ಜೇಮ್ಸ್ ಆ್ಯಂಡರ್ಸನ್ ಅವರು 650 ವಿಕೆಟ್‌ಗಳ ಸಾಧನೆ ಮಾಡಿದರು.

ನಾಟಿಂಗ್‌ಹ್ಯಾಂನಲ್ಲಿ ನಡೆಯುತ್ತಿರುವ ನ್ಯೂಜಿಲೆಂಡ್ ವಿರುದ್ಧದ ಎರಡನೇ ಟೆಸ್ಟ್‌ನ ಮೂರನೇ ದಿನವಾದ ಸೋಮವಾರ, ಟಾಮ್ ಲಥಾಮ್ ವಿಕೆಟ್ ಪಡೆದು ಈ ಮೈಲಿಗಲ್ಲು ಸಾಧಿಸಿದರು.

ಟೆಸ್ಟ್‌ನಲ್ಲಿ ಅತಿಹೆಚ್ಚು ವಿಕೆಟ್ ಪಡೆದ ಬೌಲರ್‌ಗಳಲ್ಲಿ ಮುತ್ತಯ್ಯ ಮುರಳೀಧರನ್ (800) ಮತ್ತು ಶೇನ್ ವಾರ್ನ್ (708) ಬಳಿಕ ಮೂರನೇ ಸ್ಥಾನದಲ್ಲಿ ಆ್ಯಂಡರ್‌ಸನ್ ಇದ್ದಾರೆ. ಆದರೆ ವೇಗಿಗಳಲ್ಲಿ ಅವರು ಮೊದಲಿಗರಾಗಿದ್ದಾರೆ.

ಈ ಪಂದ್ಯದಲ್ಲಿ ನ್ಯೂಜಿಲೆಂಡ್ ಮೊದಲ ಇನಿಂಗ್ಸ್‌ನಲ್ಲಿ 14 ರನ್‌ಗಳ ಮುನ್ನಡೆ ಗಳಿಸಿದೆ. ಎರಡನೇ ಇನಿಂಗ್ಸ್‌ನಲ್ಲಿ ಸೋಮವಾರ ಚಹಾ ವಿರಾಮದ ವೇಳೆಗೆ 4 ವಿಕೆಟ್‌ಗೆ 151 ರನ್ ಗಳಿಸಿದ್ದು, ಒಟ್ಟಾರೆ 165 ರನ್‌ಗಳ ಮುನ್ನಡೆಯಲ್ಲಿದೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್ ನ್ಯೂಜಿಲೆಂಡ್ 553. ಇಂಗ್ಲೆಂಡ್ 539 (128.2 ಓವರ್) ಜೋ ರೂಟ್ 176, ಬೆನ್ ಸ್ಟೋಕ್ಸ್ 46, ಬೆನ್ ಫೋಕ್ಸ್ 56, ಟ್ರೆಂಟ್ ಬೌಲ್ಟ್ 106ಕ್ಕೆ 5, ಬ್ರೇಸ್‌ವೆಲ್ 62ಕ್ಕೆ 3) ಎರಡನೇ ಇನಿಂಗ್ಸ್: ನ್ಯೂಜಿಲೆಂಡ್ 4ಕ್ಕೆ 151 (49 ಓವರ್) ವಿಲ್ ಯಂಗ್ 56, ಡೆವೊನ್ ಕಾನ್ವೆ 52, ಜೇಮ್ಸ್ ಆ್ಯಂಡರ್‌ಸನ್ 18ಕ್ಕೆ 1)

ನ್ಯೂಜಿಲೆಂಡ್ ತಂಡದ ಟಾಮ್ ಲಥಾಮ್ ವಿಕೆಟ್ ಪಡೆದ ಜೇಮ್ಸ್ ಆ್ಯಂಡರ್‌ಸನ್ ಅವರನ್ನು ಸಹ ಆಟಗಾರರು ಅಭಿನಂದಿಸಿದರು –ಎಎಫ್‌ಪಿ ಚಿತ್ರ

ರಾಷ್ಟ್ರೀಯ ಜೂನಿಯರ್, ಯೂತ್ ಟಿಟಿ: ಕರ್ನಾಟಕ ತಂಡಗಳು ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳದ ಅಲೆಪ್ಪಿಯಲ್ಲಿ ಇದೇ 17ರಿಂದ 23ರವರೆಗೆ ನಡೆಯಲಿರುವ ರಾಷ್ಟ್ರೀಯ ಜೂನಿಯರ್ ಮತ್ತು ಯೂತ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ತಂಡಗಳನ್ನು ಸೋಮವಾರ ಪ್ರಕಟಿಸಲಾಗಿದೆ.

ತಂಡಗಳು: 17 ವರ್ಷದೊಳಗಿನವರು: ಬಾಲಕಿಯರು: ಸಹನಾ ಮೂರ್ತಿ, ತೃಪ್ತಿ ಪುರೋಹಿತ್, ಕರುಣಾ ಗಜೇಂದ್ರನ್, ಎ.ನಿಹಾರಿಕಾ. ಬಾಲಕರು: ಶ್ರೀಕಾಂತ್ ಕಶ್ಯಪ್, ರೋಹಿತ್ ಶಂಕರ್, ವರುಣ್ ಕಶ್ಯಪ್, ಆಕಾಶ್ ಕೆ.ಜೆ.

19 ವರ್ಷದೊಳಗಿನವರು: ಬಾಲಕಿಯರು: ಯಶಸ್ವಿನಿ ಘೋರ್ಪಡೆ, ಅನರ್ಘ್ಯ ಮಂಜುನಾಥ್, ಅದಿತಿ ಜೋಷಿ, ಎ.ನಿಹಾರಿಕಾ. ಬಾಲಕರು: ಶ್ರೀಕಾಂತ್ ಕಶ್ಯಪ್, ಆಕಾಶ್ ಕೆ.ಜೆ, ರೋಹಿತ್ ಶಂಕರ್, ವರುಣ್ ಕಶ್ಯಪ್. ಅಂಶುಮನ್ ರಾಯ್ ಬಾಲಕಿಯರ ತಂಡಕ್ಕೆ ಕೋಚ್ ಮತ್ತು ಮ್ಯಾನೇಜರ್ ಆಗಿದ್ದಾರೆ. ಅನಿರ್ಬನ್ ತಫತ್‌ದಾರ್ ಬಾಲಕರ ತಂಡಕ್ಕೆ ಕೋಚ್ ಮತ್ತು ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸಲಿದ್ದಾರೆ.

ಸುನಿಲ್ ಚೆಟ್ರಿ

ಫುಟ್‌ಬಾಲ್: ಅಗ್ರಸ್ಥಾನಕ್ಕೆ ಭಾರತ, ಹಾಂಗ್‌ಕಾಂಗ್ ಪೈಪೋಟಿ

ಕೋಲ್ಕತ್ತ (ಪಿಟಿಐ): ಏಷ್ಯನ್ ಕಪ್ ಫುಟ್‌ಬಾಲ್ ಅರ್ಹತಾ ಹಂತದ ಪಂದ್ಯದಲ್ಲಿ ಭಾರತ ತಂಡ ಮಂಗಳವಾರ, ಹಾಂಗ್‌ಕಾಂಗ್ ವಿರುದ್ಧ ಪೈಪೋಟಿ ನಡೆಸಲಿದೆ.

'ಡಿ' ಗುಂಪಿನಲ್ಲಿರುವ ಉಭಯ ತಂಡಗಳಿಗೂ ಇದು ಕೊನೆಯ ಪಂದ್ಯವಾಗಿದೆ. ಎರಡೂ ತಂಡಗಳು ತಲಾ ಎರಡು ಪಂದ್ಯಗಳನ್ನು ಆಡಿದ್ದು, ಆರು ಪಾಯಿಂಟ್ ಹೊಂದಿವೆ. ಆದರೆ ಉತ್ತಮ ಗೋಲು ಸರಾಸರಿಯಲ್ಲಿ ಹಾಂಗ್‌ಕಾಂಗ್ ಅಗ್ರಸ್ಥಾನದಲ್ಲಿದೆ.

ಗುಂಪಿನಲ್ಲಿ ಅಗ್ರಸ್ಥಾನ ಪಡೆಯುವ ತಂಡ ನೇರವಾಗಿ ಮುಂದಿನ ವರ್ಷದ ಏಷ್ಯನ್ ಕಪ್ ಟೂರ್ನಿಗೆ ಅರ್ಹತೆ ಪಡೆದುಕೊಳ್ಳಲಿದೆ. ಈ ಪಂದ್ಯ ಗೆದ್ದು ಸತತ ಎರಡನೇ ಬಾರಿ ಏಷ್ಯನ್ ಕಪ್‌ನಲ್ಲಿ ಆಡುವ ಗುರಿಯನ್ನು ಸುನಿಲ್ ಚೆಟ್ರಿ ಬಳಗ ಹೊಂದಿದೆ.

ಫಿಫಾ ರ‍್ಯಾಂಕಿಂಗ್‌ನಲ್ಲಿ ಹಾಂಕಾಂಗ್ ತಂಡ (147) ಭಾರತಕ್ಕಿಂತ (106) ಕೆಳಗಿನ ಸ್ಥಾನದಲ್ಲಿದೆ. ಆದರೆ ಟೂರ್ನಿಯಲ್ಲಿ ಇದುವರೆಗೆ ಆಕ್ರಮಣಕಾರಿ ಆಟ ಪ್ರದರ್ಶಿಸಿರುವ ಕಾರಣ ಆತಿಥೇಯ ತಂಡಕ್ಕೆ ಕಠಿಣ ಸವಾಲು ಎದುರಾಗುವುದು ಖಚಿತ.